# ವಾಸನಾ (ನೀಳ್ಗತೆ)

ಮೂಲ ಕತೆ: ಬನ್‌ಫೂಲ್‌ರವರ ಬಂಗಾಲಿ ಕತೆಯ ಆಧಾರದಿಂದ



ಸಪ್ನ

-ಪಾ.ವೆಂ. ಆಚಾರ್ಯ

# ವಾಸನಾ

(ಒಂದು ನೀಳ್ಗತೆ)

# ವಾಸನಾ

## (ಒಂದು ನೀಳ್ಗತೆ)

ಪಾ.ವೆಂ. ಆಚಾರ್ಯ

(ಮೂಲ ಕತೆ : "ಬನ್‌ಫೂಲ್"ರವರ ಬಂಗಾಲಿ
ಕತೆಯ ಆಧಾರದಿಂದ)

SINCE 1967 Sapna
ಸಪ್ನ ಬುಕ್ ಹೌಸ್®
3ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು - 560 009
ದೂರವಾಣಿ : 40114455

**VĀSANAA** : Original Book written by Banpool's Bengali Story, translated into Kannada by **P. V. Acharya,** published by **Sapna Book House (P) Ltd.,** R.O. #11, 3rd Main Road, Gandhinagar, Bengaluru - 9. Tel.. 40114455. [K.B. 2428]

**ISBN** : **978-93-87979-04-8**

ಹಕ್ಕುಗಳು : ರಾಧಾಕೃಷ್ಣ ಆಚಾರ್ಯ ಮತ್ತು ಸಹೋದರರು

ಮೊದಲ ಮುದ್ರಣ : ಮೇ 1950
**ಎರಡನೆಯ ಮುದ್ರಣ : ಮೇ 2018**

| | |
|---|---|
| ಪುಟಗಳು : x + 82 = 92 | ಪ್ರತಿಗಳ ಸಂಖ್ಯೆ : 500 |
| ಬೆಲೆ : ₹ 65/- | Paper Used : 18.6 Kg D/D (70 gsm) N.S. Maplitho |
| | Book Size : 1/8th Demy |

ಹಂಚಿಕೆದಾರರು : ಬುಕ್ ಶೆಲ್ಫ್
2ನೇ ಮಹಡಿ, ನಂ. 24, ವೈ. ರಾಮಚಂದ್ರ ರಸ್ತೆ
2ನೇ ಕ್ರಾಸ್, ಗಾಂಧಿನಗರ
ಬೆಂಗಳೂರು–560 009

| ಅಕ್ಷರ ಜೋಡಣೆ | ರಕ್ಷಾಪುಟ ವಿನ್ಯಾಸ | ಮುದ್ರಣ |
|---|---|---|
| ದಿವ್ಯ ಪ್ರಿಂಟ್ರಾನಿಕ್ಸ್ | ವಿಶ್ವನಾಥ ಹೊಸೂರು | ಪ್ರಿಂಟ್ ಫಾಸ್ಟ್ |

# ಓದುವ ಮೊದಲು

●

ಶ್ರೀ ಪಾಡಿಗಾರು ವೆಂಕಟರಮಣಾಚಾರ್ಯ, ಪಿ.ವಿ. ಆಚಾರ್ಯ ಅವರು 1915ರಿಂದ 1992ರ ವರೆಗಿನ ಅವಧಿಯಲ್ಲಿ ಕವಿ, ಲೇಖಕ, ಚಿಂತಕ, ವಿಮರ್ಶಕ ಹಾಗೂ ಕಸ್ತೂರಿ ಡೈಜಸ್ಟ್ ಪತ್ರಿಕೆಯ ಸಂಪಾದಕ ಎಂದು ಕರ್ನಾಟಕದಲ್ಲಿ ಪ್ರಖ್ಯಾತರಾಗಿದ್ದರು. ಕವಿಯಾಗಿ ಅವರು ಸೃಷ್ಟಿಸಿದ ಭಾವಲೋಕ, ಚಿಂತಕನಾಗಿ ಅವರು ಪ್ರಕಟ ಪಡಿಸಿದ ಸಾಹಿತ್ಯ ಕೃತಿಗಳೂ ಮತ್ತು ಕಸ್ತೂರಿಯ ಸಂಪಾದಕರಾಗಿ ಅವರು ರೂಪಿಸಿದ ಡೈಜಸ್ಟ್ ಪತ್ರಿಕೆ ಅಂದಿಗೂ ಇಂದಿಗೂ ಮೌಲಿಕ ಕೃತಿಯಾಗಿ ಕಾಣುತ್ತಿವೆ. ಪಾ.ವೆಂ. ಅವರ ಬದುಕು ಮತ್ತು ಬರಹಗಳ ವೈಶಿಷ್ಟ್ಯ ನಮ್ಮ ಮಟ್ಟಿಗೆ ಅಪೂರ್ವವೆಂದೇ ತೋರುತ್ತದೆ. ಅವರ ವೈಚಾರಿಕ ಹಾಸ್ಯ ಪ್ರವೃತ್ತಿ, ಅಧ್ಯಯನಶೀಲ ಧ್ಯೇಯ ಧೋರಣೆ, ಸರಳ ಮತ್ತು ಸ್ವಾರಸ್ಯಕರ ಶೈಲಿ ಸಂಕೀರ್ಣವಾದುದು. ಸರಳಗೊಳಿಸುವ, ವಿಸ್ತಾರವನ್ನು ಸಾರಾಂಶಗೊಳಿಸುವ, ಅನುವಾದಿಸುವ ಅವರ ಗ್ರಹಣಶಕ್ತಿ ಕನ್ನಡ ಬರಹಕ್ಕೆ ಅವರಿಂದ ಸಂದ ವಿಶಿಷ್ಟ ಗುಣಗಳು.

ಪಾ.ವೆಂ. ಅವರು ರಚಿಸಿದ ಸಾಹಿತ್ಯ ವೈವಿಧ್ಯಮಯವಾದದ್ದು. ಅವರ ಜೀವಿತಾವಧಿಯಲ್ಲಿ ಪ್ರಕಟವಾದ ಪುಸ್ತಕಗಳ ಸಂಖ್ಯೆ ಹದಿನೈದು. ಇವುಗಳಲ್ಲಿ ಮೂರು ರಾಜಕೀಯ ಚಿಂತನೆಗಳ ವಸ್ತುವನ್ನು ಹೊಂದಿದ್ದರೆ, ಮೂರು ಕವನ ಸಂಕಲನಗಳು, ನಾಲ್ಕು ನಗೆ ಬರಹಗಳು ಅಥವಾ ಹರಟೆಗಳ ಸಂಕಲನಗಳು ಎರಡು ಅನುವಾದ ಕೃತಿಗಳು, ಎರಡು ಚಿಂತನಶೀಲ ಪುಸ್ತಕಗಳು ಹಾಗೂ ಪದಪರಂಪರೆ ಅಧ್ಯಯನದ ಒಂದು ಕೃತಿ, ಇವರ ಬರಹಲೋಕ ವೈವಿಧ್ಯದಷ್ಟೇ ವಿಸ್ಮಯಕಾರಿಯೂ ಆಗಿದೆ.

ನನ್ನ ಮಹಾಪ್ರಬಂಧ "ಪಾ.ವೆಂ. ಆಚಾರ್ಯರ ಬದುಕು-ಬರೆಹ: ಒಂದು ಅಧ್ಯಯನ" ಮಾಡುವ ಸಂದರ್ಭದಲ್ಲಿ ಈ "ವಾಸನಾ" ಬಂಗಾಳಿಯ ಅನುವಾದಿತ ಕೃತಿ ನನಗೆ ಲಭ್ಯವಾಯಿತು. ಈ ಕೃತಿಯ ಬಗ್ಗೆ ಒಂದೆರಡು ಮಾತು ಗಳನ್ನು ಹೇಳಬೇಕು.

1942ರಲ್ಲಿ ಹುಬ್ಬಳ್ಳಿಗೆ ಪಾ.ವೆಂ. ಬಂದ ಮೇಲಿನ ಅವರ ಎರಡನೇ ಪುಸ್ತಕ ಬನಫೂಲ್ ಎಂಬ ಬಂಗಾಳಿ ಲೇಖಕರ "ವಾಸನಾ" ಕಾದಂಬರಿಯ

ಅನುವಾದದ್ದು, ಪಾ.ವೆಂ. ಅವರ ಲೇಖಕ ಮಿತ್ರ ಪಿ. ವೆಂಕೋಬರಾವ್ ಅವರ ಕೇಳಿಕೆಯ ಮೇರೆಗೆ ಇದು ರಚಿತವಾದದ್ದು. 1950ರಲ್ಲಿ ಲೇಖಕ ಮಿತ್ರರಾದ ಎಂ. ಹರಿದಾಸರಾವ್, ಪ್ರಕಾಶಕರು ಸರ್ವೋದಯ ಸಾಹಿತ್ಯ ಮಾಲೆ ಹುಬ್ಬಳ್ಳಿಯಲ್ಲಿ ಪರಿಮಳಿಸಿದ ಎರಡನೇ ವರ್ಷದ ನಾಲ್ಕನೆಯ ಕೃತಿ. ಪಾ.ವೆಂ. ಅವರ ಮಿತ್ರರಾದ ಎಂ. ಹರಿದಾಸರಾವ್ ಇಂದು ನಮ್ಮೊಂದಿಗಿಲ್ಲ, ಸರ್ವೋದಯ ಸಾಹಿತ್ಯ ಮಾಲೆಯು ಅವರು ಗತಿಸಿದ ಬೆನ್ನಲ್ಲೆ ನಿಂತು ಹೋಯಿತು. ಇವರ ಬಗ್ಗೆ ನನಗೆ ಪೂರ್ಣ ಮಾಹಿತಿ ಸಿಗಲಿಲ್ಲ. ಎಂ.ಎಚ್. ರಾವ್ ಅವರ ಕುಟುಂಬದವರು ಹೊರ ರಾಜ್ಯದಲ್ಲಿ ವಾಸವಾಗಿದ್ದಾರೆ. ಈ ಸಂದರ್ಭದಲ್ಲಿ ಅವರಿಗೆ ನಾನು ಗೌರವ ಪೂರ್ಣ ಕೃತಜ್ಞತೆಯನ್ನು ಅರ್ಪಿಸುತ್ತೇನೆ. "ವಾಸನಾ" ಒಂದು ನೀಳ್ಗತೆ "ಬನಫೂಲ್"ರವರ (ಬಲಾಯಿಚಂದ್ ಮುಖ್ಯೋಪಾಧ್ಯಯ) ಬಂಗಾಳಿ ಕಾದಂಬರಿಯ ಆಧಾರದಿಂದ ಪಾ.ವೆಂ. ಅನುವಾದಿಸಿದ್ದಾರೆ. ಬಾಲ್ಯದಲ್ಲೆ ಬಂಗಾಳಿ ಭಾಷೆಯನ್ನು ಕಲಿತು ರವೀಂದ್ರನಾಥ ಟ್ಯಾಗೂರರ ಗೀತಾಂಜಲಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇದೊಂದು ಪಾ.ವೆಂ. ಅವರ ಬಹುಭಾಷಾ ಪಾಂಡಿತ್ಯದ ಸಾಮರ್ಥ್ಯವಿದು. "ಬನಫೂಲ್" ಬಂಗಾಳಿಯ ಪದ್ಮಭೂಷಣ ವಿಜೇತ ಪ್ರಸಿದ್ಧ ಲೇಖಕ, ಕವಿ. ವಾಸನಾ ಕಾದಂಬರಿ ಹಿಂದಿ ಬಾಷೆಗೂ ಅನುವಾದಗೊಂಡಿದೆ.

ಪಾ.ವೆಂ. ಅವರು ತಮ್ಮ ಜೀವಿತಾವಧಿಯಲ್ಲಿ 2 ಅನುವಾದಿತ ಕೃತಿಗಳನ್ನು ರಚಿಸಿದ್ದಾರೆ. 1. ವಾಸನಾ 2. ಸುಭಾಷಿತ ಚಮತ್ಕಾರ ಇದರಲ್ಲಿ ಸಂಸ್ಕೃತದ ಮೂಲವನ್ನು ಹೇಳಿದ್ದಾರೆ. ಹೇಳದೆ ಹೋಗಿದ್ದರೆ ಕನ್ನಡದ ಸ್ವತಂತ್ರ ರಚನೆಗಳಂತೆ ವಿಜೃಂಬಿಸಿದೆ. ಬಂಗಾಳಿಯ ಮೂಲ ಕಾದಂಬರಿಯನ್ನು ನಾನು ಓದಿಲ್ಲ. ನನ್ನ ಅಧ್ಯಯನದ ಸಂದರ್ಭದಲ್ಲಿ ದೊರೆತ ನೆರಳಚ್ಚು (ಝೆರಾಕ್ಸ್) ಕೃತಿ ಇದು. ಮೂಲದ ಪುಸ್ತಕವು ನನಗೆ ಲಭ್ಯವಾಗಲಿಲ್ಲ.

ಈ ನೀಳ್ಗತೆಯನ್ನು ಓದುತ್ತಾ ಹೋದಂತೆ ನನಗೆ ಅನ್ನಿಸಿದ್ದು ಇದೊಂದು ಹೊಸರೀತಿಯ ಕಥಾರಚನೆ. ಪಾ.ವೆಂ. ಅವರ ಸ್ವತಂತ್ರ ರಚನೆಯಂತೆ ಇದೆ. ವಸ್ತು, ರಚನೆ, ಶೈಲಿ ಭಿನ್ನರೀತಿಯಲ್ಲಿದೆ. 1950ರ ಕಾಲದಲ್ಲಿ ಬರೆಯಲ್ಪಟ್ಟರೂ ಇಂದಿಗೂ ಇದು ಪ್ರಸ್ತುತವೆನಿಸುತ್ತದೆ. ಮೌಲ್ಯವಿರುವ ಮನುಷ್ಯರು ಮಣ್ಣಾಗಿರು ವುದು. ಮೌಲ್ಯಮರೆತ ಮನುಷ್ಯರು ವಿಜೃಂಬಿಸುತ್ತಿರುವುದು ಸಾಮಾಜಿಕ ದುರಂತ. ಇಲ್ಲಿ ವೈದ್ಯ ಮತ್ತು ಅವರೊಡನೆ ವಿವಿಧ ರೀತಿಯಿಂದ ಸತ್ತ ಹೆಣಗಳು ಸಂಭಾಷಣೆ ನಡೆಸುವುದು, ತಮ್ಮ ಅಳಲನ್ನು ತೋಡಿಕೊಳ್ಳುವುದು ಅನೇಕ ಹೃದಯ ಮಿಡಿಯುವ ಕರುಣಾಜನಕ ಗತಕತೆಗಳಿವೆ. ಹೊರಗಿನ ಪ್ರಪಂಚದಲ್ಲಿ ಹೃದಯ ಕಲಕುವ ವಾಸ್ತವಿಕತೆಗಳಿವೆ. ಕತೆಯಲ್ಲಿ ವ್ಯವಸ್ಥೆಯ ಕುರಿತು ಕತೆಗಾರರಿಗೆ

ವಿಷಾದವಿದೆ. ಮೃದುವಾದ ಪ್ರತಿಭಟನೆಯೂ ಇದೆ. ಕನ್ನಡ ಸಾಹಿತ್ಯದಲ್ಲಿ ಇದೊಂದು ಹೊಸರೀತಿಯ ಕಥಾರಚನೆ. ಈ ಅನುವಾದ ಕತೆಯ ಕಲಾತ್ಮಕತೆ ಪಾ.ವೆಂ. ಅವರ ಹಿರಿಮೆಯಾಗಿದೆ. ಪತ್ರಿಕೋದ್ಯಮಕ್ಕೆ ತನ್ನ ಬದುಕು ಮಿಸಲಾಗಿರುವುದರಿಂದ ಕತೆಯ ರಚನೆಯಲ್ಲಿ ಪಾ.ವೆಂ. ದೂರ ಸರಿದಿದ್ದರು.

68 ವರ್ಷದ ನಂತರ "ಸ್ವಪ್ನ ಬುಕ್ ಹೌಸ್"ನ ಕನ್ನಡ ಪ್ರಕಾಶನ ವಿಭಾಗದ ಮುಖ್ಯಸ್ಥರಾದ ಶ್ರೀ ದೊಡ್ಡೆಗೌಡರು ಈ ಪುಸ್ತಕವನ್ನು ಮರು ಮುದ್ರಿಸುವ ಕಾರ್ಯವನ್ನು ವಹಿಸಿಕೊಂಡಿದ್ದಾರೆ. ನಮಗಿದು ಸಂತಸದ ವಿಷಯ. ಪಾ.ವೆಂ. ಅವರ ಸುಪುತ್ರರಾದ ಪ್ರೊ. ರಾಧಾಕೃಷ್ಣ ಆಚಾರ್ಯ ಮತ್ತು ಕುಟುಂಬದವರ ಒತ್ತಾಸೆಯಿಂದ ಪಾ.ವೆಂ. ಅಭಿಮಾನಿಗಳಿಗೆ ಈ ಮೂಲಕ ಈ ಕೃತಿ ಒದಗಿ ಬರುತ್ತಿರುವುದು ಸಂತೋಷ ತಂದಿದೆ.

ಈ ಕೃತಿಗೆ ಮುನ್ನಡಿಯನ್ನು ಬರೆದು ಹರಸಿದ ಪಾ.ವೆಂ. ಒಡನಾಡಿ, ಅಭಿಮಾನಿ, ಉಡುಪಿಯ ಹಿರಿಯ ಸಾಹಿತಿ ಡಾ. ಮುರಳೀಧರ ಉಪಧ್ಯಾಯ ಇವರಿಗೂ ನನ್ನ ಕೃತಜ್ಞತೆಗಳು.

ಈ ಕೃತಿಯ ಅಕ್ಷರ ವಿನ್ಯಾಸ ಮಾಡಿದ ವಿಶ್ವನಾಥ ಹೊಸೂರು, ಹುಬ್ಬಳ್ಳಿ, ಪುಟವಿನ್ಯಾಸ ಮಾಡಿದ ವಿಶ್ವನಾಥ ಶ್ರೀ ಶೈಲ್ ಕಂಬಾಗಿ ಇವರಿಗೆ ನನ್ನ ಕೃತಜ್ಞತೆಗಳು. ಈ ಕೃತಿಯ ಸಂಪಾದನಾ ಕಾರ್ಯವನ್ನು ನನಗೆ ವಹಿಸಿದ ಪಾ.ವೆಂ. ಕುಟುಂಬ ವರ್ಗಕ್ಕೆ ನಾನು ಅಭಾರಿಯಾಗಿದ್ದೇನೆ. ಸಹಕರಿಸಿದ ಎಲ್ಲರಿಗೂ ಧನ್ಯತೆಗಳು.

**ಡಾ. ಸರ್ವಮಂಗಳಾ ಪಿ. ಆರ್.**
ಉಪನ್ಯಾಸಕಿ, ಹುಬ್ಬಳ್ಳಿ

# ಮುನ್ನುಡಿ

●

1. ಬಲಾಯಿಚಂದ್ ಮುಖ್ಯೋಪಾಧ್ಯಾಯ 1899–1989 ಠಾಗೋರೋತ್ತರ ಬಂಗಾಳಿಯ ಸಾಹಿತ್ಯದ ಮುಖ್ಯ ಲೇಖಕರಲ್ಲಿ ಒಬ್ಬರು. ಬನ್‌ಫೂಲ್ ಕಾವ್ಯನಾಮದ ಬಲಾಯಿಚಂದ್ ಅವರು ಬಂಗಾಳಿ ಕಾವ್ಯ, ನಾಟಕ, ಕಾದಂಬರಿ, ಸಣ್ಣಕತೆ ಪ್ರಕಾರಗಳಿಗೆ ಸಮೃದ್ಧ ಕೊಡುಗೆ ನೀಡಿದ್ದಾರೆ. ಅವರ 61 ಕಾದಂಬರಿಗಳು, 600 ಸಣ್ಣ ಕತೆಗಳು ಪ್ರಕಟವಾಗಿವೆ. ಸತ್ಯಚರಣ್ ಮುಖ್ಯೋಪಾಧ್ಯಾಯ, ಮೃಣಾಲಿನಿ ದೇವಿ ದಂಪತಿಗಳ ಮಗನಾಗಿ ಬಲಾಯಿಚಂದರು ಹುಟ್ಟಿದ್ದು ಬಿಹಾರದ ಪೂರ್ವಿಯಾ ಜಿಲ್ಲೆಯ ಮೊನಿಹಾರಿಯಲ್ಲಿ. ಸತ್ಯಚರಣ್ ಬಿಹಾರದ ಪೂರ್ವಿಯಾ ಜಿಲ್ಲಾಸ್ಪತ್ರೆಯಲ್ಲಿ ಡಾಕ್ಟರ್ ಆಗಿದ್ದರು. ಬಲಾಯಿಚಂದರು 1928ರಲ್ಲಿ ಕೊಲ್ಕತ್ತ ಮೆಡಿಕಲ್ ಕಾಲೇಜಿನಲ್ಲಿ ಎಮ್.ಬಿ.ಬಿ.ಎಸ್. ಪದವೀಧರರಾದರು. ಮುನಿರಾಬಾದಿನ ಮುನಿಸಿಪಲ್ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದ ಬಲಾಯಿಚಂದರು ಮುಂದೆ ಭಾಗಲ್ಪುರದಲ್ಲಿ ಸ್ವಂತ ಕ್ಲಿನಿಕ್ ಆರಂಭಿಸಿದರು.

ಬಲಾಯಿಚಂದರ ಕಾದಂಬರಿಗಳನ್ನು ಆಧರಿಸಿದ ಎಂಟು ಸಿನಿಮಾಗಳಿವೆ. ಅವುಗಳಲ್ಲಿ ಭುವನ್ ಶೋಮ್, ಅಗ್ನೀಶ್ವರ ಮತ್ತು ಅರ್ಜುನ್ ಪಂಡಿತ್ ಪ್ರಸಿದ್ಧಿ ಗಳಿಸಿವೆ. ಮೃಣಾಲ್ ಸೇನ್ ನಿರ್ದೇಶಿಸಿದ ಭುವನ್ ಶೋಮ್ ರಾಷ್ಟ್ರ ಪ್ರಶಸ್ತಿ ಗಳಿಸಿದೆ. "ಮಧುಸೂದನ" ಮೈಖೇಲ್ ಮಧುಸೂದನ ದತ್ತರ ಜೀವನ ಚರಿತ್ರೆ, "ವಿದ್ಯಾ ಸಾಗರ" – ಈಶ್ವರಚಂದ್ರ ವಿದ್ಯಾ ಸಾಗರ ಅವರ ಜೀವನ ಚರಿತ್ರೆಗಳನ್ನು ಬರೆದಿರುವ ಬಲಾಯಿಚಂದರು ತನ್ನ ಆತ್ಮಕತೆಗೆ "ಪಶ್ಚಾತ್ತಾಪ" ಎಂಬ ಶೀರ್ಷಿಕೆ ನೀಡಿದ್ದಾರೆ. 1975ರಲ್ಲಿ ಪದ್ಮಭೂಷಣ ಪ್ರಶಸ್ತಿ ಪಡೆದರು ಬಲಾಯಿಚಂದರ ಸಮಗ್ರ ಕೃತಿಗಳು ಅಂತರ್ಜಾಲದಲ್ಲಿ ಲಭ್ಯ ಇವೆ.

2. ಎಮ್. ಹರಿದಾಸ ರಾವ್ ಕನ್ನಡದ ಅಲಕ್ಷಿತ ಲೇಖಕರಲ್ಲೊಬ್ಬರು. ಹರಿದಾಸ ರಾವ್ ಅವರು ಹುಬ್ಬಳ್ಳಿಯಲ್ಲಿ ಆರಂಭಿಸಿದ್ದ ಸರ್ವೋದಯ ಸಾಹಿತ್ಯ ಮಾಲೆಯಲ್ಲಿ ಪಾ. ವೆಂ. ಆಚಾರ್ಯರ ವಾಸನಾ (ಬನ್‌ಫೂಲ್ ಅವರ ಬಂಗಾಳಿ ಕತೆಯ) ಆಧಾರದಿಂದ 1950ರಲ್ಲಿ ಪ್ರಕಟವಾಗಿತ್ತು. ಪಾ. ವೆಂ. ಆಚಾರ್ಯರು (1915–1992) ತನ್ನ 35 ನೆಯ ವಯಸ್ಸಿನಲ್ಲಿ ಈ ನೀಳ್ಗತೆಯನ್ನು ಭಾಷಾಂತರಿಸಿ ದ್ದಾರೆ. ಬಂಗಾಳಿ ಭಾಷೆ ಕಲಿತಿದ್ದ ಪಾ.ವೆಂ ಮೂಲ ಬಂಗಾಳಿಯಿಂದಲೇ ಈ ಕೃತಿಯನ್ನು ಅನುವಾದಿಸಿರಬಹುದು.

ಸ್ವಾತಂತ್ರ್ಯ ಪೂರ್ವದಲ್ಲಿ ಬಂಗಾಳಿಯ ಶರತ್ ಚಂದ್ರ, ಬಂಕಿಮ ಚಂದ್ರ, ಮತ್ತು ರವೀಂದ್ರನಾಥ ಟಾಗೋರ ಅವರ ಹಲವು ಕೃತಿಗಳು ಕನ್ನಡಕ್ಕೆ ಅನುವಾದ ಗೊಂಡಿವೆ. ಪಾ.ವೆಂ ಆಚಾರ್ಯರು ಬಂಗಾಳಿಯ ಹೊಸ ಲೇಖಕರೊಬ್ಬರನ್ನು- ಬಲಾಯಿಚಂದ ಮುಖ್ಯೋಪಾಧ್ಯಾಯರವರನ್ನು – ಕನ್ನಡಕ್ಕೆ ಪರಿಚಯಿಸಿದರು.

ಬಲಾಯಿಚಂದರು ತಮ್ಮ ಕಥನ ತಂತ್ರ ಮತ್ತು ಪಾತ್ರಗಳ ಅಂತರಂಗ ಶೋಧನದಿಂದ ಖ್ಯಾತರಾದ ಲೇಖಕ. ವಾಸನಾ ನೀಳ್ಗತೆಯಲ್ಲೂ ಒಂದು ವಿನೂತನ ಕಥನ ತಂತ್ರ ಕಾಣಿಸುತ್ತದೆ. ವಾಸನಾದ ನಿರೂಪಕ ಒಬ್ಬ ಸರಕಾರಿ ಆಸ್ಪತ್ರೆಯ ಡಾಕ್ಟರ್. ತನ್ನ ಕರ್ತವ್ಯಕ್ಕಾಗಿ ನೂರಾರು ಹೆಣಗಳ ಮರಣೋತ್ತರ ಪರೀಕ್ಷೆ ಮಾಡಿದ್ದಾನೆ. ನಿದ್ರೆ ಬರದ ಒಂದು ರಾತ್ರಿ ಅವನಿಂದ ಸಿಗಿಸಿಕೊಂಡ ಹಲವು ಪಾತ್ರಗಳು ಅವನ ಬಳಿ ಬಂದು ತಮ್ಮ ಕತೆ ವಿವರಿಸುತ್ತವೆ. ಇಲ್ಲಿ ಭಗ್ನ ಪ್ರಣಯ, ದಾಂಪತ್ಯೇತರ ಸಂಬಂಧ, ಬಡತನ, ಹೆಣ್ಣಿನ ಬಣ್ಣವನ್ನು ಕುರಿತ ಪೂರ್ವಾಗ್ರಹ, ಕೌಟುಂಬಿಕ ಕ್ರೌರ್ಯ, ಬಾಲ್ಯ ವಿವಾಹಗಳಿಗೆ ಸಂಬಂಧಿಸಿದ ಹಲವು ದಾರುಣ ಕತೆಗಳಿವೆ. ವಿದೇಶಿ ವಸ್ತುಗಳ ಬಹಿಷ್ಕಾರ ಚಳುವಳಿಯಿಂದ ಒಬ್ಬನ ಬಟ್ಟೆ ಅಂಗಡಿ ದಿವಾಳಿಯಾದ ಪ್ರಸ್ತಾಪ – ಇದು ಸ್ವಾತಂತ್ರ್ಯ ಪೂರ್ವದ ಕತೆ ಎಂಬುದನ್ನು ಸೂಚಿಸುತ್ತದೆ. ಪುರುಷ ಪ್ರಧಾನ ಸಮಾಜದ ಗಂಡು ಹೆಣ್ಣಿನ ಸಂಕೀರ್ಣ ಸಂಬಂಧಗಳನ್ನು ಈ ನೀಳ್ಗತೆ ಅನಾವರಣ ಗೊಳಿಸುತ್ತದೆ. ಸೇಡು ಹಾಗೂ ಕೇಡಿನ, ಭದ್ರಲೋಕದ ಅಭದ್ರ ದಾಂಪತ್ಯ ವ್ಯವಸ್ಥೆಯ ವಿವಿಧ ಕರಾಳ ಮುಖಗಳನ್ನು ಈ ನೀಳ್ಗತೆ ಚಿತ್ರಿಸುತ್ತದೆ.

ಈ ನೀಳ್ಗತೆಯ ಒಬ್ಬಳು, ಹೆಂಗಸರ ಅಸಹಾಯಕ ಸ್ಥಿತಿಯನ್ನು ಹೀಗೆ ವಿವರಿಸುತ್ತಾಳೆ – ನಾನು ಬದುಕಿದ್ದಾಗ ನೋಡಿದ ಮಟ್ಟಿಗೆ ಗಂಡಸರು ನಮ್ಮನ್ನು ತೆಗೆದುಕೊಂಡು ಬರಿ ಚೆನ್ನಾಟ ಆಡುತ್ತಾರೆ. ನಾವು ಹೆಂಗಸರು ಫುಟ್ಬಾಲ್. ಅವರು ಪಟುಗಳಾದ ಪಂದ್ಯಾಟಗಾರರು, ಹದಿಮೂರರ ಹರೆಯದಲ್ಲಿ ಪತಿದೇವರನ್ನು ಕಳೆದುಕೊಂಡ ಯುವತಿ, ವಿಧವೆಯರರ ಪಾಡನ್ನು ಕುರಿತು "ನಮ್ಮ ದೇಶದಲ್ಲಿ ಸತೀ ಸಹಗಮನ ಪದ್ಧತಿ ಇತ್ತಲ್ಲ ಅದೇ ಸುಖವಿತ್ತು ನೋಡಿರಿ. ಗಂಡನ ಜತೆಗೇ ಹೆಂಡತಿಯೂ ಸುಟ್ಟು ಹೋಗುತ್ತಿದ್ದಳು ಸರಿ. ಹೀಗೆ ಬೆಂದು ಬೆಂದು ಕೊರಗಿ ಕೊರಗಿ ಸಾಯುವ ಅವಸ್ಥೆ ಯಾರಿಗೆ ಬೇಕಿತ್ತು? ಈ ದೇಶದ ಮನೆ ಮನೆಯಲ್ಲಿಯೂ ವಿಧವೆಯರು ಬೆಂದು ಬೆಂದು ಸಾಯುತ್ತಿದ್ದಾರೆ. ಬೆಂಕಿಯ ರೂಪ ಮಾತ್ರ ಬೇರೆ–ಅದು ಚಿತಾನಲ, ಇದು ವ್ಯಥಾನಲ." ಹುಚ್ಚಿ ಹೆಂಡತಿ ಯನ್ನು ಅಟ್ಟದ ಮೇಲೆ ಬಂಧಿಸಿಟ್ಟು, ತನ್ನ ಏಕಮಾತ್ರ ಪುತ್ರನನ್ನು ಮನೆ

ಪಾಠದವನಿಗೆ ಒಪ್ಪಿಸಿ, ತನ್ನ ಲಂಪಟಲೀಲೆಗೆ ಹೊರಡುವ ಶ್ರೀಮಂತನ ಚಿತ್ರ ಕಣ್ಣಿಗೆ ಕಟ್ಟುವಂತಿದೆ.

ಬಡರೋಗಿಗಳನ್ನು ಅಲಕ್ಷಿಸುವ ಸರಕಾರಿ ಆಸ್ಪತ್ರೆಯ ವರ್ಣನೆಯಲ್ಲಿ, ವೈದ್ಯ ವೃತ್ತಿಯಲ್ಲಿದ್ದ ಲೇಖಕ ಬಲಾಯಿಚಂದರ ವೃತ್ತಿ ವಿಮರ್ಶೆ ತೀಕ್ಷ್ಣವಾಗಿದೆ. ವಾಸನಾ ದಲ್ಲಿ ಒಂದು ಕಲಾತ್ಮಕ ಸಿನಿಮಾದ ಪಠಯ ನಿಚ್ಚಳವಾಗಿ ಕಾಣಿಸುತ್ತದೆ.. ವಾಸನಾ ಶಬ್ದಕ್ಕಿರುವ ಹಿಂದಿನ ಜನ್ಮದ ಸ್ಮರಣೆಯಿಂದ ಉಂಟಾಗುವ ತಿಳುವಳಿಕೆ, ಕಲ್ಪನೆ, ಬಯಕೆ, ಸುಗಂಧ, ದುರ್ಗಂಧ, ಜಾಡು – ಈ ಎಲ್ಲ ಅರ್ಥಗಳನ್ನೂ ಈ ಕಾದಂಬರಿ ಧ್ವನಿಸುತ್ತದೆ. ಪಾ. ವೆಂ. ಆಚಾರ್ಯರ ಭಾಷಾಂತರ ಸ್ವತಂತ್ರ ಕೃತಿಯಂತೆ ಓದಿಸಿಕೊಂಡು ಹೋಗುತ್ತದೆ. ಮೂಲ ಕೃತಿ ಓದಲು ನನಗೆ ಬಂಗಾಳಿ ಭಾಷೆ ತಿಳಿದಿಲ್ಲ.

3. ಪಾ. ವೆಂ ಆಚಾರ್ಯರು ಕನ್ನಡಕ್ಕೆ ತಂದಿರುವ ವಾಸನಾದ ವಸ್ತು ಕನ್ನಡದ ಎರಡು ಕೃತಿಗಳನ್ನು ನೆನಪಿಗೆ ತರುತ್ತದೆ.. ಆಸ್ಪತ್ರೆಗಳ ದುಸ್ಥಿತಿಯ ಚಿತ್ರಣ ನೀಡುವ 'ಶವದ ಮನೆ' ಚದುರಂಗರ ಪ್ರಸಿದ್ಧ ಕತೆಗಳಲ್ಲಿ ಒಂದು. 'ಸಾವಿನ ದಶಾವತಾರ' 2017– ಕೆ. ಸತ್ಯನಾರಾಯಣರವರ ಈ ಕಾದಂಬರಿಯ ನಿರೂಪಕ, ಶವಸಂಸ್ಕಾರ ನಿರ್ವಹಣೆಯನ್ನು ವೃತ್ತಿಯನ್ನಾಗಿ ಆಯ್ಕೆ ಮಾಡಿಕೊಂಡಿರುತ್ತಾನೆ. ಇದೊಂದು ಹೊಸ ವಸ್ತು ಇರುವ, ಕಾಡುವ ಕಾದಂಬರಿ.

ಈ ಮುನ್ನುಡಿ ಬರಿಯುವ ಅವಕಾಶ ನೀಡಿದ ಪ್ರೊ ರಾಧಾಕೃಷ್ಣ ಆಚಾರ್ಯರಿಗೆ ಅಭಿವಂದನೆಗಳು.

26–3–2018 ಮುರಳೀಧರ ಉಪಾಧ್ಯ ಹಿರಿಯಡಕ

'ಸಖೀ ಗೀತ'
ಹುಡ್ಕೋ ಮೊದಲ ಮೈನ್.
ದೊಡ್ಡನಗುಡ್ಡೆ, ಉಡುಪಿ–576102

# ವಾಸನಾ

ಅಂಧಕಾರ ರಾತ್ರಿ, ಪುಸ್ತಕ ಹಿಡಿದು ಏಕಾಕಿಯಾಗಿ ಎಚ್ಚರದಲ್ಲಿದ್ದೇನೆ. ಸುತ್ತಮುತ್ತ ಹೆಣಗಳ ಓಡಾಟ.... ಏನು ಮಾಡಿದರೂ ನಿದ್ದೆ ಹತ್ತದು. ನಾನು ಸ್ವತಃ ಡಾಕ್ಟರ್. ನಿದ್ದೆ ಬರಿಸುವ ಒಂದೇ ಒಂದು ಔಷಧವನ್ನು ಬಿಟ್ಟಿಲ್ಲ. ಮಿದುವಾದ ಹಾಸಿಗೆಯಲ್ಲಿ ಮಲಗಿ ನೋಡಿದ್ದೇನೆ, ಒರಟು ಹಾಸಿಗೆಯನ್ನೂ ಯತ್ನಿಸಿದ್ದೇನೆ. ಇನ್ನೂ ಹಲ ಉಪಾಯಗಳನ್ನು ಪ್ರಯೋಗಿಸಿದ್ದೇನೆ. ಎಲ್ಲ ವ್ಯರ್ಥ, ಏತರಿಂದಲೂ ಏನೂ ಫಲವಾಗಲಿಲ್ಲ. ದೀಪ ನಂದಿಸಿ ಕತ್ತಲಲ್ಲಿ ಮಲಗಿದರೂ ಅಷ್ಟೇ, ಢಾಳಾಗಿ ಉರಿಸಿಟ್ಟು ಮಲಗಿದರೂ ಅಷ್ಟೆ. ದೀಪದ ಬರುಡೆಯ ಬಣ್ಣವನ್ನೂ ಬದಲಿಸಿ ನೋಡಿದೆ. ರೊಕ್ಕ ಕೈ ಬಿಟ್ಟದ್ದೇ ಬಂತಲ್ಲದೆ ನಿದ್ದೆ ಬೇರೆ ಹತ್ತಲಿಲ್ಲ. ಗುಡ್ಡ, ಮೇಲೆ ಮೇಯಹೋದ ಕುರಿಗಳನ್ನು ಅಟ್ಟಿಕೊಂಡು ಕುರುಬ ಇಕ್ಕಟ್ಟಾದ ಕಣಿವೆಯಲ್ಲಿ ಇಳಿಯುತ್ತಿದ್ದಾನೆ. ಒಂದು ಕುರಿ, ·ಎರಡು ಕುರಿ, ಮೂರು, ನಾಲ್ಕು... ಹತ್ತು... ಇಪ್ಪತ್ತು... ನೂರು ಎಂದು ಕಲ್ಪಿಸಿಕೊಂಡು ಸಾವಿರದವರೆಗೂ ಎಣಿಸಿ ನೋಡಿದ್ದೇನೆ. ಆದರೂ ನಿದ್ದೆ ಮಾತ್ರ ಬಾರದು. ಎಷ್ಟು ಹೆಣಗಿದರೂ ನಿದ್ದೆಯೇ ಬರಲೊಲ್ಲದು.

ಮಳೆಗಾಲದ ಅಂಧಕಾರ. ರಾತ್ರಿಯಲ್ಲಿ ಕೈಯಲ್ಲೊಂದು ಪುಸ್ತಕ ಹಿಡಿದು ಎಚ್ಚರವಾಗಿದ್ದೇನೆ. ಸುತ್ತಮುತ್ತ ಹೆಣಗಳು. ಒಂದಾನೊಂದು ಕಾಲದಲ್ಲಿ ಇವೆಲ್ಲವೂ ನನ್ನ ಗುರುತಿನವು, ಏಕೆಂದರೆ ಪ್ರತಿಯೊಂದನ್ನೂ ನಾನೂ ಸೀಳಿದ್ದೆ. ಸರಕಾರಿ ನೌಕರಿಯ ನಿತ್ಯಕರ್ಮ–ದಿನವೂ ಹೆಣಗಳನ್ನು ಸಿಗಿಯಬೇಕು. ಎಷ್ಟೋ ಸಿಗಿದಿದ್ದೇನೆ. ಅವುಗಳಲ್ಲೇ ಇಂದು ಕೆಲವು ಬಂದು ನನ್ನ ಸುತ್ತೆಲ್ಲ ಓಡಾಡುತ್ತಿವೆ. ಎಲ್ಲಕ್ಕೂ ತಂತಮ್ಮ ಕತೆ ಹೇಳುವ ಆತುರ.

'ನಿಮಗೆ ಗೊತ್ತೇ ಇದೆ, ಡಾಕ್ಟರ್, ನಾನು ಸತ್ತದ್ದು ಅಫು(ವಿಷ) ತಿಂದು. ನನ್ನ ಹೊಟ್ಟೆ ಸೀಳಿ ನೀವು ಆ ಗುಟ್ಟು ಬಯಲಿಗೆಳೆದಿರಿ–ಚೂರಿಯಿಂದ ಸಿಗಿದು, ಅಬ್ಬಾ! ಏನು ಹರಿತ ನಿಮ್ಮ ಶಸ್ತ್ರಗಳು! ಥಳಥಳ ಹೊಳೆಯುತ್ತವೆ, ಅಲ್ಲ? ಆದರೂ

ಒಂದು ಗುಟ್ಟು ಮಾತ್ರ ನಿಮಗೂ ತಿಳಿಯಲಿಲ್ಲ ಡಾಕ್ಟರ್ ಸಾಹೇಬ್! ನೀವು ತಿಳಿದಿದ್ದೀರಿ, ಅಫು ತಿಂದ ಮೇಲೆ ಸತ್ತಳಿವಳು' ಅಂತ, ನಾನು ಮೊದಲೇ ಸತ್ತಿದ್ದೆ ಅಂತ ನಿಮಗೆ ಹೇಗೆ ತಿಳಿಯಬೇಕು, ಪಾಪ! ಆ ಗುಟ್ಟು ನನ್ನ ಹೊಟ್ಟೆಯಲ್ಲಿದ್ದಿಲ್ಲ, ಮನಸಿನಲ್ಲಿ ಹುದುಗಿತ್ತು. ಮನಸನ್ನು ಚೂರಿಯಿಂದ ಸೀಳಿ ನೋಡುವ ವಿದ್ಯೆ ನಿಮಗೂ ಬರುವುದಿಲ್ಲವಲ್ಲ! ನಿಮ್ಮ ಶಸ್ತ್ರಗಳು ಎಷ್ಟೆ ಹರಿತ ವಿರಲೊಲ್ಲವೇಕೆ..."

**ಮಾತಾಡುತ್ತಿದ್ದವಳು ಹದಿನಾರು ವರ್ಷದ ತುಂಬು ಜವ್ವನದ ಸುಂದರಿ. ಮುಖದಲ್ಲಿ ಇನ್ನೂ ಎಳೆತನವಿದೆ. ಸ್ಫಟಿಕದಂತೆ ಶುಭ್ರವಾದ ಮೈಬಣ್ಣ. ಈಗ ಅಫುವಿನ ವಿಷದಿಂದ ನೀಲವಾಗಿಬಿಟ್ಟದೆ. ಮುಗುಳು ಮುಗುಳಾದ ನೀಲ ಕಮಲದ ಹಾಗೆ.** ಹುಡುಗಿ ಸ್ವಲ್ಪ ತಡೆದು ಮುಂದುವರಿಸಿದಳು "ಹೂಂ, ನಿಜವಾಗಿ ನಾನು ಮೊದಲೇ ಸತ್ತಿದ್ದೆ. ಸಾಯುವುದರಲ್ಲಿಯೂ ಎಷ್ಟೆಷ್ಟು ಬಗೆಗಳಿವೆ. ಏನು ಕಥೆ! ನೀವಂತೂ ಹೇಳಿ ಕೇಳಿ ಸಾವಿನ ಸಂಗಡ ಹಗಲೂ ರಾತ್ರಿ ಕಾರುಬಾರು ಮಾಡುವವರು. ಆದರೆ ಆತ್ಮಕ್ಕೆ ಸಾವಿಲ್ಲ ಎನ್ನುವವರ ಮಾತನ್ನು ನೀವು ನಂಬುತ್ತಿರಬಹುದು. ಸುಳ್ಳು, ಶುದ್ಧ ಸುಳ್ಳು ಅದು. ಆತ್ಮವೂ ಸಾಯುತ್ತದೆ. ನಿಮ್ಮ ಸುತ್ತಮುತ್ತ ಎಷ್ಟು ಸಾಯದ ಹೆಣಗಳು ನಿತ್ಯ ಅಲೆಯುತ್ತಿರುತ್ತವೆ! ನಿಮಗೆ ಕಾಣುವ ಕಣ್ಣು ಮಾತ್ರ ಇಲ್ಲ! ಅವರಲ್ಲಿ ಕೆಲವರು ನಿಮ್ಮ ಜೀವದ ಗೆಳೆಯರು ಕೂಡ ಇರಬಹುದು. ಕೆಲವರು ತಂದೆಯರು, ಕೆಲವರು ಹೆಂಡಿರು, ಎಷ್ಟೋ ಜನರ ಆತ್ಮ ಎಂದೋ ಸತ್ತು ಹೋಗಿದ್ದರೂ ನಿಮಗೆ ಗೊತ್ತೇ ಆಗುವುದಿಲ್ಲ. ಅವರ ಆತ್ಮದ ದುರ್ಗಂಧ ಅವರ ಮಾತಿನಲ್ಲಿ, ನಡತೆಯಲ್ಲಿ, ಆಚರಣೆಯಲ್ಲಿ ಹೊರಹೊಮ್ಮಿ ಇಡುಗುತ್ತಿದ್ದರೂ ನಿಮಗೆ ಆದರ ಸುಳಿವು ಹತ್ತುವುದಿಲ್ಲ. ಅವರನ್ನು ಒಯ್ದು ಸುಡುವುದಿಲ್ಲ ನೀವು. ನನ್ನ ಆತ್ಮವೂ ಸತ್ತಿತ್ತು."

ಹುಡುಗಿ ನಕ್ಕಳು. ನುಡಿದಳು, "ಇನ್ನೇನು ಪ್ರೇಮದ ಕತೆ ಪ್ರಾರಂಭ ವಾಯಿತು, ಅಂತ ನೀವು ಎಣಿಸಿದ್ದೀರಿ, ಅಲ್ಲ? ಇಲ್ಲ ಇದು ಪ್ರೇಮದ ಕತೆಯಲ್ಲ, ಮೃತ್ಯುವಿನ ಕತೆ. ಆತ ಪ್ರಣಯಿಯಲ್ಲ, ಮೃತ್ಯು. ಎಂಥ ಮನೋಹರ ಆ ಮೃತ್ಯು ಅಂತೀರಿ! ಅವನ ತಪ್ಪೇನೂ ಇದ್ದಿಲ್ಲ ಇದರಲ್ಲಿ. ನಾನೇ ಅವನ್ನ ಬಲೆ ಒಡ್ಡಿ ಹಿಡಿದಿದ್ದೆ. ನನ್ನ ಮೃತ್ಯುವನ್ನ ನಾನೇ ಬೇಕಂತ ಕರೆತಂದಿದ್ದೆ. ಹಾವಾಡಿಗ ನಾಗರ ಹಾವನ್ನು ಹಿಡಿದು ಏನೇನೋ ಆಟ ಆಡಿಸುತ್ತಾನಲ್ಲ, ಹಾಗೆ ನಾನೂ ಮೃತ್ಯುವನ್ನ ಆಡಿಸಿದ್ದೇನೆ. ನನ್ನ ಕೊಳಲಿನ ಗಾನಕ್ಕೆ ಮರುಳಾಗಿ ಕಟ್ಟುಕಟ್ಟಿನ ಆ ವಿಷಧರ ಹೆಡೆ ಅರಳಿಸಿ ಏನೇನು ಆಟ ಆಡಿಸಿದ್ದ! ನನ್ನ ಸಾಮರ್ಥ್ಯಕ್ಕೆ ನಾನೇ ಮುಗ್ಧಳಾಗಿ ಹೋಗಿದ್ದೆ. ಆದರೆ ಕಡೆಗೊಂದು ದಿನ ಆತ ಕೆರಳಿ ಕಡಿದು ಬಿಟ್ಟ ನನ್ನ. ಅಬ್ಬಾ, ಎಂಥ ಕರಾಳ ದಂಶ! ಸತ್ತು ಹೋದೆ ನಾನು."

ಇಷ್ಟು ಹೇಳಿ ಅವಳು ಸುಮ್ಮನಾದಳು.

ನನ್ನ ಟೇಬಲ್‌ಲ್ಯಾಂಪಿಗೆ ಪ್ರದಕ್ಷಿಣೆ ಹಾಕುತ್ತ ನಾನಾವರ್ಣದ ಚಿಕ್ಕದೊಡ್ಡ ಕೀಟಗಳು ಸುಳಿದಾಡುತ್ತಿದ್ದವು. ಸಹಸ್ರ ಬಣ್ಣಬಣ್ಣದ ಪತಂಗವೊಂದು ಹಾರಿ ಬಂದು ಪಟಪಟ ರೆಕ್ಕೆ ಬಡಿದು ದೀಪದ ಕಾಜಿಗೆ ಢಿಕ್ಕಿ ಹೊಡೆದು ಕೆಳಗುರುಳಿತು. ಇಬ್ಬರೂ ಪಿಟ್ಟೆನ್ನದೆ ಅದನ್ನೆ ನೋಡುತ್ತಿದ್ದೆವು.

ಅವಳು ಪುನಃ ಹೇಳತೊಡಗಿದಳು: "ನನ್ನ ಆ ಸಾವಿನ ಸುದ್ದಿ ನಿಮಗೆ ಬರಲಿಲ್ಲ. ಡಾಕ್ಟರ್ ಸಾಹೇಬ! ಅದು ಶೋಚನೀಯ ನಿಧನ. ತಾಯಿಯೆ ಮಗುವನ್ನು ಕೊಲೆ ಮಾಡಿದ ಪ್ರಸಂಗ. ನಗಬೇಡಿರಿ, ಕೊಂದವಳು ನಾನೊಬ್ಬಳೇ ಅಲ್ಲ. ಶಿಶುವಿನ ಕಾಲು ಅದುಮಿಹಿಡಿದದ್ದು ಸಮಾಜ, ಶಾಸ್ತ್ರ, ಅದರ ಕೈ ಒತ್ತಿ ಹಿಡಿಯಿತು. ಮತ್ತೆ ನಾನು? ನಾನು ಬರಿ ಕೊರಳು ಹಿಸುಕಿದೆ. ಮಗು ಚೀರಿಕೊಂಡು ಒದ್ದಾಡಿ ಸತ್ತು ಹೋಯಿತು. ಆ ಕ್ಷಣದಲ್ಲೆ ಸತ್ತೆ ನಾನು. ನನ್ನ ಇಹಲೋಕ, ಪರಲೋಕ, ಆತ್ಮ ಎಲ್ಲವೂ ಏಕಕಾಲದಲ್ಲಿ ಸತ್ತು ಹೋದವು. ಶೋಚನೀಯವಾಗಿದ್ದು ನನ್ನ ಆ ನಿಧನ, ನೀವು ಗೊತ್ತು ಹಚ್ಚಿದ ನಿಧನವಲ್ಲ. ಸಮಾಜ ಮಾತ್ರ ಇನ್ನೂ ಬದುಕಿಯೇ ಇದೆ, ಶಾಸ್ತ್ರವೂ ಸತ್ತಿಲ್ಲ. ನನ್ನ ಅಂದಿನ ಸಾವಿನ ಸುದ್ದಿ ನಿಮ್ಮ ಹತ್ತಿರ ಬಂದಿತ್ತೆ?"

"ಇಲ್ಲ"

"ಹೇಳಿದರೆ ನಂಬುತ್ತೀರಾ?"

"ಸರ್ವಥಾ ನಂಬಲಾರೆ"

"ನನ್ನ ಮಾತಿನಲ್ಲಿ ನಂಬಿಕೆಯಿಲ್ಲ ನಿಮಗೆ?"

"ಇಲ್ಲ"

ಹುಡುಗಿ ನೊಂದ ನೋಟದಿಂದ ನನ್ನ ಮುಖ ನೋಡಿದಳು. ಯಾವುದೋ ಅವ್ಯಕ್ತ ವೇದನೆಯಿಂದ ಕಾತರಳಾದವಳಂತೆ ದೈನ್ಯದ ದನಿಯಲ್ಲಿ ಬಿನ್ನೈಸಿದಳು–ಸುಳ್ಳು ಹೇಳಲಿಲ್ಲ ನಾನು, ಡಾಕ್ಟರ್ ಸಾಹೇಬ್ ಬದುಕಿದ್ದಾಗ್ಗೆ ಎಷ್ಟೋ ಸುಳ್ಳು ಹೇಳಿದ್ದೆ ನಿಜ, ಆದರೆ ಈಗ ನಾನು ಹೇಳುವದು ಸತ್ಯ. ಅಫು ತಿಂದು ಸತ್ತದ್ದು ನನ್ನ ದೇಹ ಮಾತ್ರ, ನಾನು ಸತ್ತಿದ್ದೆ ಅದಕ್ಕೂ ಮುಂಚೆ, ಆ ಶವಜೀವನ ಮತ್ತೆ ಸಹಿಸಲಾಗಲಿಲ್ಲ. ಬದುಕುವ ಇಚ್ಛೆಯಿಂದಲೇ ನಾನು ಅಫು ತಿಂದಿದ್ದೆ. ನಾನು ಮತ್ತೆ ಬದುಕಬೇಕೆನ್ನುವೆ, ಡಾಕ್ಟರ್ ಬದುಕಬೇಕೆಂದು ನನ್ನ ಅಂತಃಕರಣವೆಲ್ಲ ಕಾತರಪಡುತಿದೆ. ನಾನು ಹೇಳುವದನ್ನು ನಂಬಿರಿ.

ಅವಳ ಮಾತು ಅರ್ಧಕ್ಕೇ ನಿಂತುಹೋಯಿತು. ಎದುರಿಗೆ ಒಬ್ಬ ಯುವಕ ಬಂದು ನಿಂತಿದ್ದ. ಅವನ ತಲೆಬುರುಡೆ ಒಡೆದು ನಜ್ಜುಗುಜ್ಜಾಗಿತ್ತು. ಹಣೆಯಲ್ಲಿ ಒಂದು ಛಿದ್ರ, ಅದರಿಂದ ಮಿದುಳು ಹೊರಬಂದಿತ್ತು. ಮೋರೆಯೆಲ್ಲ ಗಡ್ಡಮೀಸೆ ಬೆಳೆದು ಮುಳ್ಳು ಮುಳ್ಳಾಗಿತ್ತು – ಹಲದಿನಗಳಿಂದ ಕ್ಷೌರಿಕನನ್ನು ಕಾಣದವರಂತೆ.

ಯುವಕ ಆ ಹುಡುಗಿಗೆ ಹೇಳತೊಡಗಿದ: "ನೋಡು, ಈ ಇಹಲೋಕದ ಮನುಷ್ಯರ ಮುಂದೆ ಸುಖದುಃಖವನ್ನು ತೋಡಿಕೊಂಡು ಫಲವಿಲ್ಲ. ಇನ್ನೂ ಇಷ್ಟು ಬುದ್ಧಿಬಂದಿಲ್ಲ ನಿನಗೆ? ಬದುಕಿದ್ದಷ್ಟು ದಿನ ಇವರಿಗೆ ಸ್ವಾರ್ಥದ ಹೊರತು ಬೇರೆ ಮಾತು ತಿಳಿಯಲಾರದು–ತಿಳಿಯುವದು ಸಾಧ್ಯವೇ ಇಲ್ಲ. ಸ್ವಾರ್ಥದ ಪರುಷದ ಬೆನ್ನು ಹತ್ತಿದ ಇವರಿಗೆ ಗುರುತು ಹತ್ತುವ ವಸ್ತು ಒಂದೇ ಒಂದು ಚಿನ್ನ. ಅದನ್ನು ಹೊರತಾದ ವಸ್ತುಗಳು ಅವರ ಪಾಲಿಗೆ ನಿರರ್ಥಕ."

ಯುವಕ ತುಸು ಮುಂದೆ ಬಂದು ಟೇಬಲ್‌ಲ್ಯಾಂಪಿನ ಬಳಿ ನಿಂತು ಬಗ್ಗಿ ಪತಂಗಗಳನ್ನು ನೋಡತೊಡಗಿದ. ರಂಗುರಂಗಿನ ಆ ಹುಳಗಳನ್ನು ಕೆಲ ಕ್ಷಣ ನೆಟ್ಟ ನೋಟದಿಂದ ದಿಟ್ಟಿಸಿ, ಬಳಿಕ ನಗುತ್ತ ನುಡಿದ; "ಬದುಕಿದ್ದಾಗ ನಾನು ಇವುಗಳ ಮೇಲೆ ಕವನ ಕಟ್ಟಿದ್ದೆ. ಎಂಥೆಂಥ ಉಪಮಾನಗಳನ್ನು ಕೊಟ್ಟಿದ್ದೆ! ಹೆಣ್ಣು ದೀಪದ ಕುಡಿ, ಗಂಡು ಪತಂಗ, ದೀಪದ ಕುಡಿಯ ಮೋಹದಿಂದ ಪತಂಗ ಹಾರಿ ಬಂದು ಅದರಲ್ಲಿ ನುಗ್ಗುತ್ತದೆ ಸುಟ್ಟು ಬೂದಿಯಾಗುತ್ತದೆ. ಉಪಮೆ ಸವಿಕಟ್ಟಾಗಿಲ್ಲವೆ?" ಮನುಷ್ಯ ಮತ್ತೆ ಸ್ವಲ್ಪ ಹೊತ್ತು ದೀಪಲುಬ್ಧವಾದ ಆ ಪತಂಗಗಳನ್ನು ಮೌನದಿಂದ ದಿಟ್ಟಿಸುತ್ತ ನಿಂತ. ಆ ಮೇಲೆ ಹುಡುಗಿಯ ಕಡೆ ಹೊರಳಿ ಹೇಳಿದ; "ಮರ್ತ್ಯಲೋಕದ ಜನ ಸ್ವಾರ್ಥವೊಂದನ್ನು ಬಿಟ್ಟು ಮತ್ತೇನೂ ಅರಿಯರು. ನಿಃಸ್ವಾರ್ಥವೆಂದು ಅವರು ಮಾಡುವ ಕೆಲಸಗಳಲ್ಲಿ ಸಹಿತ ಒಳಗೊಳಗೇ ಒಂದು ಸ್ವಾರ್ಥ ಇರುತ್ತದೆ ಅತ್ಮತೃಪ್ತಿ. ನೋಡು, ನಾನಾಗಿದ್ದೆ ಕವಿ. ಯಾರಿಗೂ ಏನೂ ಕೇಡು ಬಗೆದವನಲ್ಲ. ನನ್ನ ಕಲ್ಪನಾಲೋಕದಲ್ಲಿ ನನ್ನ ಪಾಡಿಗೆ ನಾನಿದ್ದೆ. ಹೊರ ಜಗತ್ತಿನ ಕೂಡ ಸಂಬಂಧ ಬಂದದ್ದೇ ಕಡಿಮೆ. ಆದರೆ ಜನರು ಬಿಡುವರೆ? ಎಲ್ಲ ಸೇರಿ ನನ್ನ ಇಷ್ಟು ಠಕ್ಕಿಸಿದರು–ಕಡೆಗೆ ಕಾಲುಜಾರಿ ಬೀಳಲೇ ಬೇಕಾಯಿತು. ನನ್ನ ಬಂಧು ಬಾಂಧವ ಆತ್ಮೀಯ ಸ್ವಜನರೆಲ್ಲ ನಾನೊಬ್ಬ ಮರುಳನೆಂದೇ ಗೊತ್ತು ಮಾಡಿಕೊಂಡಿದ್ದರು. ಹಾಡಿನ ಮೇಲೆ ಹಾಡು ಕಟ್ಟಿ ಯಾರನ್ನು ಆರಾಧಿಸಿದ್ದೆನೋ ಅವಳು ಕೂಡ ಕೊನೆಗೆ ನನಗೆ ಮಂಕುಬೂದಿ ಹಚ್ಚಿದಳು. ಅವಳು ಸಹಿತ ನನಗೆ!" ಎಂದು ಯುವಕ ಹಾ ಹಾ ಎಂದು ಗಹಗಹಿಸಿದ.

ನಗುನಗುತ್ತಲೇ ಆತ ಮುಂದುವರಿಸಿದ – "ಈಗ ಆಕೆಗೆ ಪಶ್ಚಾತ್ತಾಪ ವಾಗಿದೆಯಂತೆ; ನಾ ಸತ್ತ ಮೇಲೆ ಅವಳೂ ಸತ್ತಳೆಂದು ಕೇಳಿದ್ದೇನೆ. ಇಲ್ಲಿ ಕಣ್ಣಿಗೆ ಬೀಳುವವರೆಲ್ಲ ಗುರುತಿಲ್ಲದ ಜನ. ಅವಳನ್ನು ಎಲ್ಲಾದರೂ ನೋಡಿದರೆ ನನ್ನ ಕಡೆ ಕರೆತನ್ನಿರಿ."

ಹುಡುಗಿ ನಕ್ಕು ಕೇಳಿದಳು: "ನೀವು ಅವಳನ್ನು ಪ್ರೀತಿಸುತ್ತಿದ್ದಿರಾ?" ಕವಿ ಮರುಮಾತಾಡಲಿಲ್ಲ. ಅವನ ಮುಖ ಒಮ್ಮೆ ಆರಕ್ತವಾಗಿ ಮತ್ತೆ ಬೆಳ್ಳಂಬಿಳುಪಾಗಿ ಹೋಯಿತು. ಹಣೆಯ ಬಿರುಕಿನಿಂದ ಮತ್ತಷ್ಟು ಮಿದುಳು ಬಳಬಳನೆ ಹೊರಬಿತ್ತು. ಅವನು ಯಾವ ಮಾತನ್ನೂ ಆಡಲಿಲ್ಲ.

ಹುಡುಗಿ ಪುನಃ ಕೇಳಿದಳು, "ಉತ್ತರವಿಲ್ಲ, ಅಲ್ಲವೆ?"

"ನನ್ನ ಕೇಳಬೇಡ" ಕವಿಯೆಂದ.

"ಪ್ರೀತಿ ಎಂಬ ಮಾತು ಇಷ್ಟು ಅಗ್ಗ, ಇಷ್ಟು ಹುಡುಗಾಟಿಕೆಯ ಸಂಗತಿಯಾಗಿಬಿಟ್ಟಿದೆ, ಅದನ್ನು ಉಪಯೋಗಿಸಲಿಕ್ಕೆ ನನಗೆ ನಾಚಿಕೆಯಾಗುತ್ತದೆ. ಹೆಸರು ಹೇಳಿದರೆ ಅದಕ್ಕೆ ಅವಮಾನ ಎಂದು ತೋರುತ್ತದೆ. ಹಿಂದೊಮ್ಮೆ ಒಂದು ಕವಿತೆಯಲ್ಲಿ ನಾ ಬರೆದದ್ದು ನೆನಪಿಗೆ ಬರುತ್ತದೆ ನೋಡು, ಅದು ಹೀಗಿತ್ತು.

"ಬಣ್ಣ ಬಣ್ಣದೆನ್ನ ಮಾತು
ಮನದೊಳಗೇ ಬೈತಿದೆ,
ಅದಕೆ ರೂಪುಗೊಡುವೆನೆಂದು
ಕವಿತೆ ಹಾರೈಸಿದೆ
ಆದರೆ
"ಈಸು ಬಣ್ಣ ಕವನ ಭಾಷೆಗೆಲ್ಲಿ?–
ನನ್ನ ಸಂದೇಹ, ಬರೆಯ ಹೋದ
ಲೇಖನಿಯೇ ತಗಲಿಸದೇ ಮಸಿಲೇಪ?"

ಹುಡುಗಿಯ ಕುತೂಹಲ ಹೆಚ್ಚಿತು. "ನೋಡಲಿಕ್ಕೆ ಹೇಗಿದ್ದಳು ನಿಮ್ಮ ಪ್ರೇಯಸಿ?" ಎಂದು ಕೇಳಿದಳು.

"ನೋಡಲಿಕ್ಕೆ? ಬಣ್ಣ ಎಣ್ಣೆಗಪ್ಪು. ತಲೆಗೂದಲು ಕೆದರಿಹಾಕಿದರೆ ಬೆನ್ನೆಲ್ಲ ಮುಚ್ಚಬೇಕು. ದೊಡ್ಡ ದೊಡ್ಡ ಕಣ್ಣುಗಳು. ಮುಖ ಯಾವಾಗಲೂ ಅರಳಿಯೆ ಇರಬೇಕು. ತುಟಿಗಳಲ್ಲಿ ನಗೆಕಾಣದಿದ್ದಾಗ ಕಣ್ಣಿರಡೂ ನಗುಬುಗ್ಗೆ. ಅವಳ ನಗು

ಅದ್ಭುತ..... ರಿವಾಲ್ವರಿನಿಂದ ಹಣೆಯ ಮೇಲೆ ಗುಂಡುಹಾರಿಸಿಕೊಂಡು ನಾನು ಆತ್ಮಹತ್ಯೆ ಮಾಡಿಕೊಂಡ ಮರುದಿನವೇ ಅವಳು ಮೈಗೆ ಉರಿಹಚ್ಚಿಕೊಂಡು ಸತ್ತಳಂತೆ-ಚಿಮಣಿ ಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು. ಏನು ಬಂದಿತ್ತು ಅವಳಿಗೆ ಜೀವ ಕಳೆದುಕೊಳ್ಳುವಂಥಾದ್ದು? ಎಂಥ ಗಂಡ, ಎಂಥ ಸಂಸಾರ ಅವಳದು. ಅವಳೆಲ್ಲಾದರೂ ಭೆಟ್ಟಿಯಾದರೆ-ಎಲಾ ಎಲ್ಲಿ ಹೋದಳವಳು?" ಮಗುವನ್ನು ಕೊಂದವಳು ಸದ್ದಿಲ್ಲದೆ ಮಾಯಾವಾಗಿ ಬಿಟ್ಟಿದ್ದನ್ನು ಕವಿ ನೋಡಿಯೆ ಇರಲಿಲ್ಲ. ಕಡೆಗೆ ಕವಿ ನನ್ನತ್ತ ಹೊರಳಿ ಹೇಳಿದ, 'ನೋಡಿರಿ ಡಾಕ್ಟರ್, ಅವಳೆಲ್ಲಾದರೂ ನಿಮಗೆ ಸಿಕ್ಕಿದರೆ ನನ್ನ ಮಾತು ತಿಳಿಸಿರಿ, ಹೇಳಿರಿ, ಆ ದಿನ ರಾತ್ರಿ ಮನಸ್ಸಿನಲ್ಲಿದ್ದದ್ದನ್ನೆಲ್ಲ ಹೇಳಲು ಸಾಧ್ಯವಾಗಿರಲಿಲ್ಲ. ಈಗ ಭೆಟ್ಟಿಯಾದರೆ ಹೇಳುವೆ, ಅಂತ. ಅವಳು ನನ್ನನ್ನು ತಪ್ಪು ತಿಳಿದು ಕೊಂಡಿದ್ದಳು. ಅವಳು ತಪ್ಪು ತಿಳಿವಳಿಕೆ ನೀಗಿಸಬೇಕಾಗಿದೆ."

ಯುವಕ ಹೊರಟುಹೋದ.

ಸ್ತಬ್ಧನಾಗಿ ಕುಳಿತ್ತಿದ್ದೇನೆ.

ಸುತ್ತಮುತ್ತ, ಹತ್ತಿರ ದೂರ, ಎಲ್ಲ ಕಡೆ ಹೆಣಗಳ ಅಲೆದಾಟ.

ಹಠಾತ್ತಾಗಿ ಯಾರೋ ಮಾತಾಡುತ್ತಿರುವಂತೆ ತೋರಿತು. ನೋಡಿದೆ, ಬಣ್ಣ ಬಣ್ಣದ ಪತಂಗ ನುಡಿಯುತ್ತಿದೆ.

"ಹೇ ಮನುಷ್ಯ ನಿರ್ಮಿತ ದೀಪಿಕೇ, ನಿನ್ನನ್ನು ನೋಡಿದರೆ ಕನಿಕರ ವಾಗುತ್ತದೆ. ಓ ದೀಪದ ಕುಡಿಯೇ, ಹೇ ಬಂದಿನಿಯೆ, ನಿನ್ನ ಪಾಡು ಕಂಡು ನನ್ನ ಅಂತಃಕರಣವೆಲ್ಲ ಅನುಕಂಪೆಯಿಂದ ಕರಗುತ್ತದೆ. ಹೇಳಿಕೇಳಿ ಮಾನವನ ಕೈಯ ಕ್ಷುದ್ರ ಆಟಿಗೆ ನೀನು; ವಿಧಾತನೇ ಬೇಕೆಂದು ಸೃಜಿಸಿದ ಈ ಗಾಢ ಅಂಧಕಾರ ವನ್ನು ನಿವಾರಿಸುವ ವ್ಯರ್ಥ್ಯಪ್ರಯತ್ನದಲ್ಲಿ ಉರಿದುರಿದು ಸಾಯುತಿರುವಿಯಲ್ಲ! ಕತ್ತಲೆಯನ್ನು ಬೆಳಗಲಾರಿ ನೀನು, ಬರಿದೆ ಅವರ ಸೊಂಪನ್ನಿಷ್ಟು ಕೆಡಿಸುವಿ. ನಿನ್ನೀ ಅಕಿಂಚನ ಅಸ್ತಿತ್ವ ಎಷ್ಟು ಹಾಸ್ಯಾಸ್ಪದವೆಂದು ನೀನು ನೀನಾಗಿಯೇ ತಿಳಿದು ಕೊಳ್ಳಲಾರಿ. ನಿನ್ನನ್ನು ನೋಡಿ ನನಗೆ ಅಯ್ಯೋ ಎನಿಸುತ್ತದೆ."

ದೀಪದ ಕುಡಿ ನಡುಗಿತು. ಹೆದರಿದ ದನಿಯಲ್ಲಿ ಕೇಳಿತು, "ಯಾರು ನೀನು?"

"ನಾನು? ನಾನು ಬೆಳಕಿನ ಭಕ್ತ. ಪ್ರದೀಪ್ತ ಸೂರ್ಯನೇ ನನ್ನ ಆರಾಧ್ಯ ಮೂರ್ತಿ. ಬಣ್ಣಬಣ್ಣದ ಚಿತ್ರ ವಿಚಿತ್ರ ರೆಕ್ಕೆಗಳೆರಡನ್ನು ಬಿಚ್ಚಿ ಅನುದಿನವೂ

ಅವನನ್ನುದ್ದೇಶಿಸಿಯೆ ಆಕಾಶಯಾತ್ರೆ ಮಾಡುವೆ. ಬಹಳ ದೂರ ಹೋಗಲಾರೆ- ರೆಕ್ಕೆಗಳು ಸೋತು ಹೋಗುತ್ತವೆ. ಪೃಥ್ವಿಯ ಸೆಳೆತ ಮತ್ತೆ ನೆಲಕ್ಕೆ ಇಳಿಸಿ ಬಿಡುವದು. ದಿವಾಕರ ಅಸ್ತಂಗತನಾಗುವ. ಅಂಧಕಾರ ಬಂದು ಪ್ರಪಂಚವನ್ನು ಮುಸುಕಿಬಿಡುವದು. ಗಂಭೀರ ನಿಬಿಡ ಅಂಧಕಾರದಲ್ಲಿ ಆ ಸೂರ್ಯದೇವನ ನಿದಿಧ್ಯಾಸದಲ್ಲಿ ಮಗ್ನನಾಗಿದ್ದೆ. ನನ್ನ ತಪೋಭಂಗ ಮಾಡಿದಿ ನೀನು. ನಿನ್ನನ್ನು ಶಪಿಸಿ ಬಿಡುವವನಿದ್ದೆ, ಆದರೆ ನಿನ್ನನ್ನು ನೋಡಿ ಮನ ಕರಗಿತು. ಹೇ ನಕಲಿಜ್ಯೋತಿಯೆ ಹೇ ಕಪ್ಪು ಬೀರುವ ಕೆರೋಸಿನ್ ಶಿಖೆಯೆ, ದಿವ್ಯ ಜ್ಞಾನವನ್ನು ಹೊಂದಿ ನೀನು ಆರಿಹೋಗು!"

ದೀಪದ ಕುಡಿ ಕಂಪಿಸತೊಡಗಿತು.

"ಕಾಯಿದೆಯನ್ನು ನಂಬುತ್ತೀರಾ?"

ಕೇಳಿದವನು ಬಡಕಲು ಮೈಯ ಒಬ್ಬ ಯುವಕ. ಅವನ ಮೂಗು ಖಡ್ಗದಂತಿತ್ತು. ಒಣಗಿದ ಮುಖದ ಗುಳಿಬಿದ್ದ ಕಣ್ಣುಗಳಲ್ಲಿ ಅನೈಸರ್ಗಿಕ ತೀಕ್ಷ್ಣತೆ. ಅವು ಜ್ಯೋತಿಗಳಲ್ಲ, ಜ್ವಾಲೆಗಳು. ನೆತ್ತಿಯ ಮುಂಭಾಗದಲ್ಲಿ ಕೂದಲು ವಿರಳ. ಉಳಿದ ಕೂದಲು ನೀಳ, ಅಸ್ತವ್ಯಸ್ತ. ಬಾಚಿ ಎಷ್ಟು ದಿನವಾಗಿತ್ತೊ ಏನೋ. ಎರಡೂ ಕಿವಿಗಳ ಬಳಿ ಪೊದರುಗಟ್ಟಿದ ಕೂದಲುಗಳು ಕತ್ತಲೆಯ ಎರಡು ತುಂಡುಗಳಂತೆ ಕಂಗೊಳಿಸುತ್ತಿದ್ದವು. ಅವು ಹಣೆಯ ಮತ್ತು ಕೆನ್ನೆಗಳ ಕೆಲ ಭಾಗವನ್ನು ಮುಚ್ಚಿದ್ದವು. ಬತ್ತಿ ಚೂಪಾದ ಗಲ್ಲದ ಮೇಲೆ ನಾಲ್ಕಾರು ರೋಮಗಳು ನಿಮಿರಿ ನಿಂತಿದ್ದವು.

ಹುಬ್ಬುಗಂಟಿಕ್ಕಿ ನಡುಗುವ ತುಟಿಗಳಿಂದ ಪ್ರಶ್ನಿಸಿದನಾತಃ "ಕಾಯಿದೆಯನ್ನು ನಂಬುತ್ತೀರಾ? ಕಾಯಿದೆಯನ್ನು? ಯಾವುದಕ್ಕೋಸ್ಕರ ಇಷ್ಟೆಲ್ಲ ನ್ಯಾಯ ಸ್ಥಾನ ಗಳು, ಇಷ್ಟು ಜಜ್ಜರು, ಇಷ್ಟು ಪುಸ್ತಕಗಳು, ಇಷ್ಟು ವಕೀಲರೋ? ಯಾವುದಕ್ಕೆ ನೆರವಾಗಲೆಂದು ನೀವು ಅಹೋರಾತ್ರಿ ಕೈಯಲ್ಲೆ ಚೂರಿ ಹಿಡಿದುಕೊಂಡು ಸನ್ನದ್ಧರಾಗಿರುತ್ತೀರೋ ಆ ಕಾಯ್ದೆಯ ಮೇಲೆ ವಿಶ್ವಾಸವುಂಟೆ ನಿಮಗೆ?" ಅವನ ದನಿಯೇರಿತು. ಕಣ್ಣುಗಳೆರಡೂ ಉರಿದೆದ್ದವು. ಎರಡು ಕೆಂಡಗಳಂತಿದ್ದವು ಅವು. ಎರಡೂ ಮೂಗಿನ ಸೊಳ್ಳೆಗಳಿಂದ ಕಾದ ಉಗಿ ಹೊರಹೊಮ್ಮುತಿತ್ತು. ಮುಖವನ್ನು ನನ್ನ ಮುಖದ ಸಮೀಪಕ್ಕೆ ತಂದು ನೆಟ್ಟ ನೋಟದಿಂದ ದಿಟ್ಟಿಸುತ್ತ ನಿಂತ. ಅವನ ಭುಗಿಲೆಂದು ಸುಡುವ ಉಸಿರು ನನ್ನ ಮುಖವನ್ನು ಸ್ಪರ್ಶಿಸತೊಡಗಿತು. ತುಟಿಗಳು ಸಹಸಾ ಸಿಡಿದೆದ್ದವು-"ವಿಶ್ವಾಸವಿದೆಯೇ ಕಾಯಿದೆಯಲ್ಲಿ?"

ನಾನೆಂದೆ, "ಇಲ್ಲದೆ ಉಂಟೆ? ಆ ಕಾಯಿದೆಯ ಮೇಲೆ ವಿಶ್ವಾಸವಿಲ್ಲದಿದ್ದರೆ ಈ ಜಗತ್ತಿನಲ್ಲಿ ಬದುಕುವದಾದರೂ ಹೇಗೆ?"

ಅವನ ತುಟಿಗಳಲ್ಲಿ ಮಿಂಚಿನ ಹೊಳಹಿನಂತೆ ತೀಕ್ಷ್ಣವಾದ ನಗೆಯೊಂದು ಝುಳಪಿಸಿ ಹೋಯಿತು. ಉರಿಯುವ ಕಣ್ಣುಗಳನ್ನು ಮಿಟುಕಿಸಿ ಅವನು ಸ್ವಲ್ಪ ಸಮಾಧಾನದಿಂದಲೆ ಹೇಳತೊಡಗಿದ. "ಓ ಮರೆತೇ ಬಿಟ್ಟಿದ್ದೆ ನೋಡಿರಿ. ನೀವು ಇನ್ನೂ ಬದುಕಿ ಇದ್ದೀರಲ್ಲವೆ! ನೀವು ನಂಬದೆ ಉಂಟೆ? ಸಮಾಜದ ಜೀವಂತ ಮನುಷ್ಯರು ನೀವು. ನೀವು ನಂಬದಿದ್ದರೆ ಹೇಗೆ? ನೀವು ಕಾಯಿದೆಯಲ್ಲಿ ವಿಶ್ವಾಸ ಇಡುವವರೇ. ಇಡದೆ ಉಂಟೆ?" ಸ್ವಲ್ಪ ಹೊತ್ತು ಶಾಂತನಾಗಿದ್ದು ಅವನು ತನ್ನೊಳಗೇ ಮಾತಾಡುತ್ತಿರುವವನಂತೆ ಇಳಿದನಿಯಲ್ಲಿ ಗೊಣಗತೊಡಗಿದ. "ಉಗ್ರಾಣವಿರುವಷ್ಟು ಕಾಲ ಇಲಿ, ಹೆಗ್ಗಣ ಬಿದ್ದೇ ಬೀಳುವವು. ಜೀವಂತ ಮನುಷ್ಯರಿಗೆ ಇಲಿಗಳ ಭಯ ಎಂದೂ ತೀರಲಾರದು. ಎಷ್ಟಾದರೂ 'ಜೀವನ ಸಂಗ್ರಾಮ' 'ಸ್ಟ್ರಗ್ಲ್ ಫಾರ್ ಎಗ್ಜಿಸ್ಟನ್ಸ್' ಬಿಡಲು ಬಂದೀತೆ? ನನ್ನನ್ನುದ್ದೇಶಿಸಿ ಮತ್ತೆ ನುಡಿದನಾತ: "ಎಂಥೆಂಥ ಚಂದದ ಮಾತುಗಳನ್ನು ಕಟ್ಟಿ ಬಾಯಿಪಾಠ ಹೇಳುತ್ತೀರಿ ನೀವು? ಈ ಒಂದು ಮಂತ್ರದ ಸುಳಿಯಲ್ಲಿ ಲಕ್ಷ ಲಕ್ಷ ಜನ ಬಲಿಯಾಗುತ್ತಾರೆ. ಕಾಯಿದೆಯನ್ನು ನೀವು ನಂಬದೆ ಇರುತ್ತೀರಾ? ನಾನು ಇಟ್ಟಿದ್ದೆ. ಬದುಕಿದ್ದಾಗ ಎಷ್ಟೋ ವ್ಯಾಜ್ಯಗಳನ್ನು ಹೂಡಿದೆ. ಕಾಯಿದೆಯ ಮೇಲೆ ನನಗೂ ಅಗಾಧ ಭಕ್ತಿ ಇತ್ತು. ಅನೇಕ ವಕೀಲರ ಅನೇಕ ಜೇಬುಗಳು ನನ್ನ ಹಣದಿಂದ ತುಂಬಿದ್ದವು. ಆದರೆ ನನ್ನ ಭಕ್ತಿ, ನನ್ನ ವಿಶ್ವಾಸ ಸರಿಯಾಗಿತ್ತೆ? ಬಂಧು ಬಾಂಧವರು, ಇಷ್ಟ ಮಿತ್ರರು, ಎಲ್ಲರೂ ಬಗೆಬಗೆಯಿಂದ ಹೇಳಿ ನೋಡಿದರು. ಬೇಡ, ನಿನ್ನಿಂದ ನಡೆಯದು. ಸೋತು ಹೋಗುವಿ. ಬಿಟ್ಟುಬಿಡು ಈ ಹುಚ್ಚು. ಆದರೆ ನಾನೆಲ್ಲಿ ಕಿವಿಗೊಟ್ಟೆ? ಕಾಯಿದೆಯಲ್ಲಿ ನನ್ನ ಭಕ್ತಿ ಅಷ್ಟು ಗಾಢವಾಗಿತ್ತು. ಕಡೆಗೆ ಭಕ್ತಿಯ ಫಲ ದೊರಕಿತು. ಊರ ಮಂದಿಯ ಮುಂದೆ ಆ ದಿನ ಡಾಣಾಡಂಗುರವಾಗಿ ಸಿದ್ಧವಾಗಿ ಹೋಯಿತು–ನನ್ನ ಹೆಂಡತಿ ಅಕಲಂಕ ಪತಿವ್ರತೆ ಮತ್ತು ಆ ನಿರ್ಮಲನೋ ಶುದ್ಧ ಚರಿತ್ರನಾದ ಯುವತಿ–ಎಂಬದಾಗಿ. "ಆನರೇಬ್ಲೀ ಅಕ್ವಿಟೆಡ್!" ಕಾಯಿದೆಯಂತೆ, ಕಾಯಿದೆ! ಈಗ ಕಾಯಿದೆಯಲ್ಲಿ ನನಗೆ ವಿಶ್ವಾಸವಿಲ್ಲ–ರೂಪಾಯಿಯಲ್ಲಿದೆ. ಆ ಬಡ್ಡೀ ಮಗ ನಿರ್ಮಲನ ಹತ್ತಿರ ಧಾರಾಳ ಹಣವಿತ್ತು."

ಮನುಷ್ಯ ಕ್ಷಣದಲ್ಲಿ ಅಂತರ್ಧಾನವಾದ. ನಾನೊಬ್ಬನೇ ಕುಳಿತಿದ್ದೆ. ನನ್ನ ದೃಷ್ಟಿ ಮೇಜಿನ ಮೇಲಿದ್ದ ಪುಸ್ತಕದ ಮೇಲೆ ಬಿತ್ತು. ಅದನ್ನೇ ಎತ್ತಿಕೊಂಡು ಓದತೊಡಗಿದೆ. ಲ್ಯಾಪಲಂಡಿನ ಒಂದು ಕತೆ. ಒಬ್ಬ ವಿದೇಶೀ ಯುವಕನಿಗೆ ಲ್ಯಾಪ ಯುವತಿಯೊಬ್ಬಳು ದಾರಿತೋರಿಸುತ್ತ ಹೊರಟಿದ್ದಾಳೆ. ಯುವಕ ಆ ಪ್ರಸಂಗವನ್ನು ಬಣ್ಣಿಸುತ್ತಾನೆ?

"ಯುವತಿ ದಾರಿ ತೋರಿಸುತ್ತ ಮುಂದೆ ಮುಂದೆ ಹೋಗುತ್ತಿದ್ದಳು, ನಾನು ಅವಳನ್ನು ಅನುಸರಿಸುತಿದ್ದೆ. ಅವಳ ಮುಖವೆಷ್ಟು ಸುಂದರ, ಅವಳ ವೇಷವೆಷ್ಟು ಅಪೂರ್ವ! ಚಿಗರಿ ಚರ್ಮದ ಉಡುಗೆ, ತಲೆಯ ಮೇಲೆ ಉಣ್ಣೆಯ ಟೋಪಿ. ಟೊಂಕಕ್ಕೆ ಅಗಲವಾದ ತೊಗಲಿನ ಪಟ್ಟಿ ಬಿಗಿದಿದ್ದಳು. ಆ ಬೆಲ್ಟಿನಲ್ಲಿ ಹಳದಿ-ನೀಲ ವರ್ಣಗಳ ಚಿತ್ತಾರದ ಕೆಲಸ. ಬೆಲ್ಟಿನ ಮೇಲೆ ಅಚ್ಚ ಬೆಳ್ಳಿಯ ದೊಡ್ಡ ದೊಡ್ಡ ಗುಂಡಿಗಳು. ಕೆಲವು ಚೌಕು, ಕೆಲವು ದುಂಡು. ಬೆಲ್ಟಿನಿಂದ ಒಂದು ದೊಡ್ಡ ಚೂರಿ, ಒಂದು ತಂಬಾಕಿನ ಚಂಚಿ, ಒಂದು ನೀರು ಕುಡಿಯುವ ಮಗ್ ಜೋತಾಡುತ್ತಿವೆ. ಅಡ್ಡಬಂದ ಗಿಡ ಪೊದರುಗಳನ್ನು ಸವರಿ ಹಾಕಲು ಒಂದು ಚಿಕ್ಕ ಕೈ-ಕೊಡಲಿಯನ್ನು ಬೆಲ್ಟಿನ ಸಂದಿಯಲ್ಲಿ ತುರುಕಿಕೊಂಡಿದ್ದಳು. ಅವಳ ಕಾಲುಗಳು ಮೆತ್ತನ್ನ ಚಿಗರಿ ಚರ್ಮದ 'ಲೆಗಿಂಗ್'ನಿಂದ ಮುಚ್ಚಿದ್ದವು. ಚಿಗರಿ ಚರ್ಮದ ಬ್ರಿಚೆಸ್ ತೊಟ್ಟಿದ್ದಳವಳು. ಚರ್ಮದ ಪಾದರಕ್ಷೆಗಳು, ಅವುಗಳ ಮೇಲೆ ನೀಲ ವರ್ಣದ ಕಸೂತಿ ಕೆಲಸ. ಬೆನ್ನ ಮೇಲೊಂದು ಬರ್ಚಗಿಡದ ತೊಗಲಿನಿಂದ ಮಾಡಿದ ಸಂಚಿ. ಅದರಲ್ಲಿ ನಾನಾವಿಧ ವಸ್ತುಗಳ ಸಂಚಯ ನನ್ನ ಹೆಗಲ ಮೇಲೂ ಒಂದು ಸಂಚಿಯಿತ್ತು. ಆದರೆ ಅವಳದು ನನ್ನದರಕ್ಕಿಂತ ಇಮ್ಮಡಿ ಭಾರವಾಗಿದ್ದಿರಬಹುದು.

"ಕಡಿದಾದ ಗುಡ್ಡಗಳ ಮೇಲಿಂದ ದ್ರುತಗತಿಯಲ್ಲಿ ಆದರೂ ನಿಶ್ಯಬ್ದವಾಗಿ ಆಕೆ ನಡೆದಿದ್ದಳು. ಎದುರಿಗೆ ಉರುಳಿದ ಮರಗಳಾಗಲಿ ಸಣ್ಣಪುಟ್ಟ ಬೆಟ್ಟದ ತೊರೆಗಳಾಗಲಿ ಅಡ್ಡಬಂದರೆ ಲೀಲಾಯಮಾನವಾಗಿ ಜಿಗಿದು ದಾಟಿಹೋಗುತ್ತಿದ್ದಳು. ಎದುರಿಗೆ ಬಲುದೊಡ್ಡ ಬಂಡೆಗಲ್ಲೊಂದು ಬಿದ್ದಿತ್ತು. ಅದು ದಾರಿಯನ್ನು ಸಂಪೂರ್ಣವಾಗಿ ಮುಚ್ಚಿಬಿಟ್ಟಿತ್ತು. ಆದರೆ ಹುಡುಗಿ ಚಿಗರಿಯಂತೆ ನೆಗೆದು ಅದನ್ನೇರಿ ನಾಲ್ಕೂ ಕಡೆ ಕಣ್ಣು ಹಾರಿಸಿ ದಾರಿಯ ಕುರುಹುಗಳನ್ನು ಅನ್ವೇಷಿಸಿದಳು. ಅವಳ ಹಿಂದೆ ಗುಡ್ಡವನ್ನೇರಿ ಆ ಕಡೆ ಇಳಿದು ನೋಡಿದರೆ ಒಂದು ದೊಡ್ಡ ಹೊಳೆ. ಬಹಳ ಅಗಲ, ಮೊದಲಿನಂತೆ ಹಾರಿ ಪಾರಾಗುವುದು ಸಾಧ್ಯವಿದ್ದಿಲ್ಲ. ಇದನ್ನು ಹೇಗೆ ದಾಟೋಣವೆಂದು ನಾನು ಚಿಂತಿಸುತಿದ್ದಂತೆಯೆ ಹುಡುಗಿ ನಿಶ್ಯಂಕೆಯಿಂದ ನೀರಲ್ಲಿ ಇಳಿದಳು. ನಾನು ಅವಳನ್ನನುಸರಿಸಿದೆ. ಆ ಹಿಮ ಶೀತಲವಾದ ನೀರಲ್ಲಿ ಹಿಂದೆ ಮುಂದೆ ನೋಡದೆ ಇಳಿದೆ-"

"ಏನದು ಓದುತ್ತಿರುವದು?"

ಕಣ್ಣೆತ್ತಿ ನೋಡುತ್ತೇನೆ, ಪುನಃ ಕಾಯಿದೆ ಮರುಳ ಮನುಷ್ಯನೇ ಬಂದು ನಿಂತಿದ್ದಾನೆ. ತನ್ನ ಜ್ವಲಂತ ದೃಷ್ಟಿಗಳನ್ನು ನನ್ನ ಮುಖದಲ್ಲಿ ನಟ್ಟು ಹೇಳಿದ, "ಆ

ಕಥೆ ಪುಸ್ತಕವೆಲ್ಲ ಒತ್ತಟ್ಟಿಗಿರಲಿ. ನನ್ನ ಕಥೆಯನ್ನೊಂದಿಷ್ಟು ಕೇಳಿರಿ. ಆಗ ಎಲ್ಲಿವರೆಗೆ ಹೇಳಿದ್ದೆ?"

"ನಿರ್ಮಲ 'ಆನರೇಬ್ಲೀ ಅಕ್ವಿಟೆಡ್' ಆದ"

"ಹಾಂ, ಅದೇ 'ಆನರೇಬ್ಲಿ ಅಕ್ವಿಟೆಡ್'! ವರ್ತಮಾನ ಪತ್ರಗಳಲ್ಲಿ ಏನು ಗಲಾಟೆ! ಒಮ್ಮೆ ನನಗೆನಿಸಿತು- ಏನೆನಿಸಿತ್ತು ಹೇಳಿರಿ ನೋಡೋಣ?" ಎಂದು ಕ್ಷಣ ಹೊತ್ತು. ಅವನು ತೀಕ್ಷ್ಣ ದೃಷ್ಟಿಯಿಂದ ನನ್ನ ಮುಖನೋಡುತ್ತ ನಿರೀಕ್ಷಿಸಿದ. ಆ ಮೇಲೆ, ನನ್ನ ಮನಸಿನೊಳಗಿನ ಮಾತುಗಳನ್ನು ಓದಿಕೊಂಡವನಂತೆ ತೀವ್ರ ವ್ಯಂಗ್ಯ ಹಾಸ್ಯದೊಡನೆ ತಾನೇ ಉತ್ತರ ಕೊಟ್ಟ; "ಅಲ್ಲ ಅಲ್ಲ, ಅಪೀಲು ಮಾಡಬೇಕೆಂದಲ್ಲ, ಕೊಲೆ-ಕೊಲೆ ಮಾಡಬೇಕೆಂದು ಅನಿಸಿತು. ಆದರೆ ಕೈಯಲ್ಲಿ ಒಂದು ಕಾಸೂ ಇದ್ದಿಲ್ಲ. ಕೊಲೆ ಮಾಡುವದಾದರೂ ಹೇಗೆ? ಬಂದೂಕು ಇಲ್ಲದಿದ್ದರೆ ಇಲ್ಲ. ಒಂದು ಒಳ್ಳೆ ಚಾಕು ಆದರೂ ಬೇಕಲ್ಲ. ಚಾಕು ಕೊಳ್ಳಲಿಕ್ಕೆ ಕೂಡ ನನ್ನ ಹತ್ತಿರ ಕಾಸಿರಲಿಲ್ಲ. ಆಯುಧ ಜಾತಿಯಲ್ಲಿ ಮನೆಯಲ್ಲಿದ್ದದ್ದೆಂದರೆ ಒಂದು ಮೊಂಡ ಅಡಗತ್ತರಿ ಮತ್ತು ಒಂದು ಮೊಂಡ ಈಳಿಗೆ. ಕಾಯಿದೆಯಂಥ ತೀಕ್ಷ್ಣ ಆಯುಧವನ್ನೂ ವ್ಯಾಹತಗೊಳಿಸಿ ಹಿಮ್ಮೆಟ್ಟಿಸಿದ ಮನುಷ್ಯನನ್ನ ಕೊಲ್ಲ ಬೇಕಾದರೆ ಹದನಾಗಿ ಸಾಣೆ ಹಿಡಿದು ಮಸೆದ ಆಯುಧವಿಲ್ಲದಿದ್ದರೆ ನಡೆದೀತೆ? ಅಂತೂ ಕೊಲೆ ಮಾಡಬೇಕಾದರೂ ಹಣಬೇಕು. ಬರಿಗೈ ಬಂಟ ಯಾರನ್ನೂ ಕೊಲ್ಲಲು ಕೂಡ ಸಮರ್ಥನಲ್ಲ - ಅದರಲ್ಲಿ ಕೊಲ್ಲ ಬಯಸುವವನು ನನ್ನಂತೆ ಆಶಕ್ತನಾಗಿದ್ದರೆ."

ಮನುಷ್ಯ ನಗತೊಡಗಿದ. ಏನು ಹಾಳು ಸುರಿಯುವ ನಗೆ ಅದು! ಭುಗಿಲೆದ್ದು ಉರಿಯುವ ಚಿತಾವಹ್ನಿಯಂತೆ.

ಸ್ವಲ್ಪ ತಡೆದು ಆತ ಮುಂದುವರಿಸಿದ

"ವಿಚಾರಿಸಿ ನೊಡಿದೆ, ಬಲಹೀನರಿಗೆ ಮರಣವಲ್ಲದೆ ಬೇರೆ ಉಪಾಯ ವಿಲ್ಲ. ಮೃತ್ಯುವೊಬ್ಬನೆ ಅವನ ಏಕಮಾತ್ರ ಬಂಧು, ಏಕಮಾತ್ರ ದಿಕ್ಕು. ಆದರೆ ಇದು ನೋಡಿರಿ, ಸತ್ಯ ಹೇಳುತ್ತೇನೆ. ಸಾಯಬೇಕಾದರೆ ನನಗೆ ತುಂಬ ಸಂಕಟ ವಾಯಿತು. ನನಗೆ ಸಾಯಲು ಮನಸಿದ್ದಿಲ್ಲ. ದಾರಿ ನೋಡಿದೆ- ಹಾಂ, ಅವಳಿಗಾಗಿ ಎಷ್ಟೋ ದಿನ ದಾರಿ ಕಾದೆ, ಇಂದು ಬಂದಾಳು ನಾಳೆ ಬಂದಾಳು ಎಂದು ಆಸೆ ಹಚ್ಚಿಕೊಂಡು. ಅವಳು ವ್ಯಭಿಚಾರಿಣಿಯೆಂದು ಗೊತ್ತಿದ್ದರೂ ಅವಳಲ್ಲಿ ನನಗೆ ಎಷ್ಟು ಪ್ರೇಮವಿತ್ತು ಅಂತೀರಿ? ಅಥವಾ ವ್ಯಭಿಚಾರಿಣಿ ಯಾಗಿದ್ದುದರಿಂದಲೇ ಅವಳಲ್ಲಿ ನನಗೆ ಅಷ್ಟು ಮೋಹವೊ ಏನೊ! ಅಲ್ಲದೇ

ಪ್ರೀತಿಗೆಲ್ಲಿ ಕಣ್ಣುಂಟು, ಇವರು ಒಳ್ಳೆಯವರು ಇವರು ಕೆಟ್ಟವರು, ಇವಳು ಪತಿವ್ರತೆ, ಇವಳು ಅಪತಿವ್ರತೆ ಅಂತ ನೋಡಲಿಕ್ಕೆ? ಅವಳು ತಿರುಗಿ ಬರಬಹುದೆಂದು ಕೊಂಡಿದ್ದೆ, ಆಸೆ ಹಚ್ಚಿಕೊಂಡಿದ್ದೆ. ಆದರೆ ಅವಳು ಬರಲೇ ಇಲ್ಲ.

ನಿರ್ಮಲನ ಕಣ್ಣು ಕುಕ್ಕಿಸುವ ಹೊಸ ಹೊಸ ಮೋಟಾರುಗಳಲ್ಲಿ ಕುಳಿತು ಅವಳು ಆನಂದದಿಂದ ವಿಹರಿಸತೊಡಗಿದ್ದಳು. ನನ್ನ ಮುರುಕು ಗುಡಿಸಲಿಗೇಕೆ ಬಂದಾಳು ಅವಳು?

"ಆಗ ಮೃತ್ಯುವನ್ನೇ ಮರೆಹೋಗಬೇಕಾಯಿತು. ನೋಡಿದೆ ಅಂಗಳದ ಕಲಕೇ ಗಿಡದಲ್ಲಿ ಗೊಂಚಲು ಗೊಂಚಲಾಗಿ ಕಾಯಿ ಹಿಡಿದಿತ್ತು. ಚಿಕ್ಕಂದಿನಲ್ಲಿ ನಾನೇ ಪ್ರಯತ್ನಪೂರ್ವಕ ಹಚ್ಚಿದ ಗಿಡ, ಈಗ ಅದು ನನ್ನನ್ನ ಸ್ನೇಹಭರದಿಂದ ಕೈಮಾಡಿ ಕರೆಯುವಂತೆ ತೋರಿತು. ಅದು ಉದುರಿಸಿದ ಕಾಯಿಗಳನ್ನು ಆರಿಸಿಕೊಂಡು ಕಚಕಚನೆ ಜಗಿದು ನುಂಗಿಬಿಟ್ಟೆ. ಹೇಗಾದರೂ ಸತ್ತೆ, ಅನ್ನಿರಿ. ಆದರೆ ಸಾಯುವ ಮುಂದೆ ಬಹಳ ಸಂಕಟವಾಯಿತು. ಸಯನೈಡ್ ತಿಂದರೆ ಅಷ್ಟು ಸಂಕಟವಾಗುವದಿಲ್ಲವಂತೆ."

"ಶುದ್ಧ ಸುಳ್ಳು!"

ಇನ್ನೊಬ್ಬ ಬಂದು ನಿಂತಿದ್ದ,

"ನಾನು ಸಯನೈಡ್ ತಿಂದೇ ಸತ್ತಿದ್ದೇನೆ. ಭಯಂಕರ ಸಂಕಟ! ಡಾಕ್ಟರ್ ಸಾಹೇಬರಿಗೆ ಗೊತ್ತಿದ್ದಿತು, ಸಯನೈಡಿನ ಸಂಕಟ. ಆದರೆ ಅಷ್ಟು ಸಂಕಟಪಟ್ಟದ್ದ ರಿಂದಲೆ ನಾನಿಂದು ಇಷ್ಟು ಸುಖಿ. ಇನ್ನಷ್ಟು ಸಂಕಟವಾಗಿದ್ದರೆ ಇನ್ನೂ ತೃಪ್ತಿ ಯಾಗುತಿತ್ತು! ಪ್ರಾಯಶ್ಚಿತ್ತದ ಆತುರ ಗೊತ್ತಾಯಿತೆ? ಎಲಾ, ಎಲ್ಲಿ ಹೋಗಿಬಿಟ್ಟ ಈ ಪ್ರಾಣಿ" ಕಲಕೇ ಕಾಯಿ ತಿಂದು ಸತ್ತವ ಕಣ್ಮರೆಯಾಗಿ ಬಿಟ್ಟಿದ್ದ.

ಕಣ್ಣೆಟ್ಟು ನೋಡಿದೆ. ಆಗಂತಕ ಎಳೆವಯಸ್ಸಿನ ಯುವಕನಾಗಿದ್ದ ಬಹಳವಾದರೆ ಹತ್ತೊಂಭತ್ತು ವರ್ಷದವನಿರಬಹುದು. ಪರಿಪೂರ್ಣ ಆರೋಗ್ಯ, ಉನ್ನತ ಪ್ರಶಸ್ತ ಲಲಾಟ, ವಿಶಾಲ ವಕ್ಷ; ಅವನ ಸರ್ವಾಂಗದ ಮಾಂಸಖಂಡಗಳೂ ಬಲಿಷ್ಠ, ಸುಂದರ, ಸುಸ್ಪಷ್ಟ. ಬಾಚಿ ತಿದ್ದಿದ ಕೂದಲು, ಮಾಟವಾದ ತೇಲುಗಣ್ಣುಗಳು. ಪರಿಷ್ಕಾರವಾಗಿ ತಳತಳಿಸುವ ಹಲ್ಲುಗಳು, ಉಜ್ವಲ ಶ್ಯಾಮವರ್ಣದ ಈ ಹುಡುಗನನ್ನು ಕಂಡರೆ ಮನಸ್ಸು ಸ್ನೇಹಾರ್ದ್ರವಾಗಬೇಕು. ಆತ ನನ್ನ ಕಡೆ ತಿರುಗಿ ಹೇಳಿದ "ಕತೆ ಕೇಳುವ ಉತ್ಸಾಹವಿಲ್ಲವೆ ನಿಮಗೆ? ಕಥೆಯಲ್ಲ, ವಾಸ್ತವಿಕ ಸಂಗತಿ. ವೇಳೆಯಿದೆ ತಾನೆ? ತಾವು ಡಾಕ್ಟರ್ ಜನರು, ತಮ್ಮ ಸಮಯಕ್ಕೆ ತುಂಬ ಬೆಲೆ ಸಂಕ್ಷೇಪದಲ್ಲಿ ಹೇಳಿಮುಗಿಸುವೆ, ಆಗದೆ?"

ಹುಡುಗ ಒಮ್ಮೆ ನಕ್ಕ. ಅವನ ಪರಿಷ್ಕಾರವಾದ ಹಲ್ಲುಗಳಿಂದ ನಗುವಿನ ಶೋಭೆ ದ್ವಿಗುಣಿತವಾಗಿತ್ತು.

"ನೋಡಿರಿ, ನಾನು ಕಾಲೇಜು ಕಲಿತ ಹುಡುಗ. ಆ ಮಾತೆಲ್ಲ ಈಗ ಕನಸಿನಲ್ಲಿ ಕಂಡಂತೆ ಮಸುಮಸುಕಾಗಿ ನೆನಪಿಗೆ ಬರುತ್ತದೆ. ಅದೊಂದು ಸ್ವಪ್ನ ಸೃಷ್ಟಿಯಂತೆಯೆ ಇತ್ತು. ದಿನ ಬೆಳಗಾದರೆ ಕಾಣುವ ಸಾಮಾನ್ಯ ಪದಾರ್ಥವಾದ ನೀರೆಂದರೆ ಎರಡು ವಾಯುಗಳ ಮಿಶ್ರಣವೆಂದು ಕಲಿತ ದಿನ ನಾನು ಆಶ್ಚರ್ಯದಿಂದ ಅವಾಕ್ಕಾಗಿ ಹೋದೆ. ವಿಸ್ಮಯ ದಿನದಿನಕ್ಕೆ ಹೆಚ್ಚುತ್ತಲೇ ಹೋಯಿತು. ಅಲ್ಲ, ಸಾಮಾನ್ಯ ಉಪ್ಪಿನಲ್ಲಿ ಎಂಥ ಭಯಂಕರ ಗ್ಯಾಸ್-ಕ್ಲೋರಿನ್!?"

ಯುವಕ ಕೆಲಕ್ಷಣ ಸುಮ್ಮನಿದ್ದ. ಏನೋ ಧೇನಿಸುವವನಂತೆ ತನ್ಮಯ ಆತ್ಮಮಗ್ನ ಸ್ಥಿತಿಯಲ್ಲಿದ್ದ ಅವನ ಕಣ್ಣುಗಳೆರಡೂ, ತೆರೆದಿದ್ದರೂ ಏನನ್ನೂ ಕಾಣುತ್ತಿರಲಿಲ್ಲ.

"ವ್ಹೋಲ್ಟಾ, ಗ್ಯಾಲವ್ಹಾನಿ, ಲ್ಯಾವ್ಹಶಾಯರ ಮೊದಲಾದವರ ಜೀವನ ಚರಿತ್ರೆಯನ್ನೋದಿ ನಾನೂ ಅವರಂತೆಯೆ ಆಗಬೇಕೆಂಬ ಹಂಬಲ ಹುಟ್ಟಿತು. ಎಂಥ ಅದ್ಭುತ ಸಾಧನೆ ಅವರದು! ಸತ್ಯ ಸಂಶೋಧನಕ್ಕಾಗಿ ಎಂಥ ಕಠೋರ ತಪಸ್ಸು! ಅದೇ ಹುಮ್ಮಸಿನಲ್ಲಿ ಕೆಲಕಾಲ ಕಳೆಯಿತು, ಆದರೆ ಒಮ್ಮಿಂದೊಮ್ಮೆ ಎಲ್ಲವೂ ತಲೆಕೆಳಗಾಯಿತು. ನಮ್ಮ ಕುಟುಂಬದಲ್ಲಿ, ನನ್ನ ಜೀವನದಲ್ಲಿ ಒಂದು ಬಿರುಗಾಳಿಯೆ ಬೀಸಿಹೋಯಿತು. ನಮ್ಮಣ್ಣನನ್ನು ಪೋಲೀಸರು ಹಿಡಿದೊಯ್ದರು."

ಅವನು ಪುನಃ ಸುಮ್ಮನಾದ.

"ವಿಚಾರಣೆಯಾಗಿ ಅವನಿಗೆ ಗಲ್ಲಾಯಿತು."

ಸ್ವಲ್ಪ ಸಮಯದ ನಂತರ ಆತ ಮುಂದುವರಿಸಿದ.

"ರಾಜದ್ರೋಹದ ಅಪರಾಧಕ್ಕಾಗಿ. ಸಂಗಡವೆ ನನ್ನ ಮನಸಿನ ಸಿಂಹಾಸನವನ್ನೇರಿ ಕುಳಿತಿದ್ದ ವ್ಹಾಲ್ಟಾ, ಗ್ಯಾಲವ್ಹಾನಿ, ಲ್ಯಾವ್ಹಶಾಯರ್ - ಎಲ್ಲರಿಗೂ ಗಲ್ಲಾಯಿತು. ನಮ್ಮಣ್ಣ ರಾಜ ದ್ರೋಹಿಯಾಗಿದ್ದನೋ ಇಲ್ಲವೋ ನಾನರಿಯೆ. ಆದರೆ ಅಂದಿನಿಂದ ನಾನಂತೂ ಅಗ್ನಿ-ಅಗ್ನಿಮಂತ್ರದ ಸಾಧಕನಾದೆ."

ಯುವಕ ಒಮ್ಮೆ ಮೃದುವಾಗಿ ನಕ್ಕ.

"ನನ್ನಂಥ ಅಂಜುಬುರುಕನಿಗೆ ಈ ಕೆಲಸ ಬೇಡವಾಗಿತ್ತು. ಆದರೆ ತಾಯಿಯ ಎಡೆಬಿಡದ ರೋದನ, ಅತ್ತಿಗೆಯ ವಿಧವಾವೇಷ ಇವು ನನ್ನ

ತಲೆಯನ್ನೆ ಕೆಡಿಸಿಬಿಟ್ಟಿದ್ದವು. ಈ ಕೆಲಸಕ್ಕೆ ನಾನು ಯೋಗ್ಯನೋ ಅಯೋಗ್ಯನೋ ಎಂದು ವಿಚಾರಿಸಲು ಅವಕಾಶವೇ ಇದ್ದಿಲ್ಲ. ಭಾವಾವೇಗದ ಹಬೆ ತುಂಬಿ ಹಿಗ್ಗಿದ ಬರಿ ಬಣ್ಣದ ಬಲೂನ್ ನಾನು, ಎಂಬೀ ಮಾತು ದ್ಯಾಸದಲ್ಲಿ ಉಳಿಯಲಿಲ್ಲ. ಮೈಯಲ್ಲಿ ಸೂಜಿಚುಚ್ಚಿದರೆ ತಾಳಿಕೊಳ್ಳುವ ಧೀರತೆ ನನ್ನಲ್ಲಿದ್ದಿಲ್ಲ. ಆದರೆ ಆಗ ಇದನ್ನೆಲ್ಲ ಚಿಂತಿಸಿದವರಾರು? ಕ್ಷುದ್ರ ಕಂದೀಲು ಆ ವೇಗದ ಭರದಲ್ಲಿ ಒಮ್ಮೆಲೆ ಗಗನಕ್ಕೇರಿ ತಾನು ನಕ್ಷತ್ರಗಳ ಸಗೋತ್ರನೆಂದು ಹೆಮ್ಮೆತಾಳುವಾಗ ಅದೆಲ್ಲಿ ಲೆಕ್ಕಿಸುವದು ಇಂಥ ಅಡ್ಡಿಗಳನ್ನು? ನಾನೂ ಲೆಕ್ಕಿಸಲಿಲ್ಲ. ಬಾಂಬು ತಯಾರಿಸುವ ಕ್ರಾಂತಿಕಾರಿದಳದಲ್ಲಿ ಸೇರಿಕೊಂಡೆ. ಅಗ್ನಿಮಂತ್ರ! ಮಾತೂ ಚಂದ, ಅಗ್ನಿಗೂ ಕೊರತೆಯಿದ್ದಿಲ್ಲ."

ಯುವಕ ಪುನಃ ಒಮ್ಮೆ ನಕ್ಕ.

"ಅಂಥ ಬೆಂಕಿಯನ್ನು ನಾನು ಬೇರೆ ನೋಡಿಲ್ಲ. ದೂರ ಹೋದರೆ ಮನವೆಲ್ಲ ಕನಸು, ಬಳಿಸಾರಿದರೆ ಮನವೆಲ್ಲ ಬೆಂಕಿಯ ನಾಲಗೆ. ದೂರವಿದ್ದರೆ ಹತ್ತಿರ ಸೆಳೆಯುವದು, ಹತ್ತಿರ ಬಂದರೆ ದೂರ ತಳ್ಳಿ ಬಿಡುವದು ಇನ್ನೇಕೆ ನಾಚಿಕೆ? ಸರಳವಾಗಿ ಹೇಳಿಬಿಡುವೆ. ನಾನು ಪ್ರೇಮದಲ್ಲಿ ಬಿದ್ದೆ. ಹೆಣ್ಣಿಂದಲೆ ಎಲ್ಲವೂ ಮಣ್ಣಾಗುವದೆನ್ನುವರು. ನಮ್ಮ ಪಾಡೂ ಹಾಗೇ ಆಯಿತು. ಅವಳನ್ನು ಸಂತುಷ್ಟಗೊಳಿಸುವದೇ ನಮ್ಮೆಲ್ಲರ ಉದ್ಯೋಗವಾಯಿತು. ಎಲ್ಲರೂ ಸೇರಿ ನಾಲ್ಕೂ ಕಡೆಯಿಂದ ಅವಳ ಸುತ್ತ ನೆರೆದೆವು ಅವಳೇ ಅವಳು ನಮ್ಮ ಆರಾಧ್ಯ ದೇವತೆ-ದೇಶವಲ್ಲ. ಅವಳೇ ನಮ್ಮ ಲಕ್ಷ್ಯ, ದೇಶ ಕೇವಲ ಉಪಲಕ್ಷ್ಯ"

ದೀಪ ಹಠಾತ್ತಾಗಿ ಕಂಪಿಸಿತು. ಅದರೊಡನೆ ಒಂದು ಗುಂಜನ ಧ್ವನಿ ಕೇಳಿಸತೊಡಗಿತು. ಪತಂಗ ದೀಪದ ಕುಡಿಯನ್ನು ಕುರಿತು ಹೇಳುತ್ತಿತ್ತು. "ನಿನ್ನಲ್ಲಿ ಪ್ರಕಾಶವಿದೆ, ಶಿಖೆಯಿದೆ, ಉಷ್ಣವಿದೆ, ಇದನ್ನೆಲ್ಲ ಒಪ್ಪುವೆ. ಆದರೆ ಎಷ್ಟು ಕ್ಷುದ್ರನೋ ನೀನು, ಎಷ್ಟು ನೀಚನೋ ನೀನು! ತುಚ್ಛವಾದೊಂದು ಗಾಜಿನ ಕಾರಾಗೃಹದಲ್ಲಿ ಸೆರೆಸಿಕ್ಕಿದ್ದೀಯಲ್ಲಾ, ನೀನೆಂಥ ಅಗ್ನಿ! ಸೂರ್ಯನಲ್ಲಿ, ನಕ್ಷತ್ರಗಳಲ್ಲಿ, ಮಿಂಚಿನ, ಕಾಮನಬಿಲ್ಲಿನಲ್ಲಿ ಪ್ರತಿಭಾತನಾದ ಆ ಅನಲನ ಸಗೋತ್ರನೇ ನೀನು? ದಾವಾನಲ ಬಡಬಾನಲಗಳಲ್ಲಿ ಪ್ರೋದ್ಯತನಾದಾತನ ಬಂಧುವೇ ನೀನು? ಹಾಗಿದ್ದರೆ ಧಿಕ್! ಶತಧಿಕ್ಕಾರ ನಿನಗೆ! ದೇವತೆಯಾದ ನೀನುಯಃಕಶ್ಚನ ಮನುಷ್ಯನ ಕೈಯಲ್ಲಿ ಸೆರೆಸಿಕ್ಕು ಅವನ ಜೀತದಾಳಿನಂತೆ ಬಾಳು ಸಾಗಿಸುವಿಯಲ್ಲಾ!"

"ಸ್ವದೇಶೋದ್ಧಾರದ ಹುಚ್ಚು ಇಳಿದುಹೋಯಿತು." ತರುಣ ಹೇಳ ತೊಡಗಿದ. "ಈ ಹೊಸ ಹುಚ್ಚು ತಲೆಗೇರಿ ಕುಳಿತಿತು. ಅದ್ಭುತ ಉನ್ಮಾದ ಅದು!

ವ್ಹಾಲ್ಟಾ, ಗ್ಯಾಲವ್ಹಾನಿ, ಲ್ಯಾವ್ಹಶಾಯರ; ಶೋಕಾ ತುರುಳಾದ ತಾಯಿ; ಸದ್ಯೋವಿಧವೆಯಾದ ಅತ್ತಿಗೆ; ದೇಶಸೇವೆ-ಎಲ್ಲ ಬಳಿದು ಹೋಯಿತು ಆ ಮಹಾಪ್ರವಾಹದಲ್ಲಿ. ಕೇವಲ ಅವಳು ಮತ್ತು ನಾನು. ಅವಳು ದೇವಿ, ನಾನು ಅವಳ ಪೂಜಾರಿ. ಆದರೆ ಆಕಸ್ಮಾತ್ತಾಗಿ ಒಂದು ದಿನ ಕಂಡುಹಿಡಿದೆ- ನನ್ನ ಸ್ವಂತ ಕಣ್ಣುಗಳಿಂದಲೇ ನೋಡಿದೆ-ಆ ದೇವಿ ವರಪ್ರದಾನ ಮಾಡುತ್ತಿದ್ದಳು ಬೇರೊಬ್ಬನಿಗೆ, ನನಗಲ್ಲ. ಆ ಬೇರೊಬ್ಬ ಯಾರೆನ್ನುತ್ತೀರಿ? ನನ್ನ ಅಚ್ಚುಮೆಚ್ಚಿನ ಗೆಳೆಯ. ಹಿಗ್ಗಿದ ರಬ್ಬರಿನ ಬಲೂನಿನಲ್ಲಿ ಒಮ್ಮೆಲೆ ಸೂಜಿ ಚುಚ್ಚಿದಂತಾಯಿತು. ಕ್ಷಣಾರ್ಧದಲ್ಲಿ ಚಪ್ಪಟೆಯಾಗಿ ಹೋದೆ. ಏನು ಮಾಡಿದೆ ಗೊತ್ತೆ? ಮಾಫಿ ಸಾಕ್ಷಿದಾರನಾಗಿ ಅವನನ್ನು ಹಿಡಿದುಕೊಟ್ಟೆ. ಗೆಳೆಯ? ಹೌದು ಗೆಳೆಯನೇ ಬಿಡಿರಿ, ತೀರ ಹತ್ತಿರದ ಗೆಳೆಯ? ಅಂಥ ಗೆಳೆಯ ಜೀವನದಲ್ಲೇ ಬೇರೊಬ್ಬ ಸಿಕ್ಕಿಲ್ಲ, ಸಿಕ್ಕುವ ಹಾಗೂ ಇಲ್ಲ. ಆದರೂ ಹಿಡಿದು ಕೊಟ್ಟೆ ಅವನನ್ನು. ನನ್ನ ಅಂತಃಕರಣ ವೆಲ್ಲ ಅಸೂಯೆಯ ಶರಶಯ್ಯೆಯಲ್ಲಿ ಮಲಗಿ ಚಡಪಡಿಸುತ್ತಿತ್ತು. ಅವನನ್ನು ಹಿಡಿದು ಕೊಡದೆ ಮನಸು ಕೇಳಲಿಲ್ಲ. ಪತ್ರಿಕೆಗಳಲ್ಲಿ ನೀವು ಏನೇನು ಓದಿರಬಹುದು. ಅದೆಲ್ಲ ತಪ್ಪು. ಅವನನ್ನು ಹಿಡಿದುಕೊಡಲಿಕ್ಕೆ ಮೂಲ ಹೇತು ಇದೇ. ಅವನಿಗೆ ಗಲ್ಲಾಯಿತು. ನಾನು ಬಿಡುಗಡೆ ಹೊಂದಿದೆ.

"ಆ ಹುಡುಗಿಯೋ? - ಅವಳು ಸಿಕ್ಕಿಬಿದ್ದಿರಲಿಲ್ಲ."

"ನೋಡಿರಿ ಡಾಕ್ಟರ್, ದೇವಿ ಪೂಜೆಯಲ್ಲಿ ಸಾಧಾರಣವಾಗಿ ಪಶುಗಳನ್ನು ಬಲಿಕೊಡುವುದು ರೂಢಿ. ನಾನು ದೇವಿ ಪೂಜೆಯಲ್ಲಿ ಸಾಧಾರಣವಾಗಿ ನನ್ನ ಜೀವದ ಗೆಳೆಯನನ್ನಷ್ಟೇ ಅಲ್ಲ, ಅವನಿಗಿಂತ ದೊಡ್ಡ ಮಹಾಜೀವವನ್ನು ನನ್ನ ವಿವೇಕವನ್ನು ಬಲಿಕೊಟ್ಟೆ. ನನಗೆ ಏನೇನು ಪ್ರಿಯವಾಗಿತ್ತೊ ಅದೆಲ್ಲವನ್ನೂ ತ್ಯಜಿಸಿದೆ. ಆದರೆ ದೇವಿ ಮಾತ್ರ ಪ್ರಸನ್ನಳಾಗಲಿಲ್ಲ..... ದೇವಿ ಏನು ಮಾಡಿದಳು, ಹೇಳಿರಿ ನೋಡೋಣ?" ಎಂದು ಹುಡುಗ ನನ್ನನ್ನೇ ನೋಡುತ್ತ ಮುಗುಳು ಮುಗುಳು ನಗತೊಡಗಿದ. ಆಮೇಲೆ ಮುಂದುವರಿಸಿದ.

"ಇಲ್ಲ ಇಲ್ಲ, ನೀವೆಣಿಸಿದ್ದು ತಪ್ಪು. ಅವಳು ಆತ್ಮಹತ್ಯೆ ಮಾಡಿಕೊಳ್ಳಲಿಲ್ಲ. ಸಂನ್ಯಾಸಿನಿಯೂ ಆಗಿ ದೇಶಾಂತರ ಹೋಗಲಿಲ್ಲ. ಅವಳು ಮದುವೆಯಾದಳು- ಒಬ್ಬ 'ಇಂಗ್ಲೆಂಡ್-ರಿಟರ್ನ್‌ಡ್' ಆಯ್.ಸಿ.ಎಸ್. ನನ್ನು. ಅವಳಿಗೀಗ ದಿನಕ್ಕೊಂದು ಬಣ್ಣದ ಸೀರೆ. ಮೋಟಾರಿಲ್ಲದೆ ಅವಳೀಗ ರಸ್ತೆಯ ಮೇಲೆ ಕಾಲಿಡುವದೇ ಇಲ್ಲ. ನಾನಾ ವರ್ಣದ ನಾನಾ ಆಕಾರದ ನಾಯಿಮರಿಗಳು ಅವಳ ತೊಡೆಯ ಮೇಲೆ ಓಡಾಡುತ್ತಿರುತ್ತವೆ. ಕೈಯಲ್ಲಿ ಬೆರಗುಗೊಳಿಸುವ ವ್ಯಾನಿಟೀ ಬ್ಯಾಗ್. ಸಂಚಾರಿ ಅಗ್ನಿಶಿಖೆಯಂತೆ ಅವಳು ಈಗಲೂ ಓಡಾಡುತ್ತಿರುವಳು".

ಯುವಕ ಸುಮ್ಮನಾದ. ನೋಡಿದೆ, ಅವನ ದೊಡ್ಡ ದೊಡ್ಡ ತೇಲುಗಣ್ಣುಗಳಲ್ಲಿ ಕಣ್ಣೀರು ತುಳುಕುತ್ತಿತ್ತು.

"ಆದರೆ ಅವಳು ನನ್ನನ್ನು ಮರೆತು ಬಿಟ್ಟಿದ್ದಿಲ್ಲ. ಅವಳ ಶಿಫಾರಿಸಿನ ಮೇಲೆಯೆ ಅವಳ ಆಯ್.ಸಿ.ಎಸ್. ಗಂಡ ನನಗೊಂದು ನೌಕರಿಯ ಭರವಸೆ ಕೊಟ್ಟಿದ್ದ. ಅವರು ಒಮ್ಮೊಮ್ಮೆ ನನ್ನನ್ನು ಟೀ ಪಾರ್ಟಿಗೂ ಕರೆಯುತ್ತಿದ್ದರು. ಆದರೆ ಇನ್ನು ತಾಳಿಕೊಳ್ಳುವದು ನನ್ನಿಂದಾಗಲಿಲ್ಲ. ಸಯನೈಡ್ ಸಂಗ್ರಹಿಸಬೇಕಾಯಿತು. ಸಂಕಟವೇನೋ ಆಯಿತು. ಆದರೆ ಕಲಕೇ ಕಾಯಿಯ ವಿಷ ತಿಂದರೆ ಇನ್ನೂ ಹೆಚ್ಚು ಸಂಕಟ ಆಗುತ್ತದಂತಲ್ಲ. ಮೊದಲೇ ಗೊತ್ತಿದ್ದರೆ ಅದನ್ನೆ ತಿನ್ನುತ್ತಿದ್ದೆ. ನನಗೆ ಶಾಂತಿ ಬೇಕಾಗಿದೆ." ತುಸು ನಿಂತು ಯುವಕ ಹಠಾತ್ತಾಗಿ ಕೇಳಿದ, "ಅಲ್ಲರೀ ಡಾಕ್ಟರ್, ಗಲ್ಲಿಗೇರಿಸಿದ ಜನರು ಎಲ್ಲಿಗೆ ಹೋಗುವದು. ನೀವು ಬಲ್ಲಿರಾ?"

"ನರಕಕ್ಕೆ!" ನಾನು ಬೆಚ್ಚಿಬಿದ್ದೆ.

ನೊಡುತ್ತೇನೆ, **ತೊಳೆದಿಟ್ಟ ಅಂಗಾರದಂಥ ದಾಂಡಿಗನೊಬ್ಬ ಬಂದು ನಿಂತಿದ್ದಾನೆ. ಅಷ್ಟು ಕಪ್ಪಾಗಿರುವ ಆಸಾಮಿ ಜನ್ಮದಲ್ಲೆ ನನ್ನ ಕಣ್ಣಿಗೆ ಬಿದ್ದಿಲ್ಲ. ತಲೆಯಕೂದಲು ಎಲ್ಲಿ ಪ್ರಾರಂಭವಾಗಿದೆಯೆಂದು ಕೂಡ ಪತ್ತೆ ಹತ್ತುವಂತಿಲ್ಲ- ಅಷ್ಟು ಕಾಳ! ಅವನ ಹಣೆ ಪ್ರಕಾಂಡವಾಗಿತ್ತು. ಲಿಂಬೆ ಹಣ್ಣಿನಂತ ದೊಡ್ಡ ದೊಡ್ಡ ಕಣ್ಣುಗುಡ್ಡೆಗಳು ತೀರ ಸಾದಾ ಇದ್ದವು, ತುಟಿಯಲ್ಲಿ ಬಿಳಿತೊನ್ನು. ಗಂಟಲ ಕೆಳಗೆ ಭಯಂಕರ ಗಾಯವೊಂದು ಆ-ಯೆಂದು ಬಾಯಿ ತೆರೆದಿದೆ.**

ಮನುಷ್ಯ ಆ ಸ್ವದೇಶಿ ಯುವಕನ ಕಡೆ ಹೊರಳಿ ಮತ್ತೊಮ್ಮೆ ಘೋರ ಚೀತ್ಕಾರ ಮಾಡಿದ. "ಹೋಗು, ನರಕಕ್ಕೆ ಹೋಗಿ ಹುಡುಕು! ಅಂಥ ಫಾಶೀ ಆಸಾಮಿಗಳು ಹೋಗುವ ಜಾಗ ಅದೇ. ನೀನೂ ಹೋಗು ಅಲ್ಲಿಗೇ ನರಕಕ್ಕೆ ಹೋಗಿರಿ – ಎಲ್ಲರೂ ಹೋಗಿರಿ ನರಕಕ್ಕೆ!".

ಅವನ ದನಿ ಕ್ಷಣಕ್ಷಣಕ್ಕೂ ಏರುತ್ತಿತ್ತು. ಅದರೊಡನೆ ಅವನ ಕುತ್ತಿಗೆಯ ಗಾಯದಿಂದ ನೊರೆನೊರೆಯಾಗಿ ನೆತ್ತರು ಬಸಿಯ ಹತ್ತಿತು. ಸ್ವದೇಶಿ ಯುವಕ ಕಣ್ಮುಚ್ಚಿ ತೆರೆಯುವದರೊಳಗೆ ಓಟಕಿತ್ತಿದ್ದ.

ಈ ಕರಾಳ ಮೂರ್ತಿ ನನ್ನನ್ನು ಸಮೀಪಿಸಿ ಕೊರಳೆತ್ತಿ ತೋರಿಸುತ್ತ ನುಡಿದ: "ನೋಡ್ರೀ ಡಾಕ್ಟರ್, ಇದನ್ನು ಹೊಲಿದುಗಿಲಿದು ಮಾಡಿ ಹೋಗಾದರೂ ಮುಚ್ಚಲಿಕ್ಕೆ ಬರಬಹುದಲ್ಲ? ದುಃಖ ತಡೆಯಲಾರದೆ ಭಾರೀ ಜೋರಾಗಿ ತಿವಿದು ಕೊಂದುಬಿಟ್ಟೆ. ಒಣಜಂಬ ಹೇಳುವದಲ್ಲ ಡಾಕ್ಟರ್. ಸತ್ಯ ಹೇಳುತ್ತೇನೆ. ಈಗ

ನೋಡ್ರಿ, ಸತ್ತ ಮೇಲೆ ಭಾರಿ ಪಶ್ಚಾತ್ತಾಪ ಆಗುತ್ತೆ. ಇಷ್ಟೆಲ್ಲ ಮಕ್ಕಳುಮರಿ ಇಲ್ಲದಿದ್ದರೆ ಸತ್ತು ಹೋಗಿದ್ದರೂ ವ್ಯಸನವಿದ್ದಿಲ್ಲ! ಈಗ ನೋಡ್ರಿ, ಅಲ್ಲಿ ಮೂರು ತಿಂಗಳ ಮನೆಬಾಡಿಗೆ ಬಾಕಿ ಬಿದ್ದಿತ್ತು. ಮನೆಯ ಸಾವುಕಾರ ಅವರನ್ನು ಬೀದಿಪಾಲು ಮಾಡದೆ ಬಿಟ್ಟಿರಲಿಕ್ಕಿಲ್ಲ. ನನ್ನ ಗಂಟಲನ್ನ ಒಂದಿಷ್ಟು ಹೊಲಿದು ಕೊಡ್ರಿ-ಒಮ್ಮೆ ಹೋಗಿ ಬರುವೆ."

ಕೊರಳು ನೀಡಿ ನಿಂತುಕೊಂಡು ದೈನ್ಯದಿಂದ ಹೇಳಿದನಾತ.

"ತಡಮಾಡಬೇಡ್ರಿ ಡಾಕ್ಟರ್, ಬೇಗ ಹೊಲಿಯಿರಿ."

ನಾನೇನು ಹೇಳಲಿ, ಸುಮ್ಮನಿದ್ದೆ.

"ಹೊಲಿದು ಕೊಡುವುದಿಲ್ಲ?"

"ಅದನ್ನು ಇನ್ನು ಹೊಲಿಯುವದು ಅಸಾಧ್ಯ."

"ಅಲ್ಲವೆ ಮತ್ತೆ? ಟಂ ಟಂ ಅಂತ ನಗದು ಫೀಸು ಎಣಿಸಿಕೊಟ್ಟರೆ ಮಾತ್ರ ಸಾಧ್ಯ ಹೌದೋ ಅಲ್ಲೋ? ನಿಮಗೆ ರೂಪಾಯಿ ಸಿಕ್ಕಿದರೆ ಬೇಕಾದ್ದು ಮಾಡಿ ಕೊಡುತ್ತೀರಿ!" ಮನುಷ್ಯ ನಗತೊಡಗಿದ. ಅವನ ಕೊರಳ ಗಾಯದಿಂದ ಪುನಃ ರಕ್ತ ಬುರುಗು ಬರುಗಾಗಿ ಬಸಿಯತೊಡಗಿತು. ಮುಖವೆಲ್ಲ ಹುಳಿಹುಳಿ ವಿಕಾರ ನಗೆ.

ನಾನು ಮೌನವಾಗಿ ಕುಳಿತೆ.

"ಸಿಟ್ಟು ಬಂತೆ ಡಾಕ್ಟರ್ ಸಾಹೇಬ್? ಸಿಟ್ಟಾಗಬೇಡ್ರಿ, ದುಃಖ ತಡೆಯದೆ ಏನೋ ಹೇಳಿದೆ. ಭೂಮಿಯಲ್ಲಿ ಯಾರೂ-ಯಾರ್‍ಯಾರೂ-ನನ್ನ ಹಿತಬಗೆಯಲಿಲ್ಲ! ಬದುಕಿದ್ದಾಗ ಏನೇನು ಸುಖ ಸೌಕರ್ಯ ಸಿಕ್ಕಿತೋ ಅದರಲ್ಲಿ ಪ್ರತಿಯೊಂದು ದುಡ್ಡು ದುಡ್ಡು ಎಣಿಸಿಕೊಟ್ಟೇ ಕೊಂಡದ್ದೇ. ಗಂಡಸು ಮಗ ಅಂತ ಇರಬೇಕು. ಮಗುವಾಗಿದ್ದಾಗ ತಾಯೊಬ್ಬಳು ರೊಕ್ಕ ತೆಗೆದುಕೊಳ್ಳದೆ ಹಾಲು ಕೊಡುತ್ತಿದ್ದಳು-ಅದು ಮುಂದಿನ ಲಾಭದ ಮೇಲೆ ಕಣ್ಣಿಟ್ಟು ಕಾಣುತ್ತೆ! ಹೆಣ್ಣಾಗಿ ಹುಟ್ಟಿದ್ದರೆ ತುದಿಮೊದಲಿಲ್ಲದ ದುರ್ಗತಿ ಬರುತ್ತಿತ್ತು. ನನಗೊಬ್ಬಳು ತಂಗಿ ಇದ್ದಳು. ಡಾಕ್ಟರ್ ಸಾಹೇಬ್ ನಮ್ಮ ತಾಯಿಗೆ ಅವಳ ಕೂದಲು ಕಂಡರೆ ಆಗುತ್ತಿರಲಿಲ್ಲ. ಮೊಲೆಯಲ್ಲಿ ಹಾಲಿದ್ದಾಗಷ್ಟು ದಿನ ಅವಳಿಗೆ ತಿನಿಸುತ್ತಿದ್ದಳು. ಮೊಲೆ ಬತ್ತಿ ಟೊಳ್ಳು ಬಿದ್ದ ಮೇಲೆ ಒಂದೇ ಒಂದು ದಿನವಾದರೂ ತನ್ನ ತಂಗಿ ದನದ ಹಾಲು ಕಂಡವಳಲ್ಲ. ಈ ಮಾತಿನಲ್ಲಿ ಅಪ್ಪ ಅಮ್ಮ ಇಬ್ಬರದೂ ಒಂದೇ ಅಭಿಪ್ರಾಯ – "ತೀರಿ ಹೋಯಿತು, ಹೆಣ್ಣುಮಕ್ಕಳಿಗೂ ದನದ ಹಾಲು ಕೊಟ್ಟರೆ ಮನೆಮಾರು ಉಳಿದೀತೆ!" ಇದಕ್ಕಿಂತ

ರಜಪೂತ ರೀತಿಯೆ ಬಹಳ ಚಲೋ ಇತ್ತು. ಹೆಣ್ಣು ಹುಟ್ಟಿದರೆ ಹೆರಿಗೆ ಮನೆಯಲ್ಲೆ ಸದ್ದಿಲ್ಲದೆ ಅದರ ಬಾಯಿಗೆ ಉಪ್ಪು ನುಂಗಿಸಿ ಕೊಂದು ಬಿಡುವರಂತೆ ಅವರು! ಆಫ್ರಿಕದಲ್ಲಿ ಇದೇ ಹುಟ್ಟಿದ ಹೆಣ್ಣು ಮಕ್ಕಳನ್ನ ಗಾಳದಲ್ಲಿ ಪೋಣಿಸಿ ಮೊಸಳೆ ಹಿಡಿಯುತಾರಂತಲ್ಲ? ಅವರ ಪಾಲಿಗೆ ಹೆಣ್ಣಿಗಿಂತ ಮೊಸಳೆಗೆ ಹೆಚ್ಚು ಬೆಲೆ. ಒಂದು ಮೊಸಳೆ ಹಿಡಿದು ಮಾರಿದರೆ ಎಷ್ಟೋ ಹಣ ಸಿಗುತ್ತದೆ. ತಾಯಿ ತಂದೆಗಳೇ ರೊಕ್ಕದ ಮೇಲೆ ಕಣ್ಣಿಟ್ಟು ಹೊಟ್ಟೆಯ ಮಕ್ಕಳ ಇಷ್ಟು ಪಂಕ್ತಿ ಪ್ರಪಂಚ ಮಾಡಿದದ ಮೇಲೆ, ನೀವು"–

"ನೀನು ಸತ್ತುಹೋಗಿದ್ದಿಯಲ್ಲಾ ಮಹಾರಾಯಾ, ಇದು ನಿನಗೆ ಮರೆತೇ ಹೋಗಿದೆ ಅಂತ ಕಾಣಿಸುತ್ತದೆ. ಸತ್ತವರನ್ನು ಬದುಕಿಸುವದು, ನಮ್ಮ ಕೈಯಲ್ಲಿಯೂ ಇಲ್ಲವಲ್ಲ. ದುಡ್ಡು ಕೊಟ್ಟರೆ ಕೂಡ ಆಗುವುದಿಲ್ಲ" ಎಂದೆ ನಾನು.

ಆ ಕಾಳ ನಕ್ಕು ಬಿಟ್ಟ.

"ದುಡ್ಡು ಸಿಕ್ಕಿದ್ದರೆ ಸತ್ತವನು ಕೂಡ ಎದ್ದು ಕೂಡ್ರುತ್ತಾನೆ. ಇದು ನನಗೆ ಖಂಡಿತ ಗೊತ್ತಿದೆ. ನನಗೆ ಸಲ್ಪ ರೂಪಾಯಿ ಕೊಟ್ಟು ನೋಡಿರಿ ಬೇಕಾದರೆ, ಈ ಕ್ಷಣ ಬದುಕಿ ಬಾರದಿದ್ದರೆ ಹೇಳಿರಿ ಮತ್ತೆ."

"ಎಷ್ಟು ಹಣ ಬೇಕು ನಿನಗೆ?"

"ಕೊಡುತ್ತೀರಿ? ಖಂಡಿತ ಕೊಡುತ್ತೀರಿ? ಭಾರಿ ಒಳ್ಳೇ ಮನುಷ್ಯರು ನೀವು!"

"ಆಗೋ ಆ ಡ್ರಾವರು ತೆರೆದು ಹುಡುಕು. ಇದ್ದದ್ದೆಲ್ಲ ತೆಗೆದುಕೊಂಡು ಹೋಗು"

ಮನುಷ್ಯ ಆತುರದಿಂದ ಕೇಳಿದ, "ಎಲ್ಲಿ? ಯಾವ ಡ್ರಾವರಿನಲ್ಲಿ?"

ನಾನು ಡ್ರಾವರಿನ ಕಡೆ ಬೊಟ್ಟು ಮಾಡಿ ತೋರಿಸಿದೆ. ಮನುಷ್ಯ ಉದ್ದುದ್ದ ಹೆಜ್ಜೆ ಹಾಕುತ್ತ ಅತ್ತ ಧಾವಿಸಿದ. ತಿರುಗಿ ಪುಸ್ತಕದಲ್ಲಿ ಮನಸ್ಸು ನಡಲು ಪ್ರಯತ್ನಿಸಿದೆ. ಅಷ್ಟರಲ್ಲೇ ಆತ ತಿರುಗಿ ಬಂದ.

"ಇದೇನು ವಿಚಿತ್ರವಪ್ಪ! ಡ್ರಾವರಿನ ಹಿಡಿಕೆ ಏನು ಮಾಡಿದರೂ ಹಿಡಿಯಲಿಕ್ಕೆ ಬರುವದಿಲ್ಲರೀ. ಜಾರಿಜಾರಿಯೇ ಹೋಗುತ್ತೆ. ನನ್ನ ಮೈ ಗಾಳಿಯಲ್ಲಿ ಗಾಳಿಯಾಗಿ ಹೋಗಿದೆಯೋ ಏನು ಮಣ್ಣು!"

ಹೀಗೆಂದು ಆತ ತನ್ನ ಎರಡೂ ತೋಳುಗಳನ್ನು ಚಾಚಿ ಪರೀಕ್ಷಿಸ

ತೊಡಗಿದ. ಎರಡೂ ಮುಷ್ಟಿಗಳನ್ನು ಮುಚ್ಚಿದ, ತೆರೆದ ಪುನಃ ಮುಖವೆಲ್ಲ ವಿಚಿತ್ರ ವಿಕಾರ ನಗು. ಕೆಲ ಕ್ಷಣಗಳ ನಂತರ ಅವನು ಹೇಳಿದ.

"ಅದೇ ಈಗ! ಪೂರಾ ಬದಲಾಗಿ ಬಿಟ್ಟಿದ್ದೇನೆ; ನಾನು ನಿಮ್ಮ ಕಣ್ಣಿಗೆ ಕಾಣಿಸುತ್ತೇನೆ?"

"ಕಾಣಿಸುತ್ತೀ"

"ನನ್ನ ಮಾತು ಕೇಳಿಸುತ್ತೆ?"

"ಕೇಳಿಸುತ್ತದೆ"

"ಆದರೆ ಪೂರಾ ಬದಲಾಗಿ ಹೋಗಿದೆ. ಎಲ್ಲ ಗಾಳಿಯಾಗಿಬಟ್ಟಿದೆ. ಡ್ರಾವರು ತೆರೆಯಲಿಕ್ಕೆ ಬರಲಿಲ್ಲ. ರೂಪಾಯಿ ಸಿಕ್ಕಿದ್ದರೂ ಒಯ್ಯಲ್ಲಿಕ್ಕಾಗುವುದಿಲ್ಲ! ಆಹಾ, ಬದುಕಿದ್ದಾಗಲೇ ನಿಮ್ಮ ಬೆಟ್ಟಿಯಾಗಿದ್ದರೆ – ಆಗಿದ್ದರೆ ನಾನು ಸಾಯುತ್ತಲೆ ಇದ್ದಿಲ್ಲ. ಆಗಿದ್ದರೆ ನನ್ನ–"

"ನೀನು ಯಾಕೆ ಸತ್ತೆ?"

"ಯಾಕೆ? ಭಾಷಣ! ಹುಡುಗ ಬಡ್ಡೀ ಮಕ್ಕಳು ಬಂದು ಭಾಷಣ ಮಾಡಿದರು–ಎಲ್ಲ ಅನರ್ಥಕ್ಕೆ ಅವರೇ ಕಾರಣ. ಹಾದಿ ಬೀದಿಯಲ್ಲಿ ಗೋಡೆ ಯಲ್ಲಿ, ಕಾಗದದಲ್ಲಿ, ಎದ್ದಿತು ಒಂದೇ ಕೂಗು–ಬಾಯ್ ಕಾಟ್ 'ಫಾರೀನ್ ಗೂಡ್ಸ್!' ಈ ... ಮಕ್ಕಳ ಭಾಷಣದ ಹೊಡೆತಕ್ಕೆ ನಮ್ಮ ಅಂಗಡಿ ಮುಳುಗಿ ಹೋಯಿತು. ನಮ್ಮ ಅಂಗಡಿ ಮುಂದೆ ಪಿಕೆಂಟಿಂಗ್ ಮಾಡುವವರ ಗಲಾಟೆಯೋ ಗಲಾಟೆ! 'ಬಾಯಕಾಟ್ ಫಾರೇನ್ ಗೂಡ್ಸ'!, 'ಬಾಯಕಾಟ್ ಫಾರೇನ್ ಗೂಡ್ಸ'! 'ಫಾರೇನ್' ಅಂತೆ, 'ಫಾರೇನ್' ಈ ಮಕ್ಕಳ ಮಾತುಗಳೇ 'ಫಾರೆನ್' ಆಗಿತ್ತು. ಬಾಯ್‌ಕಾಟ್ ಮಾಡುವವರಂತೆ! ಆದರೆ ಆ ಸಮಯ ಅದನ್ನು ತಿಳಿಸಿ ಹೇಳುವವರು ಯಾರು ಅವರಿಗೆ? ನಮ್ಮ ಅಂಗಡಿ ಮುಳುಗಿಸಿ ಬಿಟ್ಟರು ಮಕ್ಕಳು! ನಮ್ಮನ್ನೂ ಮುಳುಗಿಸಿದರು. ಇವರ ಮನೆ ಹಾಳಾಗ!... ಆ ಅಂಗಡಿ ಇದ್ದಿದ್ದರೆ ನನ್ನ ಮಗಳ ಮದುವೆಗೆ ಹಣದ ಅಡಚಣೆ ಎಲ್ಲಿ ಬರುತ್ತಿತ್ತು?"

ಮನುಷ್ಯನಿಗೆ ಧಗೆ ಬರತೊಡಗಿತ್ತು. ಸ್ವಲ್ಪ ಸಂವರಿಸಿಕೊಂಡು ಮುಂದೆ ಸಾಗಿದ; "ಪೇಟೆಯಲ್ಲಿ ಸಾಲ ಬೆಳೆಯಿತು, ಇತ್ತ ಮಗಳ ವಯಸ್ಸೂ ಬೆಳೆಯಿತು. ನನ್ನ ಮಗಳು; ಗೊತ್ತೇ ಇದೆ, ಶುದ್ಧ ಕಪ್ಪು, ಬಾಜಾರದ ಬೆಲೆ ವಿಚಾರಿಸಿ ನೋಡಿದೆ, ಅವಳನ್ನು ಯಾರ ಕೊರಳಿಗಾದರೂ ಕಟ್ಟಬೇಕಾದರೆ ಮೂರು ಸಾವಿರ ರೂಪಾಯಿಯಾದರೂ ಬೇಕು. ಒಬ್ಬ ಕಂಪನಿ ಗುಮಾಸ್ತನಿಗೆ ಕೊಡಬೇಕೆಂದು

ಗೊತ್ತಾಯಿತು. ವಯಸ್ಸಾಗಿತ್ತು, ಎರಡನೆ ಸಂಬಂಧ. ಆದರೂ ಅವನೆಂದ-ತನಗಾಗಿ ಬೊಂಬೆಯಂಥ ಸಾಲಂಕೃತ ಕನ್ಯೆ ಎರಡು ಸಾವಿರ ರೂಪಾಯಿ ಸಹಿತ ಸಜ್ಜಾಗಿ ಕುಳಿತಿದೆ. ಸುಳ್ಳಂಬಳ್ಳಿಯೇನಲ್ಲ. ತಾನು ಹೂಂ ಎನ್ನುವದೇ ತಡ. ಆಲೋಚನೆ ಮಾಡಿ ನೋಡಿದೆ. ನನ್ನ ಮಗಳಿಗೆ ತರುಣ ವರನ್ನ ಕೂಡಿಸಿ ಕೊಡುವದು ನನ್ನ ಶಕ್ತಿ ಮೀರಿದ್ದು. ಏನಿಲ್ಲೆಂದರೂ ಇಪ್ಪತ್ತು ಇಪ್ಪತ್ತೈದು ಹುಡುಗರಿಗೆ ಫರಾಳ ತಿನ್ನಿಸಿ ನೋಡಿದ್ದೆ. ಒಬ್ಬ ಮಗನಿಗೂ ನನ್ನ ಮಗಳು ಪಸಂದಾಗಿರಲಿಲ್ಲ. ಮತ್ತೇನು ಮಾಡಲಿ, ಈ ಗುಮಾಸ್ತನಿಗೇ ಶರಣು ಹೋದೆ. ಅದೂ, ನನ್ನ ನಂಟನ ವಶೀಲಿ ಹಚ್ಚಿ. ನನ್ನ ನಂಟ ಅವನ ಸಹಪಾಠಿಯಂತೆ. ಅಂತೂ ಹೇಗಾದರೂ ನನ್ನ ಕರಿ ಹುಡುಗಿಯನ್ನು ಮಾಡಿಕೊಳ್ಳಲಿಕ್ಕೆ ಅವನನ್ನು ಒಪ್ಪಿಸಿದ್ದಾಯಿತು. ಆದರೆ ಬೇಕಾಗಿತ್ತು ಮೂರು ಸಾವಿರ ರೂಪಾಯಿ. ಬಿಡ್ರಿ, ಮೂರು ರೂಪಾಯಿ ಕೂಡ ಶಿಲಕು ಇದ್ದಿಲ್ಲ. ರೂಪಾಯಿಗಾಗಿ ಹುಚ್ಚನ ಹಾಗೆ ಅಲೆದಾಡಿದೆ. ಎಷ್ಟು ಜನರ ಮುಂದೆ 'ದೇಹಿ' ಎಂದೆ! ಒಮ್ಮೊಮ್ಮೆ ಕನ್ನ ಹಾಕೋಣ ಅಂತ ಸಹಿತ ಅನಿಸುತ್ತಿತ್ತು. ಆಹಾ, ಹಾಗೆಲ್ಲಾದರೂ ನಿಮ್ಮ ಭೆಟ್ಟಿ ಆಗಿದ್ದರೆ! ಆದರೆ ಕಡೆಗೆ ರೂಪಾಯಿಯ ಅವಶ್ಯಕತೆಯೆ ಉಳಿಯಲಿಲ್ಲ. ಬಿಸಿಲಲ್ಲಿ ಸುತ್ತಿ ಸುತ್ತಿ ಒಂದು ದಿನ ಸಂಜೆ ಮನೆಗೆ ಬಂದು ನೋಡುತ್ತೇನೆ, ಮಗಳು ಕಾಣೆ! ಯಾರ ಜತೆಗೋ ಪರಾರಿಯಾಗಿ ಬಿಟ್ಟಿದ್ದಳು. ತಮಾಷೆ ನೋಡಿರಲ್ಲಿ, ಹುಡುಗಿ ಕಪ್ಪು ಅಂತ ವರ ಸಿಗಲಿಲ್ಲ. ಆದರೆ ಪ್ರಣಯಿ ಗಂಟು ಬಿದ್ದಿದ್ದ! ಇದೆಲ್ಲಕ್ಕೆ ಮೂಲ ಆ ಸುಟ್ಟ ಹುಡುಗರು. ಮಂದೀ ಮನೆ ಹಾಳು ಮಾಡುವ ಬಡ್ಡೀ ಮಕ್ಕಳು ಹಾಳಾಗಿ ಹೋಗಲಿ ಎಲ್ಲರೂ. ಯಮಲೋಕಕ್ಕೆ ಹೋಗಲಿ! ಯಮಲೋಕಕ್ಕೆ!"

ಅವನು ಕ್ರೋಧದಿಂದ ಹಲ್ಲು ಕಡಿಯತೊಡಗಿದ, ಗಂಟಲ ಗಾಯದಿಂದ ದರದರನೆ ನೆತ್ತರು ಉಕ್ಕಿ ಬಂದು ಎದೆಯನ್ನು ತೋಯಿಸಿ ಹರಿಯಿತು. ಹೋಗುವ ಮೊದಲು ಅವ ಹೇಳಿದ, "ಆದರೂ ನಾನು ಸಾಯುತ್ತಿದ್ದಿಲ್ಲ. ನನ್ನ ಹೆಂಡತಿ ಕೆಟ್ಟ ಬಾಯಿಯವಳು. ದಿನ ಬೆಳಗಾದರೆ ಹಂಗಿಸಿ ಹಂಗಿಸಿ ಕೊಲ್ಲು ತ್ತಿದ್ದಳು. ಅದನ್ನು ತಡೆಯಲಾರದೆ ಹೀಗೆ ಮಾಡಿಕೊಂಡೆ; ಆದರೆ ಆಶ್ಚರ್ಯ! ಈಗ ಆಕೆಗಾಗಿಯೆ ಈ ಮನಸ್ಸು ಎಷ್ಟು ಚಡಪಡಿಸುತ್ತದೆ. ಸತ್ಯ ಹೇಳುವೆ ಡಾಕ್ಟರ್, ಮನಸ್ಸು ಬಹಳ ಚಡಪಡಿಸುತ್ತಿದೆ!"

ಛಾಯಾಮೂರ್ತಿ ಅದೃಶ್ಯವಾಯಿತು.

ಗಡಿಯಾರದಲ್ಲಿ ಟಂಟಂ ಎಂದು ಎಷ್ಟೋ ಬಾರಿಸಿತು. ಎಷ್ಟೆಂದು ನಾನು ಎಣಿಸಲಿಲ್ಲ. ಎಣಿಸುವ ಇಚ್ಛೆಯೆ ಇದ್ದಿಲ್ಲ.

ನಾಲ್ಕೂ ನಿಟ್ಟಿಗೆ ನಿಸ್ತಬ್ಧತೆ.

ಮತ್ತೆ ಲ್ಯಾಪಲಂಡಿನ ಆ ಕತೆಯಲ್ಲಿ ಮನಸು ತೊಡಗಿಸಿದೆ. ಇಬ್ಬರೂ ಹಿಮಶೀತಲ ಜಲದಲ್ಲಿಳಿದು ದಾಟಿಹೋದರು – ಆ ಯುವಕ ಮತ್ತು ಯುವತಿ. ಒಬ್ಬರಿಗೆ ಇನ್ನೊಬ್ಬರ ಮಾತು ಬಾರದು. ಯುವಕ ಸ್ವೀಡನ್ನಿನವ, ಯುವತಿ ಲ್ಯಾಪಲಂಡಿನಾಕೆ. ಯುವಕ ನಿರೂಪಿಸುತ್ತಾನೆ.

“ದಾಟಿ ದಡ ಸೇರಿದಾಗ ನಮ್ಮ ಮೈ ಚಳಿಯಿಂದ ಕೋಡಿಹೋಗಿತ್ತು ಆಚೆ ದಡ ಸಮ ತಟ್ಟಾಗಿದ್ದಿಲ್ಲ. ಏರಿ ಹೋಗಬೇಕಾಗಿತ್ತು. ಏರುತ್ತೇರುತ್ತ ನಮ್ಮ ಮೈ ತಮ್ಮಿಂದ ತಾವೇ ಬೆಚ್ಚಗಾದವು. ಹುಡುಗಿ ವಿಶೇಷ ಮಾತಾಡಲಿಲ್ಲ. ಆಡಿದ್ದರೂ ಪ್ರಯೋಜನವಿದ್ದಿಲ್ಲ. ಅವಳ ಭಾಷೆ ನನಗೆ ತಿಳಿಯದು. ಸ್ವಲ್ಪ ಹೊತ್ತಿನಲ್ಲೆ ನಾವು ಏರು ಹತ್ತಿ ತಪ್ಪಲು ಸೇರಿದೆವು. ಅಲ್ಲಿ ಹುಲ್ಲು ನೆಲದ ಮೇಲೆ ಹಾಯಾಗಿ ಕುಳಿತು ಉಣ್ಣಲು ಪ್ರವೃತ್ತರಾದೆವು–ಗೋದಿಯ ಒಣ ರೊಟ್ಟಿ, ತಾಜಾ ಬೆಣ್ಣೆ ಮತ್ತು ಗಿಣ್ಣು. ಉಗಿಯಲ್ಲಿ ಬೇಯಿಸಿದ ಹರಿಣದ ನಾಲಗೆಯೂ ಇತ್ತು. ಹುಡುಗಿ ತನ್ನ ಮಗ್ಗಿನಲ್ಲಿ ಗುಡ್ಡದ ಝುರಿಯಿಂದ ತಂಪಾದ ಸಿಹಿನೀರನ್ನು ತುಂಬಿಕೊಂಡು ಬಂದಳು. ನಾನು ಅಷ್ಟು ತೃಪ್ತಿಯಿಂದ ಉಂಡು ಬಹಳ ದಿನವಾಗಿತ್ತು. ತಿಂದುಂಡು ಮುಗಿಸಿ ಇಬ್ಬರೂ ಹೊಗೆ ಬತ್ತಿ ಹಚ್ಚಿ ಸೇದುತ್ತ ಪರಸ್ಪರರ ಭಾಷೆಯನ್ನು ಕಲಿಯುವ ಹವಣ ನಡೆಸಿದೆವು.

“ಆ ಹಕ್ಕಿಯ ಹೆಸರೇನು?” ನಾನು ಆಕೆಗೆ ಕೇಳಿದೆ.

“ಲಾಹೋಲ್“ ಅವಳು ಮಾರುತ್ತರವಿತ್ತಳು.

“ಹಕ್ಕಿಯ ಕಂಠಸ್ವರ ಶುದ್ಧ ಕೊಳಲಿನ ಹಾಗಿತ್ತು–ಅತ್ಯಂತ ಕೋಮಲ ಲ್ಯಾಪಲಂಡಿನ ಜನರಿಗೆ ಅಲ್ಲಿನ ವಿಸ್ತೃತ ನಿರ್ಜನತೆಯಲ್ಲಿ ಜತೆಗೊಡುವ ಹಕ್ಕಿಯೆಂದರೆ ಇದೇ. ಅಲ್ಲೇ ಇನ್ನೊಂದು ಪೊದರಿನಲ್ಲಿ ಇನ್ನೊಂದು ಹಕ್ಕಿಯ ಹಾಡಿನ ಆಲಾಪ ಎದ್ದಿತು. ಅದರ ಸ್ವರ ಅದ್ಭುತವಾಗಿತ್ತು. ಅದರ ಕೊರಳು ನೀಲ ಬಣ್ಣದ್ದು.

“ಜಿಲೋ, ಜಿಲೋ–” ಹುಡುಗಿ ನಗುತ್ತ ಕೂಗಿದ್ದಳು.

“ಈ ಹಕ್ಕಿಯ ಕೊರಳೊಳಗೆ ಒಂದು ಗಂಟೆಯಿದೆಯೆಂದು ಲ್ಯಾಪ ಜನರ ಗ್ರಹಿಕೆ. ಅದರ ಕಂಠ ಸ್ವರದ ವೈಚಿತ್ರ್ಯಕ್ಕೆ ಅದೇ ಕಾರಣನಂತೆ. ನೆಟ್ಟಗೆ ನಮ್ಮ ನೆತ್ತಿಯ ಮೇಗಡೆ ಒಂದು ಭಾರೀ ಕಪ್ಪು ಕ್ರಾಸು ನಿಶ್ಚಲವಾಗಿ ಆಕಾಶದಲ್ಲಿ ನೇತಾಡುತ್ತಿದ್ದುದನ್ನು ಕಂಡೆವು. ಪಕ್ಷಿರಾಜನಾದ ಗರುಡ ತನ್ನ ಗತಿವೇಗವನ್ನು ಸಂಹತಗೊಳಿಸಿ ತನ್ನ ನಿರ್ಜನ ಸಾಮ್ರಾಜ್ಯದ ವಿಸ್ತಾರವನ್ನು ಪ್ರದರ್ಶಿಸುತಿದ್ದನು.

ದೂರದಲ್ಲಿ ಪರ್ವತ ನಿರ್ಝರಣಿಯ ಕಡೆಯಿಂದ ನಗುವ ವಿಚಿತ್ರ ಸ್ವರ ಕೇಳಬರುತ್ತಿತ್ತು. ಎಲ್ಲವೂ ಇಂದ್ರ ಜಾಲದಂತೆ ತೋರಿತು!

"ರೋ.. ರೋ-ರೈಕ್" ಹುಡುಗಿ ಆನಂದ ತುಂದಿಲಳಾಗಿ ಕೂಗಿದಳು. 'ಈ ದಿನ ಸುದಿನ' ಎಂದು ಅದರ ಅರ್ಥ.

"ನಿರ್ಝರದ ನಗು ಉತ್ತರ ಕೊಟ್ಟಿತು - ವ್ಹಾರ್ ಲುಕ್, ವ್ಹಾರ್ ಲುಕ್ - ಲುಕ್ ಲುಕ್!" ಅಂದರೆ 'ಮಳೆ ಬಂದೀತು, ಮಳೆ ಬಂದೀತು- ಬಂದೀತು, ಬಂದೀತು' ಎಂದರ್ಥ.

"ನಾನು ಕಾಲು ನೀಡಿ ಅಂಗಾತ ಮಲಗಿ ನೋಡತೊಡಗಿದೆ. ಹುಡುಗಿ ತನ್ನ ಒಡವೆಗಳನ್ನು ಪಾಡಾಗಿ ಕಟ್ಟತೊಡಗಿದ್ದಳು. ಒಂದು ಸಣ್ಣ ಉಣ್ಣೆಯ ಶಾಲು, ಹರಿಣ ಚರ್ಮದ ಒಂದು ಸುಂದರ ಜೋಡು, ಚರ್ಚಿಗೆ ಹೋಗುವಾಗ ಧರಿಸುವ ಚಿತ್ರ ವಿಚಿತ್ರ, ಕಸೂತಿ ಹಾಕಿದ ಒಂದು ಜತೆ ದಸ್ತಾನೆ (glove) ಮತ್ತು ಬೈಬಲ್ಲು. ನಾನು ಮುಗ್ಧನಾಗಿ ನೋಡುತ್ತಿದ್ದೆ, ಎಷ್ಟು ಸುಂದರ ಅವಳ ಕೈಗಳು, ಕೈಗಳು!"

"ಡಾಕ್ಟರ್, ಇಲ್ಲಿ ಕೇಳಿರಿ, ಆ ಹುಡುಗಿ ಬಂದರೆ, ನಾನು ಹೇಳಿದ್ದೆನಲ್ಲ, ಆ ಶಾಮಲಾಂಗಿ" ತಲೆಯೆತ್ತಿ ನೋಡಿದೆ, ಮತ್ತ ಆ ಕವಿ. ಪುಸ್ತಕ ಮುಚ್ಚಿ ಅವನ ಕಡೆ ಮುಖಹಾಕಿ ಕುಳಿತೆ. ಅವನ ಹಣೆಯ ರಂಧ್ರದಿಂದ ರಕ್ತ ಮಿಶ್ರಿತ ಮಿದುಳು ಇನ್ನಷ್ಟು ಹೊರಬಂದಿದೆ.

"ನೋಡಿರಿ ಡಾಕ್ಟರ್, ಆ ಹುಡುಗಿ ಎಲ್ಲಾದರೂ ಈ ಕಡೆ ಬಂದರೆ ನಾನು ಹೇಳಿದ್ದೆನಲ್ಲ, ಆ ಶಾಮಲಾಂಗಿ ಅವಳಿಗೆ ಹೇಳಿರಿ, ನಾನು ಅವಳಿಗೋಸ್ಕರ ಒಂದು ಕವಿತೆ ಬರೆದಿದೆ. ಅದನ್ನ ಓದಿ ತೋರಿಸಲು ಸಾಧ್ಯವಾಗಿರಲಿಲ್ಲ. ವೇಳೆಯೆ ಸಿಗಲಿಲ್ಲ. ನೋಡಿರಿ, ಅವಳು ಅವಕಾಶ ಕೊಡಲೇ ಇಲ್ಲ."

ಆ ಮೇಲೆ ಅವನು ಸ್ವಲ್ಪ ಹಿಂದೆ ಮುಂದೆ ನೋಡಿ ಹೇಳಿದ, "ತಾವು ಕೇಳುವಿರಾ? ಡಾಕ್ಟರ್ ಜನರು ತಾವು, ತಮಗೆ ಕವಿತೆಗಳು ಮೆಚ್ಚಲಿಕ್ಕಿಲ್ಲ. ಆದರೂ"-

ಅವನ ಕಣ್ಣು ಮೋರೆಗಳಲ್ಲಿ ಏನೋ ಒಂದು ಹೃದಯಸ್ಪರ್ಶಿ ದೈನ್ಯ ಮೂಡಿ ಮೊಳೆಯಿತು. ವೀಣೆಯ ತಂತಿಯನ್ನು ಮೀಟಿದರೆ ಅದು ಕಂಪಿಸುತ್ತ ಹೋಗುವದಲ್ಲ, ಹಾಗೆ ಅವನ ದೃಷ್ಟಿಗಳು ಥರಥರ ಕಂಪಿಸುತ್ತಿದ್ದವು.

"ಕವಿತೆ ಕೇಳುವಿರಾ? ಆಕೆ ಬಂದರೆ ಹೇಳಬೇಕು-"

"ಆಗಲಿ"

ಕವಿ ನುಡಿಯತೊಡಗಿದ. ನಾನು ಕೇಳುತ್ತ ನನ್ನ ಹೃದಯ ಸುದೂರ ಅತೀತದ ದಾರಿ ಹಿಡಿದು ಏನನ್ನೋ ಅರಸುವಂತೆ ಕೈಯಾಡಿಸಲಾರಂಭಿಸಿತು.

"ನೀ ಬಂದೆ ಅಂದು–
ಬಂತು ಹರಿದು ಸುಖ, ಬಂತು ದುಃಖ,
ದಾಹ ಬಂತು, ಬಿಗುಮಾನ ಬಂತು,
ಸಂಗಮಿಸಿದವೀ ಜೀವನದಿ.
ಈ ಕ್ಷುದ್ರ ಕಾಸಾರ
ಕ್ಷಣದಲ್ಲಿ ತಳೆದು ನಿಂತಿತ್ತು ಸಾಗರದಾಕಾರ,
–ನೀ ಮೈದೋರಿದಂದು.
"ರವಿಚಂದ್ರ ತಾರೆ ಗ್ರಹಕುಲವು,
ಹೊಳೆ ಹೊಳೆವ ನೀಲ ನಭವು,
ದಾರಿ ತಪ್ಪಿ ಅಲೆವೇಸೊ ಧೂಮಕೇತು,
ಪ್ರಸವವೇದನೆಯಿಂದ ಮಿಡುಕುತಿಹ ತೇಜೋಮೇಘ,
ಉಷೆ ಸಂಜೆ ಜೊನ್ನ ಕಾಳ ಲೆಕ್ಕಕೆ ನಿಲುಕದ ರೂಹುಗಳ ಜಾಲ
ಈ ಕಡಲಿನೊಡಲಿನಲಿ ಹೊಸ ಹೊಸ ಬಿಂಬವ ಧರಿಸಿ
ಬಣ್ಣ ಬಣ್ಣಗಳ ಚಿತ್ರವಿಚಿತ್ರ ಕನಸಿನ ಮೇಳವ ರಚಿಸಿ.
"ಕೋಟಿ ಕೋಟಿ ಅಲೆಗಳಲ್ಲಿ
ತಳಮಳಿಸುವ ಸಾಗರದಲ್ಲಿ
ಏನಿದೆ, ಏನಿಲ್ಲ?
ಎಂಥ ಸಿರಿ–ಮೇಣೆಂಥ ಕಡು ದಾರಿದ್ರ್ಯ
ನಡುಹಗಲ ಬೆಳಕು ಭೇದಿಸದ ಅದರ ಕಗ್ಗತ್ತಲತಲ ತಲದಿ
ಇತ್ತು ಮುತ್ತು, ಮೇಣಿತ್ತು ಶಂಖ–ಇನ್ನೇನೊ ಬಲ್ಲರಾರು!
ಹೆಸರಿಲ್ಲದ ಅಪರೂಪ ರೂಪಗಳ ಹೊಗರು!
"ಬಡಬಾನಲನಲ್ಲಿ
ಉರಿದುರಿದು ಸಾಯುತಿಹ ನೀರವ ದಾಹದಲಿ

ಜನನೋನ್ಮುಖಿ ಊರ್ವಶಿಯ ಅಂಧ ತವಕ
ಅತ್ತಿದೆ ಕರೆದಿದೆ ತಾಳಗೆಟ್ಟ ದಾರುಣ ಯಾತನೆಯಲ್ಲಿ,
ಏಸು ಹಾವುಗಳು, ಮೊಸಳೆಯೇಸು
ನಾನು ಕುಂಡಲಮಂಡಲದಿ
ಭೀಷಣ ಮೋಹನ ಜಿಗಿಜಿಗಿ ತಳತಳ
ಮೈಗಳ ಪಸರಿಸಿ ಮಲಗಿಹವಲ್ಲಿ
ಹವಳದ ತಳಿರಲ್ಲಿ"

ಕೇಳುತ್ತ ಕೇಳುತ್ತ ನನ್ನ ಮನಶ್ಚಕ್ಷುಪಟಲದ ಮೇಲೆ ದೃಶ್ಯ ಮಾಲೆಯೊಂದು ಹಾಯತೊಡಗಿತು; ಒಬ್ಬ ದರಿದ್ರ ಕೃಶ ಯುವಕ ಬರಿಗಾಲಿಂದ ದಾರಿ ನಡೆಯುತ್ತಿದ್ದಾನೆ. ಹೊಟ್ಟೆಯಲ್ಲಿ ಕೂಳಿಲ್ಲ, ತಲೆಗೂದಲು ಎಣ್ಣೆ ಕಂಡಿಲ್ಲ, ಮೈಯಲ್ಲಿ ಹರಕು ಬಟ್ಟೆ ಬರೆ. ಆದರೆ ಅತ್ತ ಕಡೆ ಅವನ ಲಕ್ಷ್ಯವಿಲ್ಲ. ಅವನ ಕಣ್ಣುಗಳಲ್ಲಿ ತೀವ್ರ ಜ್ಯೋತಿ. ಒಳಗೆ ಅಮೃತಪಿಪಾಸೆ. ಅಮೃತದ ಆಮಿಷ ತೋರಿಸಿ ಹುಡುಗಿಯೊಬ್ಬಳು ಅವನನ್ನ ಕೈಮಾಡಿ ಕರೆಯುತ್ತಿದ್ದಾಳೆ. ಅವಳ ಕರೆಗೆ ಆತ ಮುಂದೆ ಮುಂದೆ ನುಗ್ಗುತ್ತಿದ್ದಾನೆ. ಕಿಶೋರಿಯ ಆಯತನೇತ್ರಗಳಲ್ಲಿ ಅದೆಂಥ ಅಪೂರ್ವ ರಸಪ್ರಕಾಶ- ಭಾಷಾತೀತವಾದ ಎಂಥ ನೀರವ ನಿವೇದನ! ಕವಿ ಮುಂದುವರಿಸಿದ;

ಆ ಗಹನ ಜಲದ ತಲದಲ್ಲಿ
ಎಬ್ಬಿಸಿ ತೆರೆಗಳನು
ಲೋಲುಪ ಆಗ್ರಹಭರದಲಿ ಪಸರಿಸಿ
ಎಂಟೂ ಕೈಗಳನ್ನು
ಲುಬ್ಧ-ಮುಗ್ಧವಾಗಿರ್ಪುದು 'ಅಕ್ಟೋಪಾಸ್'
ನೆತ್ತರ ನೀರಡಿಕೆಯಲಿ
ಸುತ್ತಲೆಲ್ಲ ಕಣ್ಣಿಟ್ಟು ನಿರಂತರ
ಗಸ್ತಿ ತಿರುಗುತಿದೆ 'ಶಾರ್ಕ್'
"ಆ ಗಂಭೀರ ಕರಾಲ ಜಲಧಿಯನು ಕಲಕಿ
ಅಲ್ಲೋಲ ಕಲ್ಲೋಲಗೊಳಿಸಿ,
ಹುಚ್ಚೆದ್ದು ಕುಣಿದು ವಿಕಟಾಟ್ಟಹಾಸದಲಿ

ತುಂಬಿದೇಸು ಹಡಗುಗಳನು ಮುಗುಚಿ
ಮುಳುಗಿಸಿಹುದೊ ಬಿರುಗಾಳಿ.
"ಏನೇನಿದ್ದವೊ ಇನ್ನೂ
ನಾ ಕಾಣೆನವುಗಳಾ ರೂಪ;
ಕ್ಷಣದರ್ಶನದಲಿ ಹೊರಲಕ್ಷಣದಲಿ
ಪಡೆವಷ್ಟು ಪಡೆದೆ ಛಾಯೆ.
ಅನಂತ ಛಾಯಾಮಯವಪಾರ ಜಲಧಿ–
ದಿನದಿನವು ಮಥಿಪರದನು
ದೇವದಾನವರು,
ಸಾವನ್ನೆ ಕೊಲುವ ಅಮೃತವನು ಪಡೆಯಬಯಸಿ.
"ನನ್ನೀ–
ತುಚ್ಛ ಜೀವನದ ಕ್ಷುಲ್ಲಕ ಕಾಸಾರ
ಕ್ಷಣದಿ ತಳೆದು ನಿಂತಿತ್ತು ಸಾಗರದಾಕಾರ
ನೀ ಮೈದೋರಿದಂದು."

"ಬಿಚ್ಚಿರಿ, ಬಿಚ್ಚಿರಿ, ಈ ಉರುಲು ಬಿಚ್ಚಿರಿ–"

ಬಿಗಿದ ಕಂಠದಿಂದ ಕೂಗುತ್ತ ಯುವತಿಯೊಬ್ಬಳು ಬರುತ್ತಿದ್ದಳು ಅವಳ ಕೆಂಪೇರಿದ ಎರಡೂ ಕಣ್ಣುಗಳು, ಪುಟಿದು ನೆಗೆಯುವಂತಿದ್ದವು. ಕೊರಳಲ್ಲಿ ಬಿಗಿದ ಹಗ್ಗ. ಅವಳು ಪ್ರಯತ್ನ ಪೂರ್ವಕವಾಗಿ ಉರುಲು ಸಡಿಲಿಸಿ ಬಿಚ್ಚಿ ಹಗ್ಗವನ್ನು ಒಗೆದಳು. ಅವಳ ನೀಳವಾದ ಮುಂಗುರುಳುಗಳು ತೊನೆದಾಡುತ್ತಿದ್ದವು. ತೆಳ್ಳನ ಕೆಂದುಟಿಗಳಲ್ಲಿ ವಿಚಿತ್ರ ನಗು.

"ಎಲ್ಲಿ? ಎಲ್ಲಿ ಹೋದ ಆ ಕವಿ? ಕವಿತೆಯೆ ಕಡೆಗೆ ಸಾವಿನ ಉರುಲಾಗಿ ಕೊರಳು ಹಿಸುಕುವದೆಂದು ಅವನಿಗೇನು ಗೊತ್ತು?"

"ಹುಂ, ಜೀವನದಲ್ಲಿ ಎಷ್ಟು ಕವಿತೆಗಳನ್ನು ಕೇಳಿದ್ದೇನೆ!" ಯುವತಿ ಮೂಗು ಮುರಿದಳು.

"ಈ ಹಾಳು ರೂಪದ ದೆಸೆಯಿಂದ ಎಷ್ಟು ಕಾಟ! ಹೋದ ಹೋದಲ್ಲಿ ಸಾವಿರ ಕಣ್ಣುಗಳು ಆತುರದಿಂದ ಮರೆತು ನೊಡುತಿರಬೇಕು – ನುಂಗುವ ಹಾಗೆ. ಹಿಂದು, ಮುಸಲ್ಮಾನ, ಜೈನ, ಕ್ರಿಶ್ಚನ್, ಹುಡುಗ, ಮುದುಕ, ಯುವಕ – ಎಲ್ಲರ

ಕಣ್ಣುಗಳಲ್ಲಿಯೂ ಆ ಬುಭುಕ್ಷಿತ ದೃಷ್ಟಿ. ಕವಿ ಕವಿತೆ ಬರೆಯುವ, ಧನಿ ಹಣ ತೋರಿಸುವ, ಬಲವುಳ್ಳಾತ ಶಕ್ತಿಪ್ರದರ್ಶನವನ್ನೂ ಮಾಡಲು ಹಿಂಜರಿಯುವುದಿಲ್ಲ. ಏನೂ ಗತಿಯಿಲ್ಲದ ಭಾಗ್ಯಹೀನ ಕಡೆಗೆ ಅಂಗಲಾಚುವ ಅಸಹ್ಯ!"

ಹೆಂಗಸು ಇನ್ನಷ್ಟು ಹತ್ತಿರ ಸರಿದು ಕೇಳಿದಳು. "ಇರಲಿ, ಡಾಕ್ಟರ್ ನನಗೊಂದು ಮಾತು ಹೇಳುತ್ತೀರಾ? ಅಚ್ಚಾದ. ಪುಸ್ತಕಗಳಲ್ಲಿ ಪ್ರೇಮದ ಕತೆಗಳು ಇರುವವಲ್ಲ, ಅವೆಲ್ಲ ಸತ್ಯವೆ? ಹಾಗಾಗುವದು – ಎಂದಾದರೂ ಸಾಧ್ಯವುಂಟೆ? ನಾನು ಬದುಕಿದ್ದಾಗ ನೋಡಿದ ಮಟ್ಟಿಗೆ ಗಂಡಸರು ನಮ್ಮನ್ನು ತೆಗೆದುಕೊಂಡು ಬರಿ ಚೆನ್ನಾಟ ಆಡುತ್ತಾರೆ. ನಾವು ಹೆಂಗಸರು ಫುಟ್‌ಬಾಲ್. ಅವರು ಪಟುಗಳಾದ ಪಂದ್ಯಾಟಗಾರರು, ಎಲ್ಲರ ಲುಬ್ಧ ದೃಷ್ಟಿ ನಮ್ಮ ಮೇಲೆ. ಆದರೆ ನಾವು ಹತ್ತಿರ ಬಂದಕ್ಷಣ ಒದ್ದು ದೂರ ಹಾರಿಸಿಬಿಡುತ್ತಾರೆ. ದೂರಕ್ಕೆ ಅಟ್ಟಿ ಆ ಮೇಲೆ ಹಿಡಿಯಲು ಬೆನ್ನಟ್ಟಿ ಬರುತ್ತಾರೆ. ಇದೆಂಥ ವಿಚಿತ್ರ ವ್ಯಾಪಾರ ಹೇಳಿರಿ?"

ಹೀಗೆಂದು ಅವಳು ಮುಂದೆ ಬಂದು ದೀಪದ ಹತ್ತಿರ ನಿಂತು ದೀಪದ ಹುಳಗಳನ್ನು ನೋಡತೊಡಗಿದಳು. ಎಷ್ಟೋ ಸತ್ತು ಹೋಗಿದ್ದವು. ಎಷ್ಟೋ ಸಾಯಲಾಗಿದ್ದವು. ಇನ್ನೆಷ್ಟೋ ಇನ್ನೂ ಬದುಕಿದ್ದವು. ಬಣ್ಣಬಣ್ಣದ ಪತಂಗ ಇನ್ನೂ ದೀಪಕ್ಕೆ ಪ್ರದಕ್ಷಿಣೆ ಹಾಕುತ್ತಲೇ ಇತ್ತು.

"ಡಾಕ್ಟರ್ ಸಾಹೇಬ, ಆಗಂತೂ ನೀವು ಹೇಳಲೇ ಇಲ್ಲ. ಈಗಾದರೂ ಹೇಳಿರಿ. ಗಲ್ಲಾದ ಮನುಷ್ಯ ಕಡೆಗೆಲ್ಲಿ ಹೋಗುತ್ತಾನೆ?"

ಮತ್ತೆ ಆ ಸ್ವದೇಶೀ ಹುಡುಗ!

"ಹೇಳಿರಲ್ಲ!"

"ನನಗೆ ಸರಿಯಾಗಿ ಗೊತ್ತಿಲ್ಲ."

"ಗೊತ್ತಿಲ್ಲ?"

"ಇಲ್ಲ"

"ಹೋಗಲಿ ಬಿಡಿರಿ, ವ್ಹೋಲ್ಟಾ, ಗ್ಯಾಲವ್ಹಾನಿ, ಲ್ಯಾವ್ಹಶಾಯರ, ಪಾಸ್ತುರ, ಗ್ಯಾಲಿಲಿಯೋ ಇವರ ಪೈಕಿ ಯಾರಾದರೂ ನಿಮ್ಮ ಹತ್ತಿರ ಇದ್ದಾರೇನು? ಅವರೆಲ್ಲರಿಗೂ ನಾನು ಮಹಾಪರಾಧ ಮಾಡಿದ್ದೇನೆ. ಕ್ಷಮೆ ಬೇಡಬೇಕಾಗಿದೆ. ಇದ್ದಾರೇನು ಯಾರಾದರೂ?"

"ಇಲ್ಲ"

ಯುವಕ ನಿರಾಶನಾಗಿ ಹೊರಟುಹೋದ. ಅವನ ಕಣ್ಣಲ್ಲಿ ವಿಚಿತ್ರ ಕಾಂತಿಯೊಂದು ಮಿನುಗುತ್ತಿತ್ತು.

ಇಷ್ಟು ಹೊತ್ತು ಆ ಯುವತಿ ದೀಪದ ಹುಳಗಳನ್ನು ಪರೀಕ್ಷಿಸುತ್ತಿದ್ದಳು. ಯುವಕ ಹೊರಟುಹೋದ ನಂತರ ನನ್ನ ಬಳಿ ಬಂದು ಕೇಳಿದಳು. "ಯಾರೀತ?"

ನನಗೆ ಗೊತ್ತಿದ್ದಷ್ಟು ವೃತ್ತಾಂತ ಹೇಳಿದೆ.

ಯುವತಿ ನಕ್ಕು ನುಡಿದಳು, "ಎಲ್ಲರ ಕಥೆಯನ್ನೂ ಕೇಳುತ್ತೀರಂದ ಮೇಲೆ ನನ್ನದೂ ಒಂದಿಷ್ಟು ಕೇಳಿರಲ್ಲ. ಇರಲಿ, ಆ ಯುವಕ ಯಾರ ಯಾರ ಹೆಸರೋ ಹೇಳಿದ. ಅವರೆಲ್ಲ ಯಾರು? ಎಂಥ ವಿಚಿತ್ರ ಹೆಸರುಗಳು! ಯಾರು ಅವರು?"

"ಅವರೆಲ್ಲ ದೊಡ್ಡ ದೊಡ್ಡ ವೈಜ್ಞಾನಿಕರು. ಸತ್ತು ಹೋಗಿದ್ದಾರೆ. ಹುಡುಗ ಅವರನ್ನೇ ಹುಡುಕಿಕೊಂಡು ಅಲೆಯುತ್ತಿದ್ದಾನೆ."

"ಹುಡುಗ ಒಳ್ಳೇ ವಿದ್ವಾಂಸನೆಂದು ತೋರುತ್ತೆ?"

"ಹೌದು"

ಯುವತಿ ತುಸು ಹೊತ್ತು ಅನ್ಯಮನಸ್ಕಳಾಗಿ ಸುಮ್ಮನಿದ್ದಳು. ಮತ್ತೆ ಕೇಳಿದಳು, "ಕೇಳುವಿರಾ ನನ್ನ ಕಥೆ?"

"ಹೇಳು"

"ನಾನು ಒಳ್ಳೇ ಬ್ರಾಹ್ಮಣ ಕುಲದಲ್ಲಿ ಹುಟ್ಟಿದವಳು. ನನ್ನ ತಾಯಿ ವಿಧವೆ. ತುಂಬ ನಿಷ್ಠಾವಂತಳು. ಬಡವರಾದರೂ ನಮ್ಮ ತಾಯಿಯ ನಿಯಮ ನಿಷ್ಠೆ ನೋಡಿ, ಜನ ನಮಗೆ ತುಂಬ ಗೌರವ ಕೊಡುತ್ತಿದ್ದರು. ತಾಯಿಯ ಮುಖ ಈಗಲೂ ನೆನಪಾಗುತ್ತದೆ ನನಗೆ. ಬೆಣ್ಣೆಯಂತೆ ಬೆಳ್ಳಗಿನ ಮೈ, ಬೆಣ್ಣೆಯಂತೆ ಬೆಳಗಿನ ವಸ್ತ್ರ ಉಡುತ್ತಿದ್ದಳು."

ಹೆಂಗಸು ಕೆಲಕ್ಷಣ ಸುಮ್ಮನೆ ಸುಮ್ಮನೆ ಧ್ಯಾನಸ್ಥಳಾದಂತಿದ್ದಳು.

"ಇಂಥ ತಾಯಿಯ ಮಗಳಾಗಿ ಬೆಳೆದು ಹೀಗೇಕಾದೆ ನಾನು? ಅದನ್ನೇ ಈಗ ನಾನು ವಿಚಾರಿಸುತ್ತಿದ್ದೆ. ಇನ್ನೂ ಒಂದು ವರ್ಷ ತುಂಬಿದ್ದಿಲ್ಲ. ಆಗಲೆ ನನ್ನ ಮದುವೆಯಾಗಿ ಬಿಟ್ಟಿತ್ತು. ತಾಯಿ ಗೌರೀದಾನ ಮಾಡಿ ಪುಣ್ಯ ಸಂಪಾದನೆ ಮಾಡಿದ್ದಳು. ಊರ ಜನ ಹೇಳುವದನ್ನು ಕೇಳಿದ್ದೇನೆ. ಆಗ ನಾನು ಇರಲಿಕ್ಕೂ ಗೌರಿಯ ಹಾಗೇ ಇದ್ದೆನಂತೆ. ನನ್ನೀ ರೂಪದ ಬಲದಿಂದಲೇ ಶ್ರೀಮಂತರ ಮನೆಗೆ

ತನ್ನ ಮದುವೆಯಾಗಿತ್ತು..... ಯಾರಾದರೂ ಬಡವರ ಕೈಗೆ ಬಿದ್ದಿದ್ದರೆ ನನ್ನ ಗತಿ ಹೀಗಾಗುತ್ತಿದ್ದಿಲ್ಲ. ಎಂತ ಒಮ್ಮೊಮ್ಮೆ ಅನಿಸುತ್ತದೆ." ಹೆಣ್ಣು ಮಗಳು ಒಮ್ಮೆ ನಕ್ಕಳು.

"ಎಲ್ಲರೂ ನನ್ನ ಸೌಂದರ್ಯವನ್ನು ಕೊಂಡಾಡುವವರೆ– ನನ್ನ ಗಂಡ ಒಬ್ಬ ಹೊರತು. ಅವರು ಮಾತ್ರ ಒಂದು ದಿನವೂ ನನ್ನನ್ನು ಕಣ್ಣೆತ್ತಿ ನೋಡಿದವರಲ್ಲ. ಸೆರೆ ಕುಡಿದು ಯಾವಾಗಲೂ ಮತ್ತರಾಗಿಯೆ ಇರುತ್ತಿದ್ದ ಅವರಿಗೆ ನನ್ನ ಕಡೆ ದೃಷ್ಟಿ ಬೀರಲಿಕ್ಕೆ ಪುರುಸೊತ್ತು ಬೇಕಲ್ಲ! ರಾತ್ರಿ ಅವರ ದುರ್ಗಂಧ ವಾಂತಿಯನ್ನು ಬಳಿಯಬೇಕಾದಾಗ ಮಾತ್ರ ಬರುತ್ತಿತ್ತು ಅವರ ಅಸ್ತಿತ್ವದ ಸುದ್ದಿ. ಪತಿಯೇ ಪರದೈವವಾದರೂ ಪುಣ್ಯಕ್ಕೆ ಪತಿ ಅಮರನಲ್ಲ. ಆದರಿಂದಲೇ ಕೊನೆಗೊಮ್ಮೆ ನಿವೃತ್ತಿಯಾಯಿತು. ದೇವತೆಗಳು ಸ್ವರ್ಗದಲ್ಲಿರುವಂತೆ. ನಮ್ಮ ಪತಿದೇವರಾದರೂ ತಮ್ಮ ಕೆಟ್ಟ ಪಿತ್ತಕೋಶ ಸಮೇತರಾಗಿ ಆ ಸ್ವರ್ಗದಲ್ಲೇ ಇರಲೆಂದು ಹಾರೈಸುತ್ತೇನೆ. ಯಾಕೆಂದರೆ... ನನಗೆ ಅಲ್ಲಿ ಹೋಗಲು ಎಳ್ಳಷ್ಟೂ ಇಚ್ಛೆಯಿಲ್ಲ."

ಅವಳ ಕಣ್ಣು ಮೋರೆಗಳಲ್ಲಿ ಒಮ್ಮೆ ಅಗ್ನಿ ಜ್ವಾಲೆಯೊಂದು ಹೊಳೆದು ಮಾಯವಾಯಿತು.

"ಪತಿದೇವರು ಸ್ವರ್ಗಕ್ಕೆ ಹೋದಾಗ ನನಗೆ ಹದಿಮೂರು ವಯಸ್ಸು. ಮದುವೆಯ ಸಮಯ ಅವರು ಶ್ರೀಮಂತರಂತೆ. ಇದ್ದರೂ ಇದ್ದಿರಬಹುದು. ಮುತ್ತಜ್ಜ ಬಹಳ ಹಣಗಳಿಸಿದ್ದನು–ಇವರು ಎರಡು ಮೂರು ತಲೆಗಳಿಂದ ಅದನ್ನು ವೆಚ್ಚಮಾಡುತ್ತ ಬಂದಿದ್ದರು. ನನ್ನವರ ಪಾಲಿಗೆ ಉಳಿದುಬಂದಿದ್ದ ಅಲ್ಪಸ್ವಲ್ಪದನ್ನು ಅವರು ಸೆರೆಕುಡಿದು ನಿಶ್ಶೇಷವಾಗಿ ಇತಿಶ್ರೀ ಮಾಡಿ ಮೇಲೆ ಕೈಲಾದಷ್ಟು ಸಾಲವನ್ನೆ ಬಿಟ್ಟು ಹೋಗಿದ್ದರು. ಸೊಗಸೆನಿಸುತ್ತೆಯೆ ಕೇಳಲಿಕ್ಕೆ?"

"ಸೊಗಸೆನಿಸುವದಿಲ್ಲ. ಆದರೂ ಹೇಳು"

ಯುವತಿ ಹುಬ್ಬು ಗಂಟಿಕ್ಕಿದಳು. "ಸೊಗಸೆನಿಸುವುದಿಲ್ಲ? ಕೊಳೆತ ಹೆಣ ಸಿಗಿಯಲು ಸೊಗಸೆನಿಸುತ್ತದೆ. ಪ್ರೇಮದ ಕಟ್ಟುಕತೆ ಓದಲು ಸೊಗಸೆನಿಸುತ್ತದೆ. ನನ್ನ ಜೀವನದ ಸತ್ಯ ವೃತ್ತಾಂತ ಕೇಳಲಿಕ್ಕೆ ಮಾತ್ರ ಸೊಗಸೆನಿಸುವದಿಲ್ಲ?"

"ಸತ್ಯ ಯಾವಾಗಲೂ ಅಪ್ರಿಯ, ನೀನು ಹೇಳು."

ಅವಳು ಹೇಳತೊಡಗಿದಳು.

"ಹಾಂ, ಎಲ್ಲಿ ನಿಲಿಸಿದ್ದೆ... ಹೌದು, ಗಂಡ ಸ್ವರ್ಗಕ್ಕೆ ಹೋಗಿ ಬಿಟ್ಟಿದ್ದ. ನಾನು ಮರ್ತ್ಯದಲ್ಲೆ ಉಳಿದಿದ್ದೆ. ಮತ್ತೆ ನನ್ನ ಗಂಡನ ಸೋದರ ಮಾವನ ಮಗ ಪ್ರಲಕ ಠಾಕೂರನು ಉಳಿದಿದ್ದ. ಅವನೇ ನನ್ನ ಪ್ರಥಮ ಪ್ರಣಯಿ." ಒಂದಿಷ್ಟು

ಮುಗುಳು ನಕ್ಕು ಅವಳು ಮುಂದುವರಿಸಿದಳು "ನಮ್ಮ ದೇಶದಲ್ಲಿ ಸತೀ ಸಹಗಮನ ಪದ್ಧತಿ ಇತ್ತಲ್ಲ, ಅದೇ ಸುಖವಿತ್ತು ನೋಡಿರಿ. ಗಂಡನ ಜತೆಗೆ ಹೆಂಡತಿಯೂ ಸುಟ್ಟುಹೋಗುತ್ತಿದ್ದಳು ಸರಿ. ಆಮೇಲೆ ನಿಶ್ಚಿಂತೆ! ಹೀಗೆ ಬೆಂದು ಬೆಂದು ಕೊರಗಿಕೊರಗಿ ಸಾಯುವ ಅವಸ್ಥೆ ಯಾರಿಗೆ ಬೇಕಿತ್ತು? ಈ ಸನಾತನ ದೇಶದಲ್ಲಿ ಸತೀ ದಹನದ ಪದ್ಧತಿ ಹೇಗೆ ಲೋಪವಾದೀತು? ಇಂದಿಗೂ ಈ ದೇಶದ ಮನೆಮನೆಯಲ್ಲಿಯೂ ವಿಧವೆಯರು ಬೆಂದುಬೆಂದು ಸಾಯುತ್ತಾರೆ. ಬೆಂಕಿಯ ರೂಪ ಮಾತ್ರ ಬೇರೆ, ಅಷ್ಟೆ–ಅದು ಚಿತಾನಲ, ಇದು ವ್ಯಥಾನಲ." ನನ್ನ ಜೀವಮಾನದಲ್ಲಿ ಹೋದಹೋದಲ್ಲಿ ಇದಕ್ಕೆ ನಿದರ್ಶನಗಳನ್ನು ಕಂಡಿದ್ದೇನೆ. ಈ ವ್ಯಥಾನಲವನ್ನು ನಂದಿಸಲು ನಾನಾ ಪ್ರಯತ್ನಗಳನ್ನು ಮಾಡಿದ್ದೇನೆ. ಆದರೆ ನೀರೇ ಸಿಗಲಿಲ್ಲ. ನರಕದಲ್ಲಾದರೂ ನೀರು ಸಿಕ್ಕೀತೆ? ಇಲ್ಲ. ಮರ್ತ್ಯ ಲೋಕವೇ ನನ್ನ ಪಾಲಿಗೆ ನರಕವಾಗಿ ಹಬ್ಬಿತ್ತು. ಆ ನರಕದಲ್ಲಿ ನಾನು ನನ್ನ ಸುತ್ತಲೂ ಎಂಥ ಜನ ಸಂದಣಿಯನ್ನು ಕಕ್ಕಿರಿಸಿ ಬಿಟ್ಟಿದ್ದೆ. ಈ ಸಾಮಾನ್ಯ ದೇಹದಿಂದ ಇಷ್ಟೆಲ್ಲ ಜನರ ಮೇಲೆ ಪ್ರಭುತ್ವವನ್ನು ಹೇಗೆ ನಡೆಸಿದೆನೋ ಅದೀಗ ನನಗೇ ತಿಳಿಯ ದಾಗಿದೆ. ಒಬ್ಬರೆ, ಇಬ್ಬರೆ? ಪ್ರತಿನಿತ್ಯ, ಗಳಿಗೆ ಗಳಿಗೆಗೆ ಹೊಸ ಹೊಸ ಜನರು. ತುಚ್ಛ ವಾರಾಂಗನೆಯೊಬ್ಬಳ ಜೀವನದ ವೃತ್ತಾಂತವನ್ನು ಸಾದ್ಯಂತವಾಗಿ ವಿಸ್ತರಿಸಿ ನಿಮ್ಮನ್ನು ಕಾಡುವ ಬಯಕೆ ನನಗಿಲ್ಲ. ಆದರೆ ಇಷ್ಟು ಮಾತ್ರ ಹೇಳುವೆ, ಉರುಲು ಹಾಕಿಕೊಳ್ಳುವ ಇಚ್ಛೆಯಿದ್ದಿಲ್ಲ. ನನಗೆ ಪ್ರಸಂಗ ಒಂದರೆ ಗಾಡಿಯ ಎತ್ತುಗಳೂ ಆತ್ಮಹತ್ಯೆ ಮಾಡಿಕೊಳ್ಳ ಬಯಸುವವು ಸಾಧ್ಯವಿಲ್ಲವೆಂದು ಸುಮ್ಮನಿರುತ್ತವೆ ಅಷ್ಟೆ.

"ಜೀವನದಲ್ಲಿ ಎಲ್ಲಕ್ಕೂ ದುಃಖದ ಸಂಗತಿ ಒಂದಿತ್ತು. ಏನು ಗೊತ್ತೆ? ನಾನು ಯಾರನ್ನೂ ಪ್ರೀತಿಸಿರಲಿಲ್ಲ. ಪ್ರೀತಿಸಬಹುದಾದ ಒಬ್ಬನೇ ಒಬ್ಬ ದೊರೆತಿರಲಿಲ್ಲ. ಆದರೂ ಹಣದ ಆಸೆಗಾಗಿ ಪ್ರೇಮದ ನಟನೆ ಮಾಡಬೇಕಾಗಿ ಬರುತ್ತಿತ್ತು. ಈ ಗಂಡಸರ ಪ್ರವೃತ್ತಿ ಎಷ್ಟು ವಿಚಿತ್ರ, ಅಂತೇನೆ! ಮನೆಯ ಗರತಿ ಹೆಂಡಿರನ್ನ ಕಾಲಿಂದ ಚೆಲ್ಲಿ ನಮ್ಮ ಕಡೆ ಓಡಿ ಬರುತ್ತಾರೆ. ನನ್ನ ಗಂಡನೂ ಹಾಗೆಯೆ ಮಾಡುತ್ತಿದ್ದನಂತೆ. ಗಂಡಸರ ಹದಿನಾರಾಣೆ ಲೋಭಜಾರೆಯರ ಮೇಲೆ. ನಾವು ಜಾರೆಯರೆಂದು ಗೊತ್ತಿದ್ದೇ ನಮ್ಮ ಕಡೆ ಬರುತ್ತಾರೆ. ಬಂದು ಏಕನಿಷ್ಠತೆಯನ್ನು ಬೇಡುತ್ತಾರೆ. ನಾವೂ ಹಣದಲೋಭದಿಂದ ಏಕನಿಷ್ಠತೆಯನ್ನು ಅಭಿನಯಿಸುತ್ತೇವೆ. ಹಾರೈಸಿ ಜೀವ ಕಳೆದುಕೊಂಡಿದ್ದೆನೆಂತ ತಿಳಿದೀರಾ?"

ಎನ್ನುತ್ತೆನ್ನುತ್ತ ಅವಳು ನಸುನಕ್ಕು ಹೊರಟುಹೋದಳು. ತೆರೆದ ಕಿಡಿಕಿಯಿಂದ ತಂಡಿಗಾಳಿಯ ಒಂದು ಸೆಳಕು ಬುಸ್ಸೆಂದು ಕೋಣೆಯೊಳಗೆ ನುಗ್ಗಿತು.

ಅದೇ ಪತಂಗ ಬೆಳಕಿನ ಕುಡಿಯನ್ನುದ್ದೇಶಿಸಿ ಹೇಳುತ್ತಿತ್ತು; "ನಾನು ನೀಲಾಕಾಶ ಸಂಚಾರಿಯಾದ. ಜ್ಯೋತಿರ್ಮಯ ಸವಿತೃವಿನ ಉಪಾಸಕ. ಮುಕ್ತ ಪ್ರಕಾಶದಲ್ಲಿ, ನಿರ್ಮಲ ವಾತಾವರಣದಲ್ಲಿ ನನ್ನ ಪರ್ಯಟನ ಮುಚ್ಚಿದ ಮನೆಯ ಈ ಸಂಕೀರ್ಣತೆಯಲ್ಲಿ ನನ್ನ ಅಂತರಂಗ ಉಸಿರುಗಟ್ಟಿದಂತೆ ಚಡಪಡಿಸುತ್ತದೆ."

ಕಿಡಿಕಿಯಿಂದ ಮತ್ತಷ್ಟು ಚಳಿಗಾಳಿ ಒಳನುಗ್ಗಿತು. ದೀಪವೊಮ್ಮೆ ನಡುಗಿ ಪುನಃ ನಿಚ್ಚಳವಾಗಿ ಉರಿಯತೊಡಗಿತು.

ಪತಂಗ ಮತ್ತೆ ಅದಕ್ಕೆ ಪ್ರದಕ್ಷಿಣೆ ಹಾಕುತ್ತ ಮೃದುಗುಂಜನದಲ್ಲಿ ಏನೇನು ಗೊಣಗೂಡುತ್ತಿತ್ತೊ ಅದು ನನಗೆ ಅರ್ಥವಾಗಲಿಲ್ಲ.

ನಿದ್ದೆಗೆಟ್ಟ ಕಣ್ಣುಗಳನ್ನು ಕಿಡಿಕಿಯಾಚೆಗೆ ಪ್ರೇರಿಸಿ ನೋಡುತ್ತ ಕುಳಿತೆ; ಈ ಕಿಡಿಕಿಯದೂ ಒಂದು ಅದ್ಭುತವೆ. ಈ ಅನಂತ ಬ್ರಹ್ಮಾಂಡವೆಲ್ಲಿ, ಈ ಕಿಂಡೆಯಲ್ಲಿ? ಅಸೀಮ ಆಕಾಶದಲ್ಲಿ ಕಿಕ್ಕಿರಿದ ಕೋಟಿಕೋಟಿ ನಕ್ಷತ್ರಗಳ ಸಮಾಜದಲ್ಲಿ ನಮ್ಮ ಸೌರ ಜಗತ್ತಿನ ಸೀಮೆ ಎಷ್ಟು ಕ್ಷುದ್ರ..! ಆ ಸೌರಜಗತ್ತಿನ ಒಂದು ಕ್ಷುದ್ರ ಗ್ರಹ ನಮ್ಮ ಭೂಮಿ. ಆ ಭೂಮಿಯ ಒಂದುಮೂಲೆಯಲ್ಲಿ ನನ್ನ ಕಃಪದಾರ್ಥ. ಈ ಮನೆಯ ಗೋಡೆಯಲ್ಲಿ ಈ ಕ್ಷುಲ್ಲಕ ಕ್ಷುದ್ರ ಛಿದ್ರ-ಕಿಡಿಕಿ. ಎಷ್ಟು ಸಾಮಾನ್ಯ, ಆದರೂ ಎಷ್ಟು ಸಾಮಾನ್ಯ! ಕ್ಷುದ್ರ ಈ ವಾತಾರ್ಯದಿಂದಲೇ ನನಗೆ ಇಡಿ ಜಗತ್ತಿನ ಸುದ್ದಿ ಬರುತ್ತದೆ. ಆದರಿಂದಲೇ ಆಕಾಶ ಪಟದಲ್ಲಿ ವಿಶ್ವರೂಪದ ದರ್ಶನವಾಗುತ್ತದೆ. ಬೆಳಕುಬರುತ್ತದೆ, ಅಂಧಕಾರವೂ ಬರುತ್ತದೆ.

"ಡಾಕ್ಟರ್ ಸಾಹೇಬ, ಡಾಕ್ಟರ್ ಸಾಹೇಬ, ಇಲ್ಲಿ ನೋಡ್ರಿ-"

ಮತ್ತೆ ಅದೇ ಸಂತಾನ ಘಾತಕಿ ತಾಯಿ ಬಂದಿದ್ದಳು. ಅವಳ ಬಗಲಲ್ಲಿ ಒಂದು ಸತ್ತ ಕೂಸು.

"ನೋಡ್ರಿ ಡಾಕ್ಟರ್, ಜೀವ ಇದೆಯೋ ಏನೊ. ಎದೆಯ ಹತ್ತಿರ ಇನ್ನೂ ಡಬ್ ಡಬ್ ಅಂತ ಸದ್ದಾಗುವ ಹಾಗಿದೆಯಲ್ಲಾ? ಸ್ವಲ್ಪ ಪರೀಕ್ಷೆ ಮಾಡಿ ನೋಡ್ರಿ. ನದಿಯ ಪ್ರವಾಹದಲ್ಲಿ ಬಿದ್ದಿತ್ತು, ಪಾಪ. ನಾಯಿಗಳು ಇದರ ಒಂದು ಕೈ ಹರಿದು ತಿಂದಿದ್ದವು. ನೋಡ್ರಿ, ಬದುಕಿದೆಯೋ ಏನೋ!"

ಮುಂಗೈಗಳಲ್ಲಿ ಮಗುವನ್ನು ಹಿಡಿದು ನನ್ನ ಮುಂದೆ ಚಾಚಿದಳು. ನಿಃಸ್ಪಂದ ಪ್ರಾಣಹೀನ ಕಳೇಬರ. ಒಂದು ಕಣ್ಣು ಇಲ್ಲದಾಗಿತ್ತು. ಕಾಗೆಗಳು ತೋಡಿ ತಿಂದಿರಬೇಕು. ಒಂದು ಕೈಯಲ್ಲಿನ ಕೆಲ ಬೆರಳುಗಳು ನಿಜವಾಗಿ ಕಾಣೆಯಾಗಿದ್ದವು. ನಾಯಿಗಳ ಕಾಯಕ ಇರಬೇಕು.

“ಡಾಕ್ಟರ್ ಸಾಹೇಬ, ಇಲ್ಲೇನೋ ಕಪ್ಪು ಗುರುತು ಕಾಣುತ್ತದ್ದಲ್ಲ, ಏನದು?”

“ನೀನು ಅಲ್ಲೇ ತಾನೆ ಅದರ ಕತ್ತು ಹಿಸುಕಿದ್ದು?”

ಯುವತಿ ಮತ್ತೆ ಮಗುವನ್ನು ಬಗಲಲ್ಲೇರಿಸಿಕೊಂಡಳು. ಅವಳ ಮೈ ಥರಥರ ನಡುಗುತಿತ್ತು.

“ಇನ್ನೂ ಸ್ವಲ್ಪ ಉಸಿರಾಡುತ್ತಿದೆ ಡಾಕ್ಟರ್, ನೋಡಿಯಾದರೂ ನೋಡಿರಿ.”

ಏನು ಹೇಳಲಿ?

ಸುಳ್ಳು ಹೇಳಿದೆ, “ಹೌದು, ಇನ್ನೂ ಸ್ವಲ್ಪ ಜೀವ ಇದೆ.”

“ಸತ್ಯವಾಗಿ”

ಹುಚ್ಚಿಯಂತೆ ಅವಳು ಮಗುವನ್ನು ಬರ ಸೆಳೆದು ತಬ್ಬಿಕೊಂಡು ಸ್ಥಾನಸ್ಥಾನದಲ್ಲಿಯೂ ಮುತ್ತುಗಳ ಸುರಿಮಳೆಗರೆದಳು. ಅವಳ ಎದೆಯ ಸೆರಗು ಜಾರಿತು, ತಲೆಯ ಮುಡಿ ಕೆದರಿತು. “ನನ್ನ ಮಗುವೆ, ನನ್ನ ಮುತ್ತೇ, ನನ್ನ ಚಿನ್ನಾ, ನನ್ನ ಮಾಣಿಕ್ಯಾ–“

ದಂಗು ಬಡಿದವನಂತೆ ನೋಡುತ್ತ ಕುಳಿತೆ. – ಸತ್ತ ಮಗುವಿನ ತುಟಿಗಳೊಲ್ಲೊಂದು ನಗು ಅರಳಿದಂತೆ, ಅದು, “ಅವ್ವಾ ಅವ್ವಾ“ ಎಂದು ಕರೆದಂತೆ ಭಾಸವಾಯಿತು.

ಹೊರಗೆ ಗಾಳಿಯ ರಭಸ ಹೆಚ್ಚುತ್ತಿತ್ತು.

ಕಿಡಿಕಿಯಿಂದ ನೋಡಿದೆ. ಹೊರಗೆ ಆಕಾಶದಲ್ಲಿ ಕಾರ್ಮೋಡಗಳು ಅಡರಿ ಅತ್ತಿಂದಿತ್ತ ಧಾವಿಸುತ್ತಿದ್ದವು. ನಕ್ಷತ್ರ ಹೀನವಾದ ರಾತ್ರಿ ಘೋರ ತರವಾಗುತ್ತಿತ್ತು. ಚಿರಕಾಲದ ಆ ಉಜ್ವಲ ಶಾಶ್ವತ ತಾರಾಪುಂಜ ಈಗ ಕಾಣದಾಗಿತ್ತು. ಸಾಮಾನ್ಯ ಮೇಘಗಳಿಗೂ ಏನು ಅಸಾಮಾನ್ಯ ಸಾಮರ್ಥ್ಯ! ನಕ್ಷತ್ರಗಳನ್ನೆ ನಿರಸ್ತಗೊಳಿಸಿವೆಯಲ್ಲ!

ಕತ್ತಲನ್ನು ಭೇದಿಸಿ ಮನಸು ದೂರ ದೂರ ತೇಲಿ ಹೋಗತೊಡಗಿತು. ಮೇರೆಯಿಲ್ಲದ ನೆನಪಿನ ಸಾಗರದಲ್ಲಿ ಅಂತಃಕರಣ ಏಳುತಿದೆ, ಬೀಳುತಿದೆ; ದಿಕ್ಕಿಲ್ಲದ ಹರಿಗೋಲಿನಂತೆ. ಸುತ್ತಲೂ ಕೋಟಿ ಕೋಟಿ ತೆರೆಗಳ ಹೊಯ್ದಾಟ... ಮನಃಪಟಲದಲ್ಲಿ ಒಂದು ಚಿತ್ರಮಾಲೆ ಒಡಮೂಡಿತು.

ಹಳ್ಳಿಯ ಪುಷ್ಕರಿಣಿ. ತೀರದಲ್ಲಿ ತೆಂಗು, ಕಂಗು, ಮಾವು, ಹಲಸು, ಜಂಬು ಗಿಡಗಳ ತೋಟ. ನಾಲ್ಕೂ ಕಡೆ ಹಚ್ಚಹಸುರಿನ ಸಿರಿ. ಸೂರ್ಯ ಅಸ್ತಂಗತ ನಾಗುತ್ತಿದ್ದಾನೆ. ಎಲ್ಲೋ ಮೈ ಮರೆಸಿಕೊಂಡು ಕೋಗಿಲೆಯೊಂದು ಕುಹೂ ಎಂದು ಕರೆಯುತಿದೆ. ಹಲ್ಲಿಯೊಂದು ಸರಸರನೆ ಸರಿದು ತರಗೆಲೆಗಳನ್ನು ಬೆಚ್ಚಿಸಿದೆ...

ಇನ್ನೊಂದು ದಡದಲ್ಲಿ ಒಂದು ಹಳೆಯ ದೇಗುಲ, ಪ್ರಾಚೀನ ಶಿವ ಮಂದಿರ. ಅಲ್ಲಿನ ಧೂಪಧೂಮದ ಸುಗಂಧದಿಂದ ಗಾಳಿ ಭಾರ ಭಾರವಾಗಿ ಸುಳಿಯುತ್ತಿದೆ. ಶಂಖಘಂಟೆಗಳ ನಿಃಸ್ವನದಿಂದ ದಶದಿಕ್ಕುಗಳೂ ಗಡಚಿಕ್ಕಿವೆ.

ಕೆರೆಯ ಪಾವಟಿಗೆಗಳಲ್ಲಿ ಸ್ನಾನಾಪೇಕ್ಷಿಗಳ ತಂಡ. ಹಗಲೆಲ್ಲ ಉಪವಾಸ ದಿಂದ ಕಳೆದ ತಾಯಂದಿರ ಗಡಣ, ಶಿವಪೂಜೆಗಾಗಿ ಬಂದು ಕೂಡಿದೆ ಅವರ ಏಕಮಾತ್ರ ಕಾಮನೆಯೆಂದರೆ ತಮ್ಮ ಸಂತಾನದ ಉತ್ತರೋತ್ತರ.

ಪ್ರತಿಯೊಬ್ಬ ಮಾತೆಯ ಮುಖದಲ್ಲಿ, ಅಂತರಂಗದಲ್ಲಿ, ಕಣ್ಣಲ್ಲಿ, ಕಾಯದಲ್ಲಿ, ಆಚಾರದಲ್ಲಿ, ವ್ಯವಹಾರದಲ್ಲಿ ಒಂದೇ ಒಂದು ಭಾವನೆ ಒಡ ಮೂಡಿದೆ! ತನ್ನ ಮಕ್ಕಳಿಗೆ ಯಾವೊಂದು ಅನಿಷ್ಟವೂ ಒದಗದಿರಲಿ. "ಹೇ ದೇವಾ, ಹೇ ಶಂಕರಾ, ಪ್ರಭೋ ನಮ್ಮ ಮಕ್ಕಳನ್ನು ಸುಖವಾಗಿರಿಸು."

ಎಣಿಸಿದೆ, ಈ ತಾಯಂದಿರೇ ಪ್ರಯೋಜನ ದೊರೆಯುವಂತಿದ್ದರೆ ಮಕ್ಕಳನ್ನು ಕೊಲೆಮಾಡುವದಕ್ಕೂ ಸಿದ್ಧರಾಗುತ್ತಾರೆ. ಲೋಕದಲ್ಲಿ ಪ್ರಯೋಜನಾ ಪೇಕ್ಷೆಯಿಂದ ಜನರು ಶಿವಪೂಜೆಯನ್ನು ಮಾಡುವರು, ಶಿಶುಹತ್ಯೆಯನ್ನೂ ಮಾಡುವರು. ವಿಚಾರಿಸಿದರೆ, ಪ್ರಯೋಜನದ ಒತ್ತಾಸೆಗಿಂತ ಬಲವತ್ತರವಾದ ಒತ್ತಾಸೆ ಜಗತ್ತಿನಲ್ಲಿಯೇ ಇಲ್ಲ ದಯಾ, ಮಾಯೆ, ನೀತಿ, ವಿವೇಕ ಇವೆಲ್ಲವನ್ನು ನುಚ್ಚುನುರಿ ಮಾಡಿ ಪ್ರಯೋಜನವೆಂಬ ಕಬ್ಬಿಣದ ರೋಲರು ಜಗತ್ತಿನ ರಾಜಮಾರ್ಗದಲ್ಲಿ ನಿರ್ದಯದಿಂದ ಗುಡುಗುತ್ತ ಉರುಳುವದು. ಇದರ ಪ್ರೇರಣೆಯಿಂದ ತಾಯಿಯೂ ಕೂಸಿನ ಕತ್ತು ಹಿಸುಕುವಳು. ಗಂಡನೂ ಹೆಂಡತಿಯನ್ನು ಮಂದಿಗೆ–

"ಕೊಡು ನನ್ನ ಹಗ್ಗ!"

ಬೆಚ್ಚಿಬಿದ್ದು ಕಣ್ಣೆತ್ತಿ ನೋಡಿದೆ. ಕಣ್ಣು ಪಿಳುಕಿಸದೆ ನನ್ನನ್ನೆ ದಿಟ್ಟಿಸುತ್ತ ಮುದುಕಿಯೊಬ್ಬಳು ಬರುತ್ತಿದ್ದಳು. ಅವಳ ಮುಖದಲ್ಲಿ ನೂರಾರು ನಿರಿ ಚರ್ಮ ಜೋತುಬಿದ್ದಿದೆ. ವೃದ್ಧಾಪ್ಯದಿಂದ ತಲೆ ನಲುಗುತ್ತಿದೆ. ತಲೆಗೂದಲೆಲ್ಲ ಬಿಳಿ, ಅಲ್ಲ

ಹಳದಿ, ಕಾಂತಿಹೀನ ದೃಷ್ಟಿಗಳನ್ನು ನನ್ನ ಮುಖದಲ್ಲಿ ನಟ್ಟು ಮುದುಕಿ ಮುಂದು ವರಿಸಿದಳು:

"ತಿರುಗಿ ಕೊಡು ನನ್ನ ಹಗ್ಗ... ಹೂಂ, ಏನು ನೋಡುತ್ತಿ. ಯಾಕೆ ಬಿಚ್ಚಿದಿ ನನ್ನ ಕೊರಳಿನ ಉರುಲು? ಎಲ್ಲಿಟ್ಟಿದ್ದೀ ಅದನ್ನ? ಕೊಡಪ್ಪಾ ಮಗು. ಇನ್ನೊಮ್ಮೆ ಉರುಲು ಹಾಕಿಕೊಳ್ಳುವೆ. ಖಂಡಿತ ನಾನಿನ್ನೂ ಪೂರ್ತಿ ಸತ್ತಿಲ್ಲ. ನನಗೆ ಎಲ್ಲ ನೆನಪಿಗೆ ಬರುತ್ತೆ."

ಹೀಗೆಂದು ಮುದುಕಿ ವಿಹ್ವಲ ನೇತ್ರಗಳಿಂದ ನೋಡಹತ್ತಿದಳು.

"ನಾನು ಸತ್ತಿಲ್ಲ. ಯಾರು ಹೇಳುತ್ತಾರೆ ನಾ ಸತ್ತಿದ್ದೇನಂತ? ಇಲ್ಲ ಖಂಡಿತ ನಾನಿನ್ನೂ ಬದುಕಿದ್ದೇನೆ. ನನ್ನ ಕೈ ಹಿಡಿದು ನಾಡಿ ನೋಡಪ್ಪಾ ಡಾಕ್ಟರ್! ನಾನಿನ್ನೂ ಬದುಕಿರುವ ಹಾಗೆ ಕಾಣುತ್ತೆ. ಇಲ್ಲದಿದ್ದರೆ ಯಾಕೆ ನೆನಪಾಗುತ್ತದೆ ಅದೆಲ್ಲ? ನೋಡು ಮಗ–"

ಮುದುಕಿ ಎರಡೂ ಕೈಗಳನ್ನು ಮುಂದೆ ಚಾಚಿದಳು.

"ಕೊಡಪ್ಪಾ ನನ್ನ ಹಗ್ಗ, ನಾನಿನ್ನೂ ಬದುಕಿದ್ದೇನೆ. ಏನೂ ಸಂಶಯವಿಲ್ಲ. ಇಲ್ಲ, ನಾನಿನ್ನು ಬದುಕಿರಲಾರೆ, ಒಲ್ಲೆನೋ ಒಲ್ಲೆ. ನೀನೇ ಒಮ್ಮೆ ನನ್ನನ್ನು ಸರಿಯಾಗಿ ಕೊಂದುಹಾಕಿಬಿಡಣ್ಣಾ. ನಿನಗೆ ಪುಣ್ಯ ಬರುತ್ತೆ!"

"ನೀನು ಸತ್ತಿದ್ದೀ, ಅಜ್ಜಿ. ಒಂದು ತಿಂಗಳಾಗಿದ್ದೀತು."

"ಸುಳ್ಳು, ಕೇವಲ ಸುಳ್ಳು. ಒಂದು ತಿಂಗಳ ಹಿಂದೆ ನಾನು ಉರುಲು ಹಾಕಿಕೊಂಡಿದ್ದು ನಿಜ. ಆದರೆ ಸಾವು ಬರಲಿಲ್ಲ. ಮೊದಲಿನ ಹಾಗೆಯೆ ಎಲ್ಲ ನೆನಪಿಗೆ ಬರುತ್ತೆ. ನನ್ನ ಕೊರಳಿನ ಉರುಲು ಬಿಚ್ಚಿ ಅನ್ಯಾಯ ಮಾಡಿದಿ ನೀನು."

ನಾನು ಮಾತಾಡಲಿಲ್ಲ.

ಹುಬ್ಬು ಗಂಟಿಕ್ಕಿ ಮುದುಕಿ ಕಿರಿಚಿದಳು, "ಬಿಚ್ಚಲಿಲ್ಲಾ ನೀನು?"

"ಬಿಚ್ಚಿದ್ದೆ. ಆದರೆ ನೀನು ಮೊದಲೇ ಸತ್ತು ಹೋಗಿದ್ದಿ."

"ಮತ್ಯಾಕೆ ನನಗೆ ಮುಂಚಿನದೆಲ್ಲ ನೆನಪಿಗೆ ಬರುತ್ತದೆ ಇನ್ನೂ?"

"ಏನು ನೆನಪಿಗೆ ಬರುತ್ತದೆ?"

"ಅಬ್ಬಾ, ಅದನ್ನ ಹೇಳಲಿಕ್ಕೆ ಹೋದರೆ ಮರ್ಮ ಸುಡುತ್ತೆ. ಫಟ್ ಫಟ್ ಅಂತ ನನ್ನ ಮುಖದ ಮೇಲೆ ಮಚ್ಚೆಯಿಂದ ಹೊಡೆದು ಬಿಟ್ಟ. ಕೂದಲು ಹಿಡಿದು

ಎಳೆದು ಕೆಡವಿ ಹೊಟ್ಟೆಗೆ ಒದ್ದೇ ಒದ್ದ. ಅವನ ಲತ್ತೆ ತಿಂದು ನೋಡು, ನನ್ನ ಪಕ್ಕೆಲುಬೇ ಮುರಿದು ಹೋಯಿತು. ನೋಡಿಲ್ಲಿ ಬೇಕಾದರೆ."

ಅಂದು ನಾನು ಸಿಗಿದ ಪಕ್ಕೆಲುಬನ್ನು ಪರೀಕ್ಷಿಸಿದ ಸ್ಥಳವನ್ನೇ ಅವಳು ತೋರಿಸಿದಳು.

"ನಾನು ಇನ್ನೊಮ್ಮೆ ಸಾಯುವೆ. ಸತ್ಯ ಹೇಳುತ್ತೇನೆ, ನನಗೆ ಇನ್ನೊಮ್ಮೆ ಸಾಯಲೇ ಬೇಕಾಗಿದೆ. ನಿನ್ನ ಕಾಲಿಗೆ ಬೀಳುತ್ತೇನೆ. ಡಾಕ್ಟರಪ್ಪಾ, ನನ್ನನ್ನ ಹೇಗಾದರೂ ಮಾಡಿ ಪೂರ್ಣ ಕೊಂದು ಕೊಡುತ್ತೀಯಾ?"

ಅವಳ ಕಪೋಲವನ್ನು ತೊಳೆದು ಕಣ್ಣೀರು ಧಾರೆಗಟ್ಟಿತು.

"ಮನುಷ್ಯನಿಗೆ ಎಲ್ಲರಿಗಿಂತ ದೊಡ್ಡ ಶತ್ರು ಯಾರಂತ ಮಾಡಿದ್ದಿ? ತನ್ನ ಹೊಟ್ಟೆಯ ಮಗ. ಅಷ್ಟು ದೊಡ್ಡ ಶತ್ರು ಬೇರೆ ನಾ ಕಾಣೆ. ಅದರಲ್ಲಿಯೂ ಅವ ನನ್ನಂಥ ವಿಧವೆಯ ಒಬ್ಬನೇ ಮಗನಾಗಿದ್ದರಂತೂ ತೀರಿಯೆ ಹೋಯಿತು. ಶತ್ರು, ಶತ್ರು–ಪರಮ ಶತ್ರು, ಹೊಟ್ಟೆಯಲ್ಲಿದ್ದಷ್ಟು ದಿನ ನನ್ನ ರಕ್ತವನ್ನೆ ಹೀರಿದ. ಭೂಮಿಗೆ ಬಂದಮೇಲೂ ಹೀರುವುದು ಬಿಡಲಿಲ್ಲ. ಭುಜಭುಜನೆ ನೂರು ಮುಖಗಳಿಂದ ನನ್ನ ನೆತ್ತರು ಹೀರಿದ. ಮೈಯ ನೆತ್ತರಿಂದ ತಾನೆ ಮೊಲೆ ಹಾಲು ಹುಟ್ಟುತ್ತೆ? ಈ ಹಾಲನ್ನ ಅವ ಎಂಟು ವರ್ಷ ಕುಡಿದಿದ್ದಾನೆ. ಕೇಳಿದ್ದೀಯಾ ಎಲ್ಲಾದರೂ–ಎಂಟು ವರ್ಷದ ಹುಡುಗ ಮೊಲೆ ತಿಂಬುವದನ್ನ? ಎಷ್ಟೆಷ್ಟು ದೈವದೇವರಿಗೆ ಅಡ್ಡ ಬಿದ್ದು, ಎಷ್ಟು ವ್ರತಪೂಜೆ ಮಾಡಿ, ಈ ಹುಡುಗನ್ನ ಮನುಷ್ಯ ಅಂತ ಮಾಡಿದ್ದೆ! ಒಂದೆ ಒಂದು ವ್ರತ ಬಿಟ್ಟಿಲ್ಲ. ಉಪವಾಸ ಮಾಡಿ ಮಾಡಿ ನನ್ನ ಮೈ ಒಣಗಿ ಕಡ್ಡಿಯಾಗಿ ಹೋಯಿತು!"

ಕ್ಷಣಮಾತ್ರದಲ್ಲಿ ಪುನಃ ಆ ಕೆರೆದಂಡೆಯ ಚಿತ್ರ ಕಣ್ಮುಂದೆ ಬಂದು ನಿಂತಿತು. ಏನು ನೋಡುವದು! ಹಚ್ಚ ಹಸುರಿನ ಮರಗಿಡಗಳಿಗೆ ಬೆಂಕಿ ಹತ್ತಿದೆ ಮುಗಿಲು ಮುಟ್ಟುವ ಉರಿನಾಲಗೆಗಳಿಂದ ಅಗ್ನಿ ನಾರಾಯಣ ಧಗಧಗಿಸುತ್ತಿದ್ದಾನೆ. ಸಂಜೆಯ ಸೂರ್ಯನಲ್ಲ, ಈಗ ಆ ದೀಪ್ತಿಯಲ್ಲಿ, ಅವನೊಂದು ದೊಡ್ಡ ಕೆಂಡವಾಗಿ ಬಿಟ್ಟಿದ್ದಾನೆ. ಕೋಗಿಲೆ ಕಣ್ಣು ಪಿಳಿಕಿಸುವಷ್ಟರಲ್ಲಿ ಹದ್ದಿನ ರೂಪ ತಾಳಿದೆ. ಕೆರೆ ನೆತ್ತರಿನ ಕೆರೆಯಾಗಿದೆ. ಅದರೊಳಗಿಂದ ನೂರಾರು ಆಸೆಬುರುಕ ಮೊಸಳೆಗಳು ಮೇಲೆ ಬಂದು ತಾಯಂದಿರನ್ನು ಒಂದೊಂದಾಗಿ ಸೆಳೆದೊಯ್ದು ಕಬಳಿಸಿವೆ. ತಾಯಂದಿರ ಆರ್ತನಾದದಿಂದ ದಿಗ್ದೇಶಗಳು ಗಡಚಿಕ್ಕಿವೆ. ಮುರುಕು ಶಿವಮಂದಿರ ದಲ್ಲೀಗ ಶಿವನಿಲ್ಲ, ವಿಕಟ ರಾಕ್ಷಸ. ತಾಯಂದಿರ ದುರವಸ್ಥೆಯನ್ನು ನೋಡಿ ಅವನು ಖೋ–ಖೋ ಎಂದು ಅಟ್ಟಹಾಸಮಾಡುತ್ತಿದ್ದಾನೆ.

"ಒಬ್ಬನೇ ಮಗ ನನಗೆ", ಮುದುಕಿ ಹೇಳಿದಳು. ಎಷ್ಟು ಕಷ್ಟ ಪಟ್ಟು ಸಾಕಿ ದೊಡ್ಡದು ಮಾಡಿದ್ದೆ! ಏನು ಕೇಳಿದರೂ ಇಲ್ಲೆಂದಿಲ್ಲ. ಅವನ ಬಯಕೆ ತೀರಿಸಲಿಕ್ಕೆ ನನ್ನ ಸರ್ವಸ್ವವೂ ಹೋಯಿತು. ಎಲ್ಲಾದರೂ ಕೇಳಿದ್ದೀಯಾ, ಹದಿಮೂರು ವರ್ಷದ ಹುಡುಗ ಮುಂಗೈಗೆ ಬೆಳ್ಳಿ ಗಡಿಯಾರ ಕಟ್ಟಿಕೊಂಡು ಸಾಲೆಗೆ ಹೋಗುವದನ್ನ? ಒಮ್ಮೆಯಾದರೂ ಪಾಸಾಗದಿದ್ದ ಹುಡುಗನಿಗೆ ಸಾಲೆಗೆ ಹೋಗಲಿಕ್ಕೆ ದಿನಕ್ಕೊಂದು ಪೋಷಾಕು ಬೇಕಾಗುವದನ್ನು? ಎಷ್ಟು ಬಣ್ಣದ ಎಷ್ಟು ಬಗೆಯ ಪಂಜಾಬಿ ಅಂಗಿ ಹೊಲಿಸಿಕೊಟ್ಟಿದ್ದೆ! ಕಾಲಿಗೆ ಎಂಥೆಂಥ ಜೋಡು, ಎಂಥೆಂಥ ಕೈಕೋಲು! ಹಳ್ಳೀ ಸಾಲೆಗೆ ಹೋಗಲಿಕ್ಕೆ ಅವನಿಗೆ ಮರ್ಯಾದೆ ಸಾಕಾಗಲಿಲ್ಲ, ಪಟ್ಟಣಕ್ಕೆ ಹೋದ. ಎಷ್ಟು ಪ್ರಯಾಸ ಪಟ್ಟು ಅವನ ಖರ್ಚು ಸಹಿಸಿದೆ! ನನ್ನ ಕಷ್ಟ ನಿನಗೆ ತಿಳಿಯದು. ಡಾಕ್ಟರಪ್ಪಾ, ತಾಯಿಯ ಹೊಟ್ಟೆ ಸಂಕಟ ನಿನಗೆ ತಿಳಿಯಲಿಕ್ಕೆ ಸಾಧ್ಯವೇ ಇಲ್ಲ. ಹೊಟ್ಟೆಯ ಮಗು ಸೆರೆ ಕುಡಿದು ಅಮಲೇರಿ ಮನೆಗೆ ಬಂದು ತಾಯಿಯನ್ನ ಮಚ್ಚೆಯಲ್ಲಿ ಹೊಡೆದರೆ ತಾಯಿಯ ಮನಸು ಹೇಗಾದೀತು, ಇದನ್ನು ಊಹಿಸುವ ಯೋಗ್ಯತೆ ನಿಮಗಿಲ್ಲ. ಅದು ನಿಮಗಿಲ್ಲ. ಅದು ನಿಮಗೆ ತಿಳಿಯಲಿಕ್ಕೆ ಸಾಧ್ಯವೇ ಇಲ್ಲ. ಹೋಗಲಿ, ನನ್ನ ಹಗ್ಗ ನನಗೆ ಕೊಟ್ಟು ಬಿಡು"

ಯಾರಿಗೆ ಕೊಡಲಿ ಹಗ್ಗ?

ಮುದುಕಿ ಅಲ್ಲಿರಲಿಲ್ಲ.

ಕಿಡಿಕಿಯಿಂದ ಹೊರ ನೋಡಿದೆ. ಎತ್ತೆತ್ತಲೂ ಮೋಡ ಮುಸುಕಿದೆ. ಎಲ್ಲೋ ಒಂದು ಬದಿಯಲ್ಲಿ ಒಂದಿಷ್ಟು ಆಕಾಶ ಶುಭ್ರವಾಗಿ ಉಳಿದಿದೆ. ಅಲ್ಲಿ ಒಂದು ನಕ್ಷತ್ರ ಚಕಚಕ ಮಿನುಗುತಿತ್ತು. ವಿಶಾಲ ಸಮುದ್ರದ ನಡುವೆ ಒಂದು ಕ್ಷುದ್ರ ದ್ವೀಪದಲ್ಲಿ ಒಂಟಿ ದೀವಿಗೆ ಉರಿಯುವಂತೆ. ಯಾವ ಪಥಿಕನಿಗೆ ತೋರುತಿರಬಹುದು ಅದು? ಈ ಮೋಡಗಳ ಸಮುದ್ರದಲ್ಲಿ ಯಾವ ಪಥಿಕ ಇದ್ದಾನು? ಇದ್ದರೂ ಅವನಿಗೆ ದಾರಿ ತಪ್ಪೀತೆ! ತಪ್ಪಿದ್ದರೂ ಈ ಮಂದ ನಕ್ಷತ್ರ ಪ್ರಕಾಶದಲ್ಲಿ ತಪ್ಪಿಹೋದ ದಾರಿ ಅವನಿಗೆ ಸಿಕ್ಕುವ ಸಂಭವವುಂಟೆ? ತಾರೆಯ ಬೆಳಕಿನಲ್ಲಿಯೂ ದಾರಿತಪ್ಪ ಬಾರದೇಕೆ?

ಆದರೂ ಎಷ್ಟು ಸುಂದರ, ಎಷ್ಟು ಉಜ್ವಲ ಈ ನಕ್ಷತ್ರ! ಆರ್ದ್ರಾ ನಕ್ಷತ್ರ ವಿರಬಹುದೆ? ಹೆಪ್ಪು ಗಟ್ಟಿದ ಈ ಕತ್ತಲ ನಡುವೆ ಈ ಏಕಾಕಿ ನಕ್ಷತ್ರವನ್ನು ಕಂಡು ತುಸು ಧೈರ್ಯ ಬರುತ್ತದೆ. ಎಲ್ಲವೂ ಕಗ್ಗನ ಕತ್ತಲೆಯಲ್ಲ, ಬೆಳಕೂ ಇದೆಯಲ್ಲ, ಎನಿಸುತ್ತದೆ. ಮನಸಿನಲ್ಲಿ ಒಂದಿಷ್ಟು ಆಸೆ ಮೂಡುತ್ತದೆ.... ನೋಡುನೋಡುತ್ತ

ತೆರವಾಗಿದ್ದ ಆ ಆಕಾಶ ಖಂಡವನ್ನೂ ಮೋಡಗಳು ಮುತ್ತಿದ್ದವು. ನಕ್ಷತ್ರ ಅಡಗಿ ಹೋಯಿತು. ಮೇಘಗಳ ಗುಡುಗುಡು ನಿನಾದಕ್ಕೆ ಅಂಧಾಕಾರದ ಮೈ ಜುಮ್ಮೆಂದಿತು... ವಿಚಾರಿಸತೊಡಗಿದೆ. ಆಕಾಶವನ್ನು ಸೃಜಿಸಿದವನೇ ಮೋಡವನ್ನೂ ಸೃಷ್ಟಿಸಿರಬಹುದೇ? ಬೆಳಕು ಕತ್ತಲೆ ಇವೆರಡೂ ಒಬ್ಬನೆ ಕವಿಯ ಕವಿತೆಗಳೆ? ಒಬ್ಬನದೇ ಸೃಷ್ಟಿಯೆ ಪಾಪ ಮತ್ತು ಪುಣ್ಯ; ಸತ್ಯ ಮತ್ತು ಮಿಥ್ಯೆ?

"ಸತ್ಯಮಿಥ್ಯೆಗಳ ಸೃಷ್ಟಿ ಕರ್ತರು ನಾವೇ. ಸತ್ತ ಮೇಲೆ ನನಗಿದು ತಿಳಿಯಿತು. ನನಗೆ ತುಸು ನೀರು ಕೊಡುವಿರಾ? ಉರಿ, ಭಾರೀ ಉರಿ! ಬೆಂಕಿ ಇನ್ನೂ ಆರಿಲ್ಲವೋ ಏನೋ.."

**ಎದುರಿಗೆ ಬತ್ತಲೆ ಹೆಂಗಸೊಬ್ಬಳು ನಿಂತಿದ್ದಳು. ಮೈ (ಅರ್ಧ ಮರ್ಧ) ಸುಟ್ಟು ಬೆಂದು ಹೋಗಿತ್ತು. ಅವಳ ಥರಥರ ನಡುಗುತ್ತಿದ್ದಳು. ಅವಳ ಹೊಟ್ಟೆ, ಎದೆ ಮತ್ತು ಕಾಲುಗಳು ಅಲ್ಲಲ್ಲಿ ಬೆಂದು ಹೋಗಿದ್ದವು. ಹೊಟ್ಟೆ ಮತ್ತು ಎದೆಯಲ್ಲಿ ಕೆಲವಡೆ ಚರ್ಮ ಸುಲಿದುಹೋಗಿ ಕೆಂಪು ನೆಣ ಹೊರ ಬಿದ್ದಿತ್ತು. ಮೈ ತುಂಬ ದೊಡ್ಡ ಬೊಕ್ಕೆಗಳು.**

ಇಷ್ಟು ಕ್ಲೇಶದ ಮಧ್ಯದಲ್ಲಿಯೂ ಆಕೆ ನಗುತ್ತಿದ್ದಳು. ಕೆದರಿ ಬಿದ್ದು ಬೆನ್ನೆಲ್ಲಾ ಮುಚ್ಚಿದ ತಲೆಗೂದಲು. ಸಾದುಗಪ್ಪು ಮುಖದಲ್ಲಿ ಕಣ್ಣುಗಳು ವೇದನಾತುರ ವಾಗಿದ್ದವು, ಆದರೂ ಮಿಂಚುತ್ತಿದ್ದವು.

"ನೀರು ಕೊಡುವುದಿಲ್ಲ ಒಂದಿಷ್ಟು? ಇನ್ನೂ ಉರಿ ತಗ್ಗಿಲ್ಲ. ಊಃ., ಭಾರೀ ದಾಹ! ಸತ್ತು ಹೋಗಿದ್ದೇನೆ. ಆದರೂ ಉರಿಕಡಿಮೆಯಾಗಲೊಲ್ಲದು ಯಾಕೆ ಹೇಳಿರಿ?"

ಅಳುತಳುತಲೆ ಅವಳು ನಗುತಿದ್ದಳು. ಅಳುನಗು ಅವಳ ಮುಖದಲ್ಲಿ ಮುಗಿಲು ಬಿಸಿಲುಗಳಂತೆ. ಒಂದರ ಹಿಂದೊಂದು ಮೂಡಿಮಾಯವಾಗುತಿದ್ದವು. ಬಣ್ಣ ಕಪ್ಪು. ಆದರೂ ಅವಳ ಮುಖ ಎಷ್ಟು ಲಕ್ಷಣ! ತಟ್ಟನೆ ನೆನಪಾಯಿತು. ಇವಳೆ ಇರಬಹುದೇ ಕವಿ ಹೇಳುತಿದ್ದ–

ಅವಳೇ ಕೇಳಿದಳು, "ಏನು ಎಣಿಸುತಿದ್ದೀರಿ ಹೇಳಲಾ?"

"ಏನು?"

"ಆ ಕವಿಯ ಮಾತು, ಹೌದೋ ಅಲ್ಲೊ? ಅವ ಬಂದಿದ್ದ ಅಂತ ತೋರುತ್ತದೆ ನಿಮ್ಮ ಹತ್ತಿರ! ಪಾಪ, ಅವನ ಕತೆಯೆಲ್ಲ ನಂಬಿದಿರಿ ಎಂದು ಕಾಣುತ್ತದೆ? ಕವಿತೆ ಅಂದನಲ್ಲ ನಿಮ್ಮ ಮುಂದೆ? ಚಲೋ ಕವಿತೆ ಅಲ್ಲಾ?"

ಅವಳು ಕಾತುರ ತುಂಬಿದ ಕಣ್ಣೀರುಕ್ಕುವ ತನ್ನೆರಡು ಕಣ್ಣುಗಳನ್ನೂ ನನ್ನ ಮುಖದಲ್ಲಿ ನಟ್ಟು ಕೆಲಕಾಲ ಮೌನವಾಗಿದ್ದಳು.

"ಪಾಪ, ಒಳಗಿನ ಮಾತು ಅವನಿಗೆ ಗೊತ್ತಿದ್ದರೆ! ಅವನ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಲು ಒಮ್ಮೆಯೂ ಪ್ರಯತ್ನಿಸಿಲ್ಲ ನಾನು. ನನ್ನ ಸ್ವಂತದ ಸ್ವಾರ್ಥವೊಂದಿತ್ತಲ್ಲ! ಈಗ ನೋಡಲಿಕ್ಕೆ ಸಿಕ್ಕಿದ್ದರೆ ಭ್ರಮ ನಿರಸನ ಮಾಡಿಬಿಡುತ್ತಿದ್ದೆ. ಇನ್ನೊಮ್ಮೆ ಬಂದರೆ ಅವನ ತಪ್ಪು ಕಲ್ಪನೆ ತಿದ್ದುವಿರಾ?"

"ಏನು ತಪ್ಪು ಕಲ್ಪನೆ?"

"ನಾನು ಅರೆಗಳಿಗೆ ಕೂಡ ಅತನನ್ನು ಪ್ರೇಮಿಸಿರಲಿಲ್ಲ. ಈ ಕವಿತೆ ಗಿವಿತೆ ನನಗೆ ಹಿಡಿಸುವದಿಲ್ಲ, ನೋಡಿರಿ. ಅಂದೊಂದು ಮರುಳು ಅಂತ ನನ್ನ ತಿಳಿವಳಿಕೆ. ನನಗೆ ಅರ್ಥವಾಗದ್ದರಿಂದ ಇರಬಹುದು. ಅಂದಾಕ್ಷಣ ನಾನು ಗಂಡನನ್ನೇ ಪ್ರೀತಿಸುತ್ತಿದ್ದೆ ಅಂತ ಮಾತ್ರ ತಿಳಿಯಬೇಡಿರಿ. ಗಂಡನನ್ನು ಕುಡಿಗಣ್ಣಲ್ಲಿ ಕಂಡರೆ ಆಗುತ್ತಿದ್ದಿಲ್ಲ ನನಗೆ. ದಷ್ಟಪುಷ್ಟ ಮನುಷ್ಯನಲ್ಲ ನನ್ನ ಗಂಡ. ಅವನ ಮೈ ಬಡಕಲು. ಮನ ಅದಕ್ಕಿಂತಲೂ ಬಡಕಲು. ಅವನ ಶರೀರದಲ್ಲಾಗಲಿ ಮನದಲ್ಲಾಗಲಿ ಒಂದಿಷ್ಟು ಹುಮ್ಮಸು ಕೂಡಿದ ದಿನವನ್ನ ನಾನಂತೂ ಕಂಡಿಲ್ಲ. ಅವನೊಬ್ಬ ಶಕ್ತ ಸಮರ್ಥ ಬರ್ಬರ ಕಿರಾತನಾಗಿದ್ದರೂ ನಾನೆಷ್ಟೋ ನೆಮ್ಮದಿಯಿಂದ ಇರುತ್ತಿದ್ದೆ. ಅವನ ಎಂ.ಎ. ಡಿಗ್ರಿ ತೆಗೆದುಕೊಂಡು ನಾನೇನು ಸುಡಲಿ? ಇಲ್ಲ, ಎಂ.ಎ. ಪಾಸುಮಾಡಿದ ಪ್ರೊಫೆಸರ್ ಗಂಡ ನನಗೆ ಎಳ್ಳಷ್ಟು ಮನಸಿಗೆ ಬರಲಿಲ್ಲ. ನನ್ನದೊಂದು ಕತೆ ಕೇಳುತ್ತೀರಾ? ಕತೆಯಲ್ಲ ಸತ್ಯ ವೃತ್ತಾಂತ. ಬದುಕಿದ್ದಾಗ ಸ್ವತಃ ನನ್ನೊಳಗೇ ಆ ಮಾತು ಒಪ್ಪಿಕೊಳ್ಳಲಿಕ್ಕೂ ನಾಚಿಕೆಯಾಗುತಿತ್ತು. ಇನ್ನೆಲ್ಲಿಯ ನಾಚಿಕೆ, ಏತರ ಭಯ?"

ಅವಳು ಗುಟ್ಟು ಹೇಳುವವಳಂತೆ ಇನ್ನಷ್ಟು ಸಮೀಪ ಬಂದಳು.

"ನಮ್ಮ ನೆರೆಮನೆಯಲ್ಲಿ ಒಬ್ಬ ಚಿಲ್ಲರೆ ಮನುಷ್ಯ ಇರುತ್ತಿದ್ದ- ಚಿಲ್ಲರೆ ಮನುಷ್ಯ ಅಂದರೆ ಬಡವ ಅನ್ನಿರಿ. ನಮ್ಮ ಕಿಟಕಿಯ ಮುಂದೆ ನಿಂತರೆ ಅವನ ಮನೆಯ ಅಂಗಳ ಕಾಣುತ್ತಿತ್ತು. ಎಂಥ ದೈತ್ಯ ಅಂತೀರಿ ಆತ. ಗುಂಗುರು ಕೂದಲು, ಹುರಿಮೀಸೆ, ಅಡವಿಯಂಥ ಗಡ್ಡ! ಸಾಕ್ಷಾತ್ ಯಮದೂತ. ಆತ ದಿನಾ ಮನೆಗೆ ಬರಬೇಕು, ಹೆಂಡತಿಯ ಕೂದಲು ಹಿಡಿದು ಜಗ್ಗಿ ಕೆಡವಿ ಗುದ್ದಬೇಕು. ಹೆಂಡತಿಯ ಕೂಗಾಟ, ಚೀರಾಟಕ್ಕೆ ಎಣೆಯಿಲ್ಲ. ಆದರೆ ಒಂದೊಂದು ಸಲ ಅದೇ ಮನುಷ್ಯ ತನ್ನ ಹೆಂಡತಿಯನ್ನ ಓಲೈಸುವದನ್ನೂ ನೋಡಿದ್ದೇನೆ. ಅಂಥ ಆಜಸ್ರ ಆದರವನ್ನು ಯಾರೂ ಯಾರ ಮೇಲೂ

ಎಲ್ಲಿಯೂ ಸುರಿಸುವದನ್ನು ನಾ ಕಂಡಿಲ್ಲ. ಯಾವ ಪುರುಷನೂ ಯಾವ ಸ್ತ್ರೀಯ ಮೇಲಾದರೂ ಇಷ್ಟು ಮಮತೆ ತೋರಬಹುದೆಂದು ನಾನು ಕನಸಿನಲ್ಲಿಯೂ ನೆನಸಿರಲಿಲ್ಲ. ಸತ್ಯ ಹೇಳುವೆ, ಆ ಹೆಂಗಸನ್ನು ನೋಡಿ ಒಮ್ಮೊಮ್ಮೆ ನನಗೆ ಅಸೂಯೆಯಾಗುತ್ತಿತ್ತು!.... ಆಹಾಹಾ, ಎಂಥ ಸುಂದರ ಪತಂಗ! ಪಾಪ, ಸುಟ್ಟು ಬೂದಿಯಾಯಿತು ನೋಡಿರಿ!"

ನೋಡಿದೆ, ಅದೇ ಬಣ್ಣ ಬಣ್ಣದ ಪತಂಗ ದೀಪದಲ್ಲಿ ಬಿದ್ದು ನಿಜವಾಗಿ ಸುಟ್ಟು ಹೋಗಿತ್ತು. ಒಂದು ರೆಕ್ಕೆ ಸುಟ್ಟು ಹೋಗಿ ಚಡಪಡಿಸುತಿತ್ತು ಪಾಪ! ಅದು ದೀಪವನ್ನು ಕುರಿತು ಹೀಗೆ ಹೇಳುತಿರುವಂತೆ ನನಗೆ ಭಾಸವಾಯಿತು. "ನಿನ್ನನ್ನು ಎಷ್ಟು ಹೀನಳೆಂದು ಬಗೆದಿದ್ದೆನೋ ಅಷ್ಟು ಹೀನಳಲ್ಲ ನೀನು! ನೀನು ಬಂದಿನಿ, ಆದರೂ ಸುಂದರಿ!"

ಪತಂಗ ಸುಟ್ಟು ನಿಶ್ಶೇಷವಾಯಿತು. ಒಂದು ವಿಕಟ ಗಂಧ ಕೋಣೆಯನ್ನೆಲ್ಲ ಇಡುಗಿತು. ದೀಪದ ಕುಡಿಯನ್ನು ನೋಡಿದರೆ ಅದು ನಗುತ್ತಿತ್ತು.

ಜಗತ್ತಿನ ಎಲ್ಲ ನಿಸ್ತಬ್ಧತೆಯೂ ನನ್ನ ಕೋಣೆಯಲ್ಲೆ ಕೂಡಿಬಿದ್ದಂತಿತ್ತು. ಯಾರ ಮುಖದಲ್ಲಿಯೂ ಒಂದು ಮಾತಿಲ್ಲ.

ಹಠಾತ್ತಾಗಿ ಆ ಹೆಣ್ಣು ಮುಂದುವರಿಸಿದಳು.

"ನಾನು ಪ್ರೇಮ ಮಾಡಲಿಕ್ಕೇನೋ ಮಾಡಿದ್ದೆ. ಯಾರಲ್ಲಿ ಗೊತ್ತೆ? ಆ ಕವಿಗೊಬ್ಬ ಅಣ್ಣ ಇದ್ದಾನೆ. ಅವನನ್ನ, ಚೆನ್ನಾರ ಚಲುವ. ಆತ ಕವಿತೆಯನ್ನೂ ಬರೆಯುತ್ತಿದ್ದಿಲ್ಲ, ಅಂಥ ಪಂಡಿತನೂ ಅಲ್ಲ. ಆದರೆ ಎಂಥ ಮೋಹನ ರೂಪ! ಅವನ ಮೈಕಟ್ಟೇನು, ಅವನ ಮನೋ ಬಲವೇನು! ಹೆಚ್ಚು ಮಾತಾಡುವವನಲ್ಲ. ತಾನಾಯಿತು, ತನ್ನ ಓದುಬರಹವಾಯಿತು. ಬಿ.ಎ.ಓದಿ ಮುಗಿಸಿದ್ದ. ಆದರೂ ಅವನ ಅಭ್ಯಾಸ ಮುಗಿದಿದ್ದಿಲ್ಲ. ಹೆಸರು ವೀರೇಂದ್ರ. ಕವಿಯ ಬಳಿಗೆ ಕವಿತೆ ಕೇಳುವ ನೆಪಹೂಡಿ ಹೋಗಿ ಬರುತ್ತಿದ್ದೆ. ನಿಜ ಹೇತುವೀರೇಂದ್ರನನ್ನು ನೋಡುವದು. ಕವಿ ಒಳಗೊಳಗೆ ಅಂದುಕೊಳ್ಳುತ್ತಿದ್ದಿರಬಹುದು.–ಇದ್ದಿರಬಹುದೇನು ಅಂದುಕೊಳ್ಳುತ್ತಿದ್ದ–ನಾನು ತನ್ನನ್ನೇ ಮೋಹಿಸಿದೆ, ಅಂತ. ತನ್ನ ಕವಿತೆಗೆ ಹುಚ್ಚಾಗಿದ್ದೇನೆ, ಅದೇ ನಿತ್ಯ ಏನಾದರೊಂದು ಸೋಗಿನಿಂದ ಬರುತ್ತಿದ್ದೇನೆ, ಅಂತ. ಅಬ್ಬಾ! ಏನು ಹೆಮ್ಮೆ ಈ ಕವಿಗಳಿಗೆ, ಅಂತೇನೆ!"

ಇಷ್ಟು ಹೇಳಿ ಹುಡುಗಿ ಕೆಲಕ್ಷಣ ಸುಮ್ಮನಿದ್ದಳು.

"ಕವಿತೆ ಕೇಳುವ ನೆವ, ವೀರೇಂದ್ರನನ್ನು ನೋಡುವ ಉದ್ದೇಶ–ನೋಡಿರಿ,

ಎಷ್ಟು ಮೋಸಗಳು ಸತ್ಯದ ಮುಖವಾಡ ಹಾಕಿಕೊಂಡು ಓಡಾಡುತ್ತವೆ. ಕವಿ ನನ್ನ ಗಂಡನಿಗೆ ಗೆಳೆಯ. ಒಂದೇ ದೊಡ್ಡ ಮನೆಯ ಎರಡು ಭಾಗಗಳಲ್ಲಿ ನಮ್ಮ ವಸತಿ. ಹೀಗಾಗಿ ಕವಿಯ ಮನೆಗೆ ನಾನು ಬೇಕಾದಾಗ ಹೋಗಿಬರಬಹುದಾಗಿತ್ತು. ಅಂದಾಕ್ಷಣ ನನ್ನ ಗಂಡ ಬಹಳ ಉದಾರ ಪ್ರಕೃತಿಯವನೆಂದು ತಿಳಿಯಬೇಡಿರಿ. ಸರ್ವಥಾ ಇಲ್ಲ. ಸಾಹಸದಿಂದ, ಸಾಹಸದಿಂದ ತಡೆಯುವ ಧೈರ್ಯ ಇದ್ದಿಲ್ಲ ಅವನಲ್ಲಿ. ಅಷ್ಟೆ. ಅವನ ದೌರ್ಬಲ್ಯದ ಪ್ರಯೋಜನ ಪಡೆದು ನಾನು ಮನ ಬಂದಾಗ ಇವರ ಮನೆಗೆ ಹೋಗಿ ಬಿಡುತ್ತಿದ್ದೆ. ಮೇಲಾಗಿ ನನಗೆ ಇನ್ನೊಂದು ಸಂಗತಿಯೂ ಅನುಕೂಲವಾಯಿತು. ಕವಿಯ ಮುದುಕಿ ದೊಡ್ಡಮ್ಮ ಅವಳೆ ಇವರ ಮನೆಯ ಯಜಮಾನಿ. ಅವಳಿಗೆ ನಾನೆಂದರೆ ಜೀವ. ಆಗಾಗ್ಗೆ ನನಗೆ ಕರೆಕಳಿಸುತಿದ್ದಳು. ಅವಳ ಹತ್ತಿರ ಹೋಗುವವರ ಹೆಸರಲ್ಲಿ ದಿನಾಲೂ ನನ್ನ ಪ್ರೇಮಯಾತ್ರೆ.

"ನಾನು ಒಬ್ಬಂಟಿಗಳಾಗಿ ದೊರೆತಾಗೆಲ್ಲ ಕವಿ ನನ್ನ ಮುಂದೆ ತನ್ನ ಕವಿತೆ ಓದುತ್ತಿದ್ದ. ಕವಿತೆಯ ವ್ಯಾಜದಿಂದ ಪ್ರೇಮ ನಿವೇದನೆ ಮಾಡುತ್ತಿದ್ದ. ಇಷ್ಟು ನನಗೂ ತಿಳಿಯುತ್ತಿತ್ತು. ಆದರೆ ಏನನ್ನೂ ಅನ್ನುತಿರಲಿಲ್ಲ. ಬದಲಿಗೆ ಮುಗ್ಧ ಳಾದವಳಂತೆ ನಟಿಸುತ್ತಿದ್ದೆ. ಅಭಿನಯದಲ್ಲಿ ನನ್ನ ಕೈ ಹಿಡಿದವರಾರು!" ಹೀಗೆಂದು ಅವಳು ಕಿಸಕ್ಕನೆ ನಕ್ಕಳು. ಮತ್ತೆ ನರಳಿದಳು, "ಉಫ್! ಭಾರೀ ದಾಹ ಕಾಣಿರಿ. ಸರ್ವಾಂಗವೂ ಜ್ವಾಲೆ. ಬೆಂಕಿ ಇನ್ನೂ ಆರಿಲ್ಲವೋ ಏನೋ, ಏನಾದರೊಂದು ಉಪಾಯ ಮಾಡುವುದಿಲ್ಲವೆ?"

"ಕತೆ ಹೇಳಲ್ಲ ಮುಂದೆ!"

"ಕತೆಯೆ? ಅದು ಮುಗಿಯದ ಕತೆ. ವೀರೇಂದ್ರ ನನ್ನ ಕೈಗೆ ಸಿಕ್ಕಲಿಲ್ಲ. ಹಣ್ಣಾದ ನಾಯಿಯನ್ನ ಜನ ಹೊಡೆದು ಅಟ್ಟಿ ಬಿಡುವ ಹಾಗೆ ಒಂದು ದಿನ ಆತ ನನ್ನ ಹೊಡೆದೋಡಿಸಿ ಬಿಟ್ಟ. ಅವನು ಒಬ್ಬಂಟಿಗನಾಗಿ ನನ್ನನ್ನ ಸಂಧಿಸಿದ್ದು ಒಂದೇ ದಿನ. ಅದೂ ಐದು ನಿಮಿಷ; ಸ್ವಲ್ಪ ಹೆಚ್ಚು ಇದ್ದರೂ ಇರಬಹುದು. ನಾಚಿಕೆಯನ್ನೆಲ್ಲ ಕಳೆದೊಗೆದು ಅವನೆದುರಿಗೆ ನನ್ನ ಹೃದಯವನ್ನೆಲ್ಲ ಬಿಚ್ಚಿಟ್ಟೆ. ಅವ ಏನಂದ ಗೊತ್ತೆ? 'ಒಮ್ಮೆ ಆಡಿದ್ದಕ್ಕಾಯಿತು. ಇನ್ನೊಮ್ಮೆ ನನ್ನ ಮುಂದೆ ಇಂಥ ಮಾತು ತೆಗೆದೀರಿ ಜೋಕೆ! ನೀವು ಬಹಳ ಒಳ್ಳೆಯವರೆಂದು ನಾ ಬಗೆದಿದ್ದೆ. ಇದೇನು ನಿಮ್ಮ ಚರ್ಯ? ಛೀ-ಛೀ! ಮನೆಗೆ ಹೋಗಿರಿ! ಇಷ್ಟೆಂದವನೇ ಆತ ಹೊರಬಿದ್ದು ಹೋಗಿಯೇ ಬಿಟ್ಟ. ನಾನು ಸಿಡಿಲು ಬಡಿದವಳಂತೆ ಅವಾಕ್ಕಾಗಿ ನೋಡುತ್ತಲೆ ನಿಂತಿದ್ದೆ. ನನ್ನ ಕಾಲ ಕೆಳಗಿನ ನೆಲವೇ ಸರಿದು ಹೋದಂತೆ

ತೋರಿತು. ನನ್ನ ಎಲ್ಲ ಇಹ ಜೀವಿತ, ಎಲ್ಲ ಆಸ್ತಿತ್ವ ಒಂದೇ ಕ್ಷಣದಲ್ಲಿ ಪುಡಿ ಪುಡಿಯಾದಂತೆ, ನನ್ನ ಜಗತ್ತೇ ಕಣ್ಮುಂದೆ ಜರಿದು ಬೀಳುವಂತೆ ಕಂಡಿತು. ಅಷ್ಟು ಹೊತ್ತಿಗೆ ಕವಿಯೂ ಅಲ್ಲಿಗೆ ಬಂದ. ನಾನು ಒಬ್ಬಳೇ ಇರುವುದನ್ನು ಕಂಡ. ತನ್ನ ಮನಸ್ಸಿನ ಮಾನಸಿ, ನಾನಲ್ಲದೆ ಬೇರಿಲ್ಲ ಎಂಬೀ ಮಾತನ್ನು ಬಾಯ್ಬಿಟ್ಟು ಆಡಿತೋರಿಸಲು ಅವನಿಗೂ ಆವರೆಗೆ ಸಂಧಿ ದೊರಕಿದ್ದಿಲ್ಲ. ಆ ಸ್ನಿಗ್ಧ ಸಂಧ್ಯಾಕಾಲದ ಏಕಾಂತದ ದುರ್ಲಭ ಅವಕಾಶವನ್ನು ಜಾರಿಹೋಗಗೊಡದೆ- ಅವನು ಏನೇನು ಹರಟಿದನೋ ಅದೊಂದು ಈಗ ನೆನಪಿಲ್ಲ ನನಗೆ -ಅಂತೂ ಅವನೂ ಅಂದು ತನ್ನ ಪ್ರೇಮ ನಿವೇದನೆ ಮಾಡಿದ. ಪ್ರೇಮ ಭಿಕ್ಷೆ ಬೇಡಿದ. ವೀರೇಂದ್ರ ಅದೇ ಆಗ ಆಡಿ ಹೋಗಿದ್ದ ಮಾತುಗಳು ಎಲ್ಲವೂ ನನ್ನ ಕಿವಿಯಲ್ಲಿ ಪ್ರತಿಧ್ವನಿಸುತ್ತಿದ್ದವು. ಹಿಂದೆ ಮುಂದೆ ನೋಡದೆ, ಅವೇ ಮಾತುಗಳನ್ನು ಇದ್ದಕ್ಕಿದಂತೆ ಬಾಯಿಪಾಠ ಹೇಳಿಬಿಟ್ಟೆ!"

ಹುಡುಗಿ ಮತ್ತೆ ಮೌನವಾದಳು.

"ಮುಂದೇನಾಯಿತು?"

"ಮುಂದಿನ ಕತೆಯೆಲ್ಲ ನಿಮಗೆ ಗೊತ್ತಿದೆ. ಅದೇ ರಾತ್ರಿ ಕವಿ ರಿವಾಲ್ವರನಿಂದ ಆತ್ಮಹತ್ಯೆ ಮಾಡಿಕೊಂಡ. ಮರುದಿನ ನಾನು ಉರಿ ಹಚ್ಚಿಕೊಂಡು ಸತ್ತೆ. ಉರಿ ಹಚ್ಚಿಕೊಳ್ಳುವ ಮೊದಲು ನಿತ್ಯದಂತೆ ಆ ದಿನವೂ ನನಗೆ ನನ್ನ ಗಂಡನಿಗೂ ಜಗಳವಾಗಿತ್ತು. ಊರವರು ತಿಳಿದರು, ನನ್ನ ಸಾವಿಗೆ ಕಾರಣ ಗಂಡನ ಜಗಳ ಅಚಿತ. ನನ್ನ ಗಂಡ ತಿಳಿದುಕೊಂಡ, ಸಾವಿಗೆ ಕಾರಣ ಕವಿಯಲ್ಲಿನ ಪ್ರಣಯ ಅಂತ. ಕವಿಯಾದರೂ ಹಾಗೆ ತಿಳಿದುಕೊಂಡಂತೆ ಕಾಣುತ್ತದೆ. ಕವಿಯ ಮರಣದ ಕಾರಣವನ್ನು ನೀವು ಗೊತ್ತುಪಡಿಸಿರಬಹುದು. ಕ್ಷಣಿಕ ಬುದ್ಧಿಭ್ರಮೆ-'ಟೆಂಪರರಿ ಇನ್ ಸ್ಯಾನಿಟಿ'ಯ ಕಾರಣವೆಂದು ನನ್ನೆಣಿಕೆ. ವೀರೇಂದ್ರ ಏನೇನು ತಿಳಿದುಕೊಂಡಿದ್ದಾನೋ ಅವನೇ ಬಲ್ಲ. ಸತ್ಯಮಿಥ್ಯೆಗಳ ಮಾತು ಹೇಗೆ ಕಲಬೆರಕೆ ಆಯಿತು, ನೋಡಿರಲ್ಲ"

ಅವಳು ನಗತೊಡಗಿದಳು. ನೋಡುನೋಡುತ್ತ ಅವಳ ಮುಖದ ಹಾಸ್ಯ ಮಾಯವಾಯಿತು. ಎರಡೂ ಕಣ್ಣುಗಳಲ್ಲಿ ಕಾತರ ಅನುನಯ ಒಡೆದು ಕೊಂಡಿತು.

"ಉಃ, ಭಾರೀ ದಾಹ. ಏನಾದರೊಂದು ಮಾಡಿ ಉಪಶಮನ ಮಾಡಿರಿ ತಡೆಯಲಾರೆ ಈ ದಾಹ."

ಬದುಕಿದ್ದವರ ಚಿಕಿತ್ಸೆ ನನಗೆ ಸ್ವಲ್ಪ ಗೊತ್ತಿತ್ತು. ಆದರೆ ಸತ್ತವರ ಚಿಕಿತ್ಸೆ ಹೇಗೆ ಮಾಡಲಿ? ಅದನ್ನೇನೂ ನಾನು ಕಲಿತಿಲ್ಲವಲ್ಲ!

ದಿಗ್ಮೂಢನಂತೆ ಕುಳಿತು ಕೇಳುತ್ತಿದ್ದೆ–"ದಾಹ–ಬಹಳ ದಾಹ–ಭಾರೀ ದಾಹ–ಉರಿ–ಉರಿ–"

ಮೆಲ್ಲಮೆಲ್ಲನೆ ಆರ್ತಸ್ವರ ಅಂಧಕಾರದಲ್ಲಿ ಲೀನವಾಗಿ ಹೋಯಿತು.

ಕಿಡಿಕಿಯ ಕಡೆ ನೋಡುತ್ತ ಕುಳಿತಿದ್ದೆ.

ನೀರಂಧ್ರ ಅಂಧಕಾರವನ್ನು ಚುಚ್ಚಿ ಚುಚ್ಚಿ ಮಿಡಿನಾಗರನಂತೆ ಮಿಂಚಿನ ಹೊಳಹು ಚಕಿತಚಕಿತವಾಗಿ ಹೋಗುತಿತ್ತು. ಎದುರಿಗೆ ಹೊಲದಲ್ಲಿ ದೊಡ್ಡ ಆಲದ ಮರ ಪಿಶಾಚಿಯಂತೆ ಭೂಮಿಗೂ, ಆಕಾಶಕ್ಕೂ ಸಮವಾಗಿ ಸಮನಾಗಿ ನಿಂತಿತ್ತು. ಆದರೆ ನೆತ್ತಿಯಲ್ಲಿ ಲೆಕ್ಕವಿಲ್ಲದಷ್ಟು ಮಿಂಚು ಹುಳುಗಳು. ಪಿಶಾಚಿ ಅಸಂಖ್ಯ ಕಣ್ಣುಗಳನ್ನು ತೆರೆದು ಯಾರನ್ನೋ ಅರಸುವಂತಿತ್ತು.

ಯಾರನ್ನಿರಬಹುದು?

ಬುಸ್ಸೆಂದು ಗಾಳಿ ಒಳನುಗ್ಗಿ ಬಂತು.

ಪುಸ್ತಕದ ಹಾಳೆಗಳು ಪರಪರನೆ ಹಾರ ತೊಡಗಿದವು. ಅದನ್ನೆತ್ತಿಕೊಂಡು ಪುನಃ ಕಥೆಯಲ್ಲಿ ಮನಸು ಹಾಕಿದೆ.

"ದಾರಿ ತೀರ ಇಕ್ಕಟ್ಟು. ಎರಡೂ ಬದಿಗೆ ಮುಗಿಲು ಮುಟ್ಟುವ ಪರ್ವತಗಳ ಸಾಲು. ನಡುವೆ ಕೊಳ್ಳ. ಅದರಲ್ಲಿ ಕತ್ತಲು ತುಂಬಿ ತುಳುಕುತಿತ್ತು. ಹುಡುಗಿಯ ಕಣ್ಣು ಮೋರೆಗಳಲ್ಲಿ ಒಂದು ಬಗೆಯ ಅಂಜಿಕೆಯ ಕಳೆ ಮೂಡಿತು. ರಾತ್ರಿ ಮೀರುವ ಮೊದಲೇ ಈ ಕೊಳ್ಳದಿಂದ ಪಾರಾಗಿ ಹೋಗಬಹುದೇ ಎಂದು ಆಕೆ ಚಿಂತಿಸುತ್ತಿದ್ದಳು. ಒಮ್ಮಿಂದೊಮ್ಮೆ ಅವಳು ಹಿಮ್ಮೆಟ್ಟಿ ನಿಂತುಬಿಟ್ಟಳು. ನಿಟಿಲುನಿಟಿಲೆಂದು ಮರದ ಟೊಂಗೆ ಮುರಿಯುವ ಸದ್ದು ಕಿವಿಗೆ ಬಿತ್ತು. ಕತ್ತಲಲ್ಲಿ–ಬರಿ ಐವತ್ತು ಗಜ ದೂರದಲ್ಲಿರಬಹುದು. ಏನೋ ಒಂದು ನಿಂತಿರುವಂತೆ ತೋರಿತು. ಏನದು?

"ತಪ್ಪಿಸಿಕೊಂಡು ಓಡು," ಎಂದು ಹುಡುಗಿ ಹೇಳುವಂತೆ ತೋರಿತು. ಅವಳ ಮುಖ ಬಿಳುಪೇರಿ ಹೋಗಿತ್ತು. ಟೊಂಕದಿಂದ ತನ್ನ ಕೈ ಕೊಡಲಿಯನ್ನು ತೆಗೆದು ಅದನ್ನು ಎತ್ತಿ ಹಿರಿದಿದ್ದಳವಳು.

"ಶಕ್ತಿಯಿದ್ದಿದ್ದರೆ ನಾನು ಕಾಲಿಗೆ ಬುದ್ಧಿ ಹೇಳುವವನೇ ಇದ್ದೆ. ಆದರೆ

ಮಿಸುಕಾಡಲು ಕೂಡ ನನ್ನಿಂದಾಗಲಿಲ್ಲ. ನನ್ನ ಜಂಘಾಬಲವೇ ಉಡುಗಿ ಹೋಗಿತ್ತು. ಚಲನಶಕ್ತಿಯನ್ನು ಸಂಪೂರ್ಣ ಕಳೆದುಕೊಂಡು ಕಲ್ಲಿನಮೂರ್ತಿ ಯಂತೆ ನಿಂತುಕೊಂಡಿದ್ದೆ. ಈಗ ಆ ವಸ್ತು ಸ್ಪಷ್ಟವಾಗಿ ಕಾಣಿಸತೊಡಗಿತು. ಅದೊಂದು ದೊಡ್ಡ ಬಿಳಿ ಕರಡಿ. ಒಂದು ಹೊದರಿನಿಂದ ತಲೆಯನ್ನೂ, ಮುಂಗಾಲುಗಳನ್ನೂ ಹೊರಗಿಕ್ಕಿ ನಮ್ಮ ಕಡೆ ನೋಡುತಿತ್ತು. ಬಾಯಲ್ಲಿ 'ಬೆರಿ' ಹಣ್ಣುಗಳ ಗೊಂಚಲು. ಅದರ ಭೋಜನ ವೇಳೆಯಲ್ಲಿ ನಾವು ಬಂದು ವಿಘ್ನವನ್ನುಂಟುಮಾಡಿದೆವು. ದೆವ್ವನಂತ ಕರಡಿ. ಮೈಯರೋಮ ನೋಡಿದರೇ ಅದರ ಆಕಾರದ ಕಲ್ಪನೆ ಬರುತಿತ್ತು.

'ಓಡು' ಎಂದು ನಾನೂ ಆ ಹುಡುಗಿಯ ಕಿವಿಯಲ್ಲಿ ಪಿಸು ನುಡಿದೆ. ನನ್ನ ದೇಹದಲ್ಲಿ ಆಗ ಒಮ್ಮಿಂದೊಮ್ಮೆ ಎಲ್ಲಿಂದ ಪೌರುಷ ಉಕ್ಕಿ ಬಂದಿತೋ ಏನೊ. ಹುಡುಗಿ ಪಾರಾಗಲಿ. ನಾನು ಎದೆಗೊಟ್ಟು ಅವಳನ್ನು ರಕ್ಷಿಸಲೇ ಬೇಕು ಎಂದುಕೊಂಡೆ. ಈ ಪ್ರಯತ್ನದಲ್ಲಿ ಕರಡಿಯೊಡನೆ ಹೋರಾಡಬೇಕಾಗಿ ಬಂದರೂ ಸರಿಯೆ. ಮನಸಿನೊಳಗೇ ಈ ಗಂಡಸುತನದ ಸಂಕಲ್ಪ ಮಾಡಿದೆನೇನೋ ನಿಜ. ಆದರೂ ನನ್ನ ಸರ್ವಾಂಗವೂ ನನ್ನ ವಶದಿಂದ ತಪ್ಪಿಹೋಗಿತ್ತು. ನೋಡು ನೋಡುತ್ತ ಆ ದೊಡ್ಡ ಪ್ರಾಣಿ ಮುಂದು ಮುಂದೆ ಬರತೊಡಗಿತು. ಆದರೆ ಹುಡುಗಿ ಓಡಲಿಲ್ಲ. ಆಗ ಅವಳು ಮಾಡಿದ ಸಾಹಸವನ್ನು ಈ ಜನ್ಮದಲ್ಲಿ ಎಂದಾದರೂ ಮಾಡಬಲ್ಲೆನೆಂದೆ. ಹೇಳುವ ದಿಟ್ಟತನ ನನ್ನಲ್ಲಿ ಈಗಲೂ ಇಲ್ಲ. ಅವಳು ತಾನೇ ಆ ಭಯಾನಕ ಜಂತುವಿನತ್ತ ಮುಂದುವರಿದಳು. ಬಳಿಕ ಮೆಲ್ಲಮೆಲ್ಲನೆ ತನ್ನ ಮೇಲು ಹೊದಿಕೆಯನ್ನು ಬಿಚ್ಚಿ ತೆರೆದು, ಬೆರಳಿನಿಂದ ತನ್ನ 'ಬ್ರಿಚೆಸ್'ನ್ನು ಕರಡಿಗೆ ತೋರಿಸತೊಡಗಿದಳು. ಹೆಣ್ಣು ಮಕ್ಕಳು ಧರಿಸುವ 'ಬ್ರಿಚೆಸ್ಸಿ'ನ ರೂಪವೇ ಬೇರೆ ಇರುತ್ತದೆ. ಅರ್ಥಾತ್ ತಾನು ಹೆಣ್ಣೆಂದು ಕರಡಿಗೆ ಮನವರಿಕೆ ಮಾಡಿಕೊಡುವದು ಅವಳ ಉದ್ದೇಶವಾಗಿತ್ತು. ಕರಡಿ ಒಮ್ಮೆ ಅವಳನ್ನು ದಿಟ್ಟಿಸಿ ನೋಡಿತು. ಹಣ್ಣಿನ ಗೊಂಚಲು ಅದರ ಬಾಯಿಯಿಂದ ಉದುರಿಬಿತ್ತು. ಮೂಗಿನ ಸೊಳ್ಳೆಗಳಿಂದ ಘುಸ್‌ಘುಸ್ ಶಬ್ದ ಮಾಡುತ್ತ ಅದು ಅಡವಿಯಲ್ಲಿ ಅದೃಶ್ಯವಾಗಿ ಹೋಯಿತು. ತಿರುಗಿ ಬರಲೇ ಇಲ್ಲ.

"ಲ್ಯಾಪ ಜನರ ಎಣಿಕೆಯಲ್ಲಿ ಬಿಳಿ ಕರಡಿ ಹೆಂಗಸರಿಗೆ ಏನೂ ಮಾಡುವುದಿಲ್ಲ–"

"ಆದರೆ ನಾವೇನೂ ಬಿಳಿ ಕರಡಿಗಳಲ್ಲವಲ್ಲ, ನಾವು ಮನುಷ್ಯರು ಹೆಣ್ಣಿನ ಮಾಂಸ ತಮಗೆ ಚೆನ್ನಾಗಿ ರುಚಿಸುತ್ತದೆ!"

"ಯಾರು?"

ಬೆಚ್ಚಿಬಿದ್ದು ನೋಡಿದೆ.

ಒಂದು ರುಂಡ ಶೂನ್ಯದಲ್ಲಿ ಜೋತಾಡುತ್ತಿದೆ. ಅದರ ದಪ್ಪದಪ್ಪ ತುಟಿಗಳಲ್ಲಿ ಒಂದು ಪೈಶಾಚಿಕ ನಗೆ. ತಲೆಯಲ್ಲಿ ವರಾಹಕೇಸರಿಯಂತೆ ನೆಟ್ಟಗೆ ನಿಮಿರಿ ನಿಂತ ಒರಟೊರಟು ಕೂದಲು ಗಡ್ಡ ಮೀಸೆಗಳೂ ಹಾಗೆಯೆ ಮುಳ್ಳು ಹಂದಿಯೊಂದು ಮೈಯ ಮುಳ್ಳುಗಳನ್ನೆಲ್ಲ ನಿಗುರಿಸಿಕೊಂಡು ಶೂನ್ಯದಲ್ಲಿ ಜೋತಾಡುವಂತಿದೆ.

"ಆಹಾಹಾ! ನಾರೀ ಮಾಂಸದ ಸವಿ, ಈಗಲೂ ನಾಲಿಗೆಯ ಮೇಲೆ ಅಂಟಿಕೊಂಡಂತಿದೆ. ಅದರ ಕೊರತೆಯೂ ಇದ್ದಿಲ್ಲ, ನನಗೆ. ಅಪ್ಪ ಧಾರಾಳ ಗಳಿಸಿಟ್ಟು ಹೋಗಿದ್ದ. ಆದರೆ ತಲೆಯಲ್ಲಿ ಒಂದಿಷ್ಟು ವಿವೇಕ ಇತ್ತಲ್ಲ. ಅದರ ಗಂಟಲು ಹಿಸುಕಲು ಬೇಕು, ಬೇಕಾದ ಉಪಾಯ ಹೂಡಿದೆ. ಹೆಂಡ, ಅಫು, ಗಾಂಜಾ, ಕೊಕೇನ್, ಏನೇನು ಸಿಕ್ಕಬಹುದೋ ಅದನ್ನೆಲ್ಲ ಕೂಡಹಾಕಿದ್ದೆ. ಆದರೆ ಸಾಧ್ಯವಾಗಲಿಲ್ಲ. ವಿವೇಕದ ಕೊಲೆ ಮಾಡುವದು ನನಗೆ ಸಾಧಿಸಲಿಲ್ಲ. ಬದಲಿಗೆ ವಿವೇಕವೇ ತನ್ನನ್ನು ಕೊಂದುಹಾಡಿತು. ಒಳ್ಳೇದು ಡಾಕ್ಟರ್ ಸಾಹೇಬ್, ಮನುಷ್ಯರು ಕೊಲೆ ಮಾಡಿದರೆ ಗಲ್ಲಾಗುತ್ತದೆ. ವಿವೇಕಕ್ಕೇಕೆ ಬೇಡವೊ? ವಿವೇಕದ ಪ್ರಚೋದನೆಯಿಂದ ದಿನವೂ ಎಷ್ಟು ಕೊಲೆಗಳಾಗುತ್ತವೆ ಗೊತ್ತೇ ನಿಮಗೆ? ಒಂದಲ್ಲ. ಎರಡಲ್ಲ, ಹಲವು, ಆದರೂ ಆ ವಿವೇಕಕ್ಕೆ ಏನೂ ಶಾಸ್ತಿ ಇಲ್ಲ ಎಲ್ಲಿಯದಯ್ಯಾ ನಿಮ್ಮ ಕಾಯಿದೆ?"

ಮನುಷ್ಯ ಕೆಲಕ್ಷಣ ನನ್ನ ಕಡೆ ದಿಟ್ಟಿಸುತ್ತ ಉಳಿದು ಮತ್ತೆ ತನ್ನ ಆ ಶಂಕೆಗೆ ತಾನೇ ಉತ್ತರಕೊಟ್ಟು ನಗುತ್ತ ನುಡಿದ; "ಒಂದು ಲೆಕ್ಕದಿಂದ ಕಾಯಿದೆಯ ತಪ್ಪೇನೂ ಇಲ್ಲ. ವಿವೇಕವನ್ನು ಹಿಡಿಯಲಿಕ್ಕೆ ಬರುವದಿಲ್ಲವಲ್ಲ. ಅದರ ಕೈಕಾಲು ಗಳಿಗೆ ಬೇಡಿ ತೊಡಿಸುವದೂ ಸಾಧ್ಯವಿಲ್ಲ. ವಿಚಿತ್ರ ಅಶರೀರ ವಸ್ತು ಈ ವಿವೇಕ! ಆದರೆ ಎಷ್ಟು ಭಯಂಕರ! ನನ್ನ ಕತ್ತಿಗೆ ಕೈಕೊಟ್ಟು ದಬ್ಬುತ್ತ ಹೋಗಿ ರೈಲು ಹಳಿಯ ಮೇಲೆ ಮಲಗಿಸಿ ಒತ್ತಿ ಹಿಡಿಯಿತು. ಅಷ್ಟರಲ್ಲಿ ಬಾಂಬೇ ಮೇಲು ಬಂದು ನನ್ನ ಗಂಟಲ ಮೇಲಿಂದ ಹಾದು ಹೋಯಿತು. ಏನು ಮಾಡಿದರೂ ಕದಲಲು ನನ್ನಿಂದಾಗಲಿಲ್ಲ. ರುಂಡ ಅತ್ತ; ಮುಂಡ ಇತ್ತ. ಎರಡಾಗಿ ಬಿದ್ದವು. ಹೋಗಲಿ, ಡಾಕ್ಟರ್ ನನ್ನ ಮುಂಡ ಎತ್ತ ಹೊಯಿತು ನೋಡಿದ್ದೀರಾ? ದೇಹವಿಲ್ಲದೆ, ಹೇಗೆ ಕೆಲಸ ಸಾಗಬೇಕು ಹೇಳಿರಿ!"

ಕತ್ತರಿಸಿದ ರುಂಡ ಮತ್ತೆ ಶೂನ್ಯದಲ್ಲಿ ಲೀನವಾಗಿ ಹೋಯಿತು.

ಗೋಡೆಯ ಮೇಲಿನ ಕ್ಯಾಲಂಡರಿನ ಪಕ್ಕದಲ್ಲೆ ಅದು ಮಾಯವಾದಂತೆ ತೋರಿತು.

ನೋಡಿದರೆ ಬರಿ ಸಾದಾ ಕ್ಯಾಲೆಂಡರ್ ಅದು.

ಅದರಲ್ಲಿ ಒಂದು ಚಿತ್ರವಿತ್ತು. ಇಷ್ಟು ದಿನ ಅದನ್ನು ಕಣ್ಣಿಟ್ಟು ನೋಡಿದ್ದೇ ಇಲ್ಲ. ಈಗ ಛಾಯಾಮಯ ರುಂಡ ಅದರ ಪಕ್ಕದಲ್ಲೆ ಕಣ್ಮರೆಯಾದುದರಿಂದ ಅದರ ಮೇಲೆ ದೃಷ್ಟಿ ಬಿತ್ತು. ಯೋಚಿಸತೊಡಗಿದೆ. ಆ ಚಿತ್ರ ಅಷ್ಟೇನೂ ನಿಕೃಷ್ಟವಾಗಿದ್ದಿಲ್ಲ. ರೂಪದಕ್ಷ ಚಿತ್ರಕಾರನ ಹೃದಯದ ಸೌಂದರ್ಯ ಬೋಧವೇ ಕುಂಚದ ತುದಿಯಿಂದ ಮೂಡಿ ಮೈವೆತ್ತಂತ್ತಿತ್ತು. ಉಟ್ಟದ್ದು ನೀಲ ವರ್ಣದ ಸೀರೆ. ಅದು ಆ ರೂಪಕ್ಕೆ ಚೆನ್ನಾಗಿ ಒಪ್ಪುತ್ತಿತ್ತು. ಅಪರೂಪ ಶೋಭೆಯೊಂದು ಮುಖದಲ್ಲಿ ವಿರಾಜಿಸುತಿತ್ತು. ಎಷ್ಟೋ ದಿನಗಳಿಂದ ಕಣ್ಮುಂದೆಯೆ ಜೋತಾಡುತಿದೆ, ಆದರೂ ಅತ್ತ ನನ್ನ ಗಮನವೇ ಹರಿದಿದ್ದಿಲ್ಲ. ಆಶ್ಚರ್ಯ!

ಹೌದು, ಗಮನಿಸಿರಲಿಲ್ಲ. ಮನುಷ್ಯ ಜೀವನದಲ್ಲಿ ಸದಾ ಕಾಲವೂ ಸರ್ವ ವಸ್ತುಗಳನ್ನೂ ಗಮನಿಸಲು ಅವಕಾಶವೆ ಇಲ್ಲ. ಮನುಷ್ಯ ಒಂದು ಸಮಯದಲ್ಲಿ, ಒಂದೇ ವಸ್ತುವನ್ನು ತೆಗೆದುಕೊಂಡು ಅದರಲ್ಲೇ ಮಗ್ನನಾಗಿರುತ್ತಾನೆ. ಗುಂಗಾಗಿರುತ್ತಾನೆ. ಉಳಿದ ಇಂದ್ರಿಯ ಗೋಚರ ವಸ್ತುಗಳೊಡನೆ ಅವನ ಸಂಪರ್ಕ ಬರಿ ತೋರಿಕೆಯದು. ಹೃತ್ಪೂರ್ವಕವಾಗಿ ಅವನು ಏಕಕಾಲದಲ್ಲಿ ಸಮಸ್ತವಸ್ತುಗಳ ಅಸ್ತಿತ್ವವನ್ನೂ ಏಕಪ್ರಕಾರವಾಗಿ ಅನುಭವಿಸುವದಿಲ್ಲ. ಅನುಭವಿಸುವದು ಸಾಧ್ಯವೂ ಇಲ್ಲ. ಅದೇ ಅವನ ಬಲ. ಅದೇ ಅವನ ದೌರ್ಬಲ್ಯ. ಹೂವನ್ನು ನೋಡುತಿದ್ದಾಗ ಹಕ್ಕಿಯ ನೆನಪು ಹಾರಿ ಹೋಗಿರುತ್ತದೆ.

ಚಿತ್ರಾರ್ಪಿತ ಸುಂದರಿ ನನ್ನನ್ನೇ ನಟ್ಟ ನೋಟದಿಂದ ದಿಟ್ಟಿಸುತಿದ್ದಾಳೆ ಅಲ್ಲ, ಚಿತ್ರದ ಹೃದಯದಲ್ಲಿ ಆಗುವಂತೆ ಅಲ್ಲಿಯೂ ಸುಖದುಃಖಗಳ ಕಣ್ಮುಚ್ಚಾಲೆ ನಡೆಯುತಿರಬಹುದೆ? ಇದ್ದರೂ ನಮ್ಮಂತೆ ಅದೂ ಧೃತಿಗೆಡುವದುಂಟೆ? ಚಿತ್ರವೂ ಅಳುವದುಂಟೆ? ಯಾರು ಬಲ್ಲ, ಅಳುತಿದ್ದರೂ ಇರಬಹುದು. ಚಿತ್ರದ ಅಳುವಿನ ಭಾಷೆ ಕಣ್ಣೀರಲ್ಲದೆ, ಮತ್ತೇನಾದರೂ ಇದೆಯೊ ಏನೊ? ನಮಗೆ ಅದು ಕಾಣಿಸುತ್ತಿರಲಿಕ್ಕಿಲ್ಲ. ಜಡ ಚೇತನಗಳ ನಡುವೆ ನಿಜವಾಗಿ ಏನಾದರೂ ಅಂತರವಿದೆಯೆ? ಈ ಅಸೀಮ ವಿಶ್ವದ ವಿರಾಟ್ ವಸ್ತು ಪ್ರವಾಹದಲ್ಲಿ ಯಾವುದು ಜಡ? ಯಾವುದು ಚೇತನ? ಇದನ್ನು ನಿಶ್ಚಯ ಮಾಡಿಕೊಡುವವರಾರು? ಅವುಗಳ ನಡುವೆ ಎಲ್ಲಿ ಸೀಮೆ? ಸೀಮೆಯೆಂಬುದಾದರೂ ಖಂಡಿತವಾಗಿ ಇದೆಯೆ? ಯಾವುದಕ್ಕಾದರೂ ಮೇರೆಯಿದ್ದರೆ, ಅದು ನಮ್ಮ ಬುದ್ಧಿಗೊಂದು

ಮೇರೆಯಿರುವದರಿಂದಲೇ. ಎಲ್ಲ ವಸ್ತುಗಳಿಗೂ ಮೇರೆಯನ್ನು ಕಲ್ಪಿಸಲು ನೋಡುತ್ತೇವೆ. ಮೇರೆ ಸಿಗದಿದ್ದರೆ ಅಸೀಮದ ಕಲ್ಪನೆಯನ್ನು ಮಾಡಿಕೊಳ್ಳಲು ನಮ್ಮಿಂದಾಗದು. ಸಂಕುಚಿತ ಸೀಮೆಗಳ ನಡುವೆ ಹುದುಗಿದ್ದೇವೆಂದೇ ಭೂಮದ ಕಲ್ಪನೆ ಮಾಡಿಕೊಳ್ಳುವ ಆತುರ ನಮಗೆ. ಆದರೆ ಸೀಮೆಗಳ ಸುತ್ತಲೂ ಬರೆಯುವ ಚಟವನ್ನೇನು ನಾವು ಬಿಟ್ಟಿಲ್ಲ. ಇಡೀ ಜೀವನದಲ್ಲಿ ನಾನಾ ರೀತಿಯಲ್ಲಿ ಸೀಮಾರೇಖೆಗಳನ್ನು ಎಳೆಯುತ್ತಲೇ ಇರುತ್ತೇವೆ. ಅದರಲ್ಲೇ ನಮಗೆ ಸಂತೃಪ್ತಿ. ಆದರೂ ಒಂದು ಬಗೆಯಿಂದ ನೋಡಿದರೆ ಎಲ್ಲ ಸೀಮೆಗಳೂ ಲುಪ್ತವಾಗಿ ಹೋದಾವು. ಚೇತನವೇ ಜಡವಾದೀತು; ಜಡದೊಳಗಿನ ಚೇತನ ಎಚ್ಚತ್ತು ನಿಂತೀತು. ಎಲ್ಲ ಸಂಕುಚಿತ ರೇಖಾಕೃತಿಗಳು ಅಳಿದು ಹೋದಾವು, ಜೀವನ ಮರಣಗಳಲ್ಲಿ ಅಂತರವೇನೂ ಉಳಿಯದು...

ಚಿತ್ರ ರೆಪ್ಪೆಬಡಿದಂತೆ ತೋರಿತು. ತುಂಬಿದ ಎದೆ ಒಮ್ಮೆ ಉಬ್ಬಿ ತಗ್ಗಿತ್ತು. ದೀರ್ಘನಿಃಶ್ವಾಸದ ಶಬ್ದ ಹೊರಹೊಮ್ಮಿದಂತೆ ಅನಿಸಿತು. ಇನ್ನೇನು, ಇವಳು ಮಾತಾಡಿಬಿಡುವಳು ಎಂದು ಕೊಂಡೆ... ಅಂಧಕಾರ ರಾತ್ರಿಯ ಏಕಾಂತದಲ್ಲಿ ಕ್ಯಾಲಂಡರಿನ ಆ ಚಿತ್ರವೇ ಅತ್ಯಂತ ಆತ್ಮೀಯ ಬಂಧುವೆಂದು ಭಾಸವಾಯಿತು. ಅದನ್ನು ಕರೆದು, "ಎಲೆ ಸುಂದರಿ, ರೇಖಾ ಬಂಧನದಲ್ಲಿ ನಿನ್ನನ್ನು ಸೆರೆ ಯಿಕ್ಕಿದವನಾರು? ನೀನು ಜೀವಕಳೆ ತುಂಬಿ ನನ್ನ ಸಮ್ಮುಖದಲ್ಲಿ ಬಂದು ನಿಲ್ಲು. ಜಗತ್ತಿನಲ್ಲಿ ಜಡಕ್ಕೂ ಚೇತನಕ್ಕೂ ಯಾವ ಭೇದವೂ ಇಲ್ಲೆಂದು ತೋರಿಸಿಕೊಡು." ಎಂದು ಕೇಳುವ ಹಂಬಲವಾಯಿತು.

ಫಕ್ಕನೆ ಬೆಳದಿಂಗಳ ಸೆಳೆಕೊಂದು ಬಂದು ಕಿಟಕಿಯಿಂದ ಪ್ರವೇಶಿಸಿತು. ಹೊರಗೆ ನೊಡಿದೆ, ಮೋಡ ಸರಿದು ಹೊಳಪಾಗ ತೊಡಗಿತ್ತು. ಕೃಷ್ಣ ಪಕ್ಷದ ಕ್ಷಯಚಂದ್ರ ಮೂಡುತ್ತಿದ್ದ. ಮುಗ್ಧನಾಗಿ ನೋಡುತ್ತ ಕುಳಿತೆ. ಆಕಾಶದಲ್ಲಿ ಇನ್ನೂ ಕಾರ್ಮೋಡಗಳು ಅತ್ತಿತ್ತ ತೇಲಿ ಬರುವಂತೆ ತೋರಿತು.

"ಮುಗ್ಧನಾಗಿ ನನ್ನನ್ನು ಏಕೆ ನೋಡುವಿ! ಹೀಗೆ ಮುಗ್ಧನಾಗಿ ಮಾತಾಡಿದರೂ ನನ್ನಲ್ಲಿ ಏನಿದೆ? ನಿಜ, ಅದೊಂದು ಕಾಲವಿತ್ತು. ಆಗ ನನ್ನ ಪರ್ವತ ಶಿಖರಗಳಲ್ಲಿ ಜ್ವಾಲಾಮುಖಿಗಳ ಜ್ವಲಂತ ಮಹಿಮೆ ಪ್ರಜ್ವಲಿಸುತ್ತಿತ್ತು. ಪ್ರತಿಯೊಂದು ಪರಮಾಣುವಿನಲ್ಲಿಯೂ ಪ್ರಾಸ್ಪಂದನವನ್ನು ನಾನು ಅನುಭವಿಸು ತ್ತಿದ್ದೆ. ಜ್ವಾಲಾಮಯಳಾಗಿ ನನ್ನ ಅಕ್ಷದಲ್ಲಿ ತಿತ್ತಿರಿ ತಿರುಗುತ್ತ ನಾನೂ ಆಕಾಶದ ಲಕ್ಷ ದೀಪಾವಳಿಯಲ್ಲಿ ನನ್ನ ಹೃದಯ ದೀಪವನ್ನು ಗರ್ವದಿಂದ ಎತ್ತಿ ಹಿಡಿದಿದ್ದೆ. ಆದರೆ ಅದೆಲ್ಲ ಈಗ ಪುರಾತನ ಕಥೆ. ಇಂದು ನನ್ನಲ್ಲಿ ಏನೂ ಇಳಿದಿಲ್ಲ. ಈಗ

ನಾನು ತಣ್ಣಗಾಗಿ ಹೋಗಿದ್ದೇನೆ. ಈಗ ನಾನು ನನ್ನ ಪೂರ್ವಗೌರವದ ನೆರಳು ಮಾತ್ರ. ಅಸೀಮ ಆಕಾಶದಲ್ಲಿ ಭೂತದಂತೆ ಅಲೆಯುತ್ತಿದ್ದೇನೆ. ಜೀವಂತ ಸೂರ್ಯನ ಕರುಣಾಕಿರಣಗಳ ಭಿಕ್ಷೆಯಿಂದ ನಾನಿಂದು ಬೆಳಗುತ್ತಿದ್ದೇನೆ. ಅದರಲ್ಲಿ ನನ್ನದೆಂಬ ಗೌರವಲೇಶವೂ ಇಲ್ಲ. ನಾನೀಗ ಮೃತ ಪ್ರೇತಾತ್ಮ"

ಮೋಡಗಳು ಬಂದು ಪುನಃ ಕರಿ ತೆರೆಯನ್ನು ಹೊದಿಸಿದವು; ಚಂದ್ರ ಕಣ್ಮರೆಯಾದ.

ಒಂದು ಕಪ್ಪೆಯ ಆರ್ತನಾದ ಕತ್ತಲೆಯನ್ನು ಭೇದಿಸಿ ಬರುತ್ತಿತ್ತು. ಹಾವು ಹಿಡಿದಿರಬೇಕು. ಕೇಂ–ಕೇಂ–ಕೇ– ಎಂಬ ಏಕಪ್ರಕಾರವಾದ ಕೂಗು ಶ್ರುತಿಯಿದೆ, ತಾಳವೂ ಇದೆ.

ಇದೂ ಒಂದು ಸಂಗೀತವೆ?

ಅತ್ಯಂತ ಶೀತಲವಾದ ಕೈಯನ್ನು ಯಾರೋ ನನ್ನ ಹೆಗಲಮೇಲಿರಿಸಿ ದಂತಾಯಿತು. ತಿರುಗಿ ನೋಡಿದರೆ ಒಬ್ಬ ಹೆಂಗಸು. ಹುಡುಗಿಯೋ ಹರೆಯ ದವಳೋ ಮುದುಕಿಯೋ ಒಂದೂ ತಿಳಿಯುವಂತಿರಲಿಲ್ಲ. ಒಂದು ಕಾಲದಲ್ಲಿ ಅತ್ಯಂತ ಸುಂದರಿಯಾಗಿದ್ದರೂ ಇದ್ದಿರಬಹುದು. ಆದರೆ ಈಗಂತೂ ಬೀಭತ್ಸ ರೂಪ. ಮುಖವೆಲ್ಲ ಬಾತುಬೀತುಹೋಗಿದೆ. ಅಲ್ಲಲ್ಲಿ ಮಾಂಸ ಕದಲಿ ಹೊರಬಂದಿದೆ. ಬಾತು ಬಿರಿದ ಹೊಟ್ಟೆಯಿಂದ ಕೊಳೆತ ಕರುಳು ಹಣುಕುತಿದೆ. ವಿಗಲಿತ ದೃಷ್ಟಿಹೀನ ನೇತ್ರಗಳಿಗೆ ರೆಪ್ಪೆಗಳೇ ಇಲ್ಲ.

"ಎಲ್ಲಿ ಹೋದನವ? ಎಲ್ಲಿ ತಪ್ಪಿಹೋದ? ನಾವಿಬ್ಬರೂ ಸೇರಿಯೆ ನೀರಲ್ಲಿ ದುಮುಕಿದ್ದೆವು. ಆ ಮೇಲೆ ಅವನನ್ನು ಎಲ್ಲಿಯೂ ಕಾಣಲೇ ಇಲ್ಲ, ಎಲ್ಲಿ ಹೋದ? ಸತ್ತರೂ ಅವನು ನನ್ನ ಕೈಸೇರಲ್ಲಿಲ್ಲವೇ? ನನಗೆ ಅವನ ಮೇಲೆ ಬಹಳ ಪ್ರೇಮವಿತ್ತು ನೋಡಿರಿ. ಅಲ್ಲರೀ ಯಾರು ನೀವು? ಅವನನ್ನು ತುಸು ಹುಡುಕಬಾರದೆ? ನನಗೆ ಹುಡುಕಲು ಬರುವದಿಲ್ಲವಲ್ಲ! ನಾಲ್ಕೂ ದಿಕ್ಕುಗಳಲ್ಲಿ ಇದೇನು ಕಗ್ಗತ್ತಲೆಯೋ–"

ತಡವರಿಸುತ್ತ ತಡವರಿಸುತ್ತ ಹೆಂಗಸು ಕತ್ತಲಲ್ಲಿ ಕಣ್ಮರೆಯಾದಳು ಕಣ್ಣುಗಳಲ್ಲಿ ಕುರುಡರ ಅರ್ಥ ಹೀನ ದೃಷ್ಟಿ.

ಬಾಯಿಗೆ ಕೈ ಅಡ್ಡ ಹಿಡಿದು ಕುಲುಕುಲು ನಗುವವರಾರವರು? ನೋಡಿದೆ, ಒಬ್ಬ ಆಢ್ಯಗೃಹಸ್ಥ. ನನ್ನನ್ನು ನಟ್ಟನೋಟದಿಂದ ನೋಡುತ್ತಿದ್ದ. ಮುಖದಲ್ಲಿ ರಕ್ತ ಛಾಯೆಯಿಲ್ಲ.

"ನಿಮ್ಮ ತಿಳುವಳಿಕೆ ತಪ್ಪು, ಡಾಕ್ಟರ್ ಸಾಹೇಬ. ಎಲ್ಲ ಆತ್ಮಹತ್ಯೆಗಳಿಗೆ ಪ್ರೇಮವೇ ಮೂಲವಾಗಿರುವದಿಲ್ಲ. ನಾನಂತೂ ಪ್ರೇಮದಲ್ಲಿ ಬಿದ್ದು ಸತ್ತವನಲ್ಲ. ಸ್ವಸಂತೋಷದಿಂದ ಸತ್ತಿದ್ದೇನೆ-ಸ್ವಾಧೀನ ಬುದ್ಧಿಯಿಂದ, ಸ್ವಸ್ಥದೇಹದಿಂದ. ಅಂದಾಕ್ಷಣ ನಾನೆಂದೂ ಪ್ರೇಮದಲ್ಲಿ ಬಿದ್ದಿಲ್ಲೆಂದು ಮಾತ್ರ ತಿಳಿಯಬೇಡಿರಿ. ಎಷ್ಟೋ ಸಲ ಬಿದ್ದದ್ದುಂಟು, ಎದ್ದದ್ದುಂಟು. ಆದರೂ ಆತ್ಮಹತ್ಯೆ ಮಾಡಿಕೊಳ್ಳುವ ಅವಶ್ಯಕತೆ ಒಮ್ಮೆಯೂ ಅನಿಸಿದ್ದಿಲ್ಲ."

ಹೀಗೆಂದು ಆ ಗೃಹಸ್ಥ ಬೆನ್ನಹಿಂದೆ ಕೈಗಳನ್ನು ತೊಡಕಿಸಿ ಸಿಳ್ಳು ಹಾಕುತ್ತ ಕೋಣೆಯಲ್ಲಿ ಶತಪಥ ಹಾಕತೊಡಗಿದ. ಆತ್ಮಹತ್ಯೆಯನ್ನುಂತೂ ಮಾಡಿ ಕೊಂಡಾಯಿತು. ಆದರೆ ಅದರ ನಂತರ ಜರಗಿದ್ದನ್ನೆಲ್ಲ ಸೇರಿಸಿ ಒಂದು ಕವಿತೆ ಕಟ್ಟಿದರೆ ಹೇಗಾದೀತು, ಎಂದು ಆತ ಚಿಂತಿಸುತ್ತಿದ್ದನೋ ಏನೋ!

ಸಾಹಸಾ ನನ್ನ ಹತ್ತಿರ ಬಂದು ಅವ ಹೇಳಿದ.

"ವ್ಯಥೆ, ಅಭಿಮಾನ, ಇದೊಂದೂ ಅಲ್ಲ ಡಾಕ್ಟರ್ ಸಾಹೇಬ್, ವಿದ್ರೋಹ. ಜೀವನದಲ್ಲಿ ಎಂದೂ ಸೋಲೊಪ್ಪಿಕೊಂಡವನಲ್ಲ ನಾನು. ಎಂ.ಎ. ತನಕ ಪ್ರತಿ ಯೊಂದು ಪರೀಕ್ಷೆಯಲ್ಲೂ ತಪ್ಪದೆ ಫಸ್ಟ್ ಬಂದಿದ್ದೆ. ಓದುಬರಹದಲ್ಲಿ ಮಾತ್ರವಲ್ಲ, ಆಟನೋಟದಲ್ಲಿಯೂ ಯಾವಾಗಲೂ ಫರ್ಸ್ಟ. ಪಗಡೆ ಆಟದಲ್ಲಿ ಸಹಿತ!"

ಗೃಹಸ್ಥ ಒಮ್ಮೆ ನನ್ನತ್ತ ಕಣ್ಣರಳಿಸಿ ನೋಡಿದ. ಮತ್ತೆ ಮುಂದುವರಿಸಿದ-

"ಪ್ರಣಯ ವ್ಯಾಪಾರದಲ್ಲಿಯೂ ಯಾವಾಗಲೂ ಗೆದ್ದವನೆ. ಹೊಟ್ಟೆಪಾಡಿ ಗಾಗಿ ಯಾರ ಮುಂದೆಯೂ ಕೈಯೊಡ್ಡುವ ಪ್ರಸಂಗ ಇದ್ದಿಲ್ಲ. ಹೇಳಿಕೇಳಿ ಬ್ರಹ್ಮಚಾರಿ, ಸುಖವಾಗಿಯೆ ಇದ್ದೆ. ಹಠಾತ್ತಾಗಿ ಒಂದು ದಿನ ಬೆಳಿಗ್ಗೆ ಎದ್ದು ನೋಡುತ್ತೇನೆ-ಏನು ಕಂಡೆ, ಹೇಳಿರಿ. ನೋಡೋಣ?"

ಕೌತುಕದಿಂದ ಕ್ಷಣಕಾಲ ನಿರೀಕ್ಷಿಸಿ ತಾನೆ ಹೇಳಿದನಾತ.

"ಇಲ್ಲ ಇಲ್ಲ, ಬ್ಯಾಂಕು ದಿವಾಳಿ ಏಳಲಿಲ್ಲ. ಬೆಳಿಗ್ಗೆ ಎದ್ದು ನೋಡಿದಾಗ ಒಮ್ಮೆಲೆ ಲಕ್ಷ್ಯಕ್ಕೆ ಬಂತು-ಕಿವಿಯ ಬಳಿ ಒಂದೆರಡು ಕೂದಲು ನರೆತಿವೆ. ಹಗಲೆಲ್ಲ ಮನಸು ತುಂಬ ಚಂಚಲವಾಗಿಯೆ ಇತ್ತು. ವರ್ತಮಾನ ಪತ್ರದಲ್ಲಿಯೂ ಮನಸು ಹಾಕಲು ಸಾಧ್ಯವಾಗಲಿಲ್ಲ. ಗೆಳೆಯರು ಬಂದರು ಆದರೆ ಹರಟೆ ಹೊಡೆಯಲು ಮನಸಾಗಲಿಲ್ಲ.

"ಹಗಲು ಹೇಗೋ ಕಳೆಯಿತು. ಆದರೆ ರಾತ್ರಿಯಾಗುತ್ತಲೆ. ಆ ಎರಡು ನರೆತ ಕೂದಲುಗಳು ಬಹಳ ಕಾಡಹತ್ತಿದವು. ಸ್ವಲ್ಪ ನಿದ್ರೆ ಹತ್ತಿದರೆ ಸಾಕು, ಆ

ಎರಡು ನರೆಗೂದಲುಗಳು ಬಂದು ಪಿಶಾಚಿಗಳಂತೆ ಎದುರಿಗೆ ನಿಲ್ಲುತ್ತಿದ್ದವು. 'ಎಲೆಲೇ ಭಾಗ್ಯವಂತರ ಮಗನೇ, ಈ ಸಲ ನಿನಗೂ ಬಂತು ಕಾಲ. ಈ ಸಲ ಸೋಲು ಒಪ್ಪಿಕೊಳ್ಳದೆ ಏನು ಮಾಡುವಿ? ಹಾಂ, ಇನ್ನು ತಡವಿಲ್ಲ,' ಎಂದು ಅವು ಅಣಕಿಸುವಂತೆ ತೋರುತ್ತಿತ್ತು. ನಿದ್ದೆ ಬರಲೇ ಇಲ್ಲ. ದಿನವೂ ಹೆಚ್ಚು ಕಡಿಮೆ ಇದೇ ಅವಸ್ಥೆ. ನಮ್ಮ ಪಕ್ಕದ ಮನೆಯಲ್ಲಿ ಒಬ್ಬ ಹಣ್ಣು ಮುದುಕ ಇದ್ದ. ಒಂದು ದಿನ ಆತ ಕನಸಿನಲ್ಲಿ ಕಾಣಿಸಿಕೊಂಡು ಹೇಳಿದ, 'ಹೇಗಾಯಿತೀಗ? ನನ್ನನ್ನು ನೋಡಿ, ಅಯ್ಯೋ ಪಾಪ ಅನ್ನುತಿದ್ದಿಯಲ್ಲೋ ಹುಡುಗಾ? ಈಗ? ಮುದುಕ ಹಂಗಿಸಿ ಹಂಗಿಸಿ ನಗುತ್ತಿದ್ದ.

ಗೃಹಸ್ಥ ಸುಮ್ಮನಾದ.

ಮುದುಕ ನಿಜವಾಗಿ ಕನಿಕರದ ವಸ್ತುವೇ ಆಗಿದ್ದ. ಬಾಯಲ್ಲಿ ಹಲ್ಲೊಂದೂ ಉಳಿದಿರಲಿಲ್ಲ. ಕಣ್ಣು ಕಾಣಿಸುತ್ತಿರಲಿಲ್ಲ. ಕೆಲಸಕ್ಕೆ ಬೀಳಬಹುದಾದ ಮಕ್ಕಳು, ಮರಿಗಳು ಬಂಧುಬಳಗದವರೆಲ್ಲ ಒಬ್ಬೊಬ್ಬರಾಗಿ ಕಣ್ಮುಂದೆ ಸತ್ತು ಹೋಗಿದ್ದರು. ಮುದುಕನೊಬ್ಬನಿಗೆ ಮಾತ್ರ ಸಾವು ಬರಲಿಲ್ಲ. ಕಾಲ ಆತನನ್ನು ಹಿಡಿದು ಚಾಟಿಬೀಸುತಿದ್ದನೇನೋ.

"ನನಗೂ ಅನಿಸಿತು, ಇನ್ನೇನು ನಮಗೂ ಬಂದಿದೆ ನೋಟೀಸು, ಒಂದು ದಿನ ಬಂದು ಮುಂದಲೆಗೆ ಕೈಕೊಡುವದು. ಸರಿ, ಆಮೇಲೆ ಪ್ರಾರಂಭ ಎಳೆದಾಟಕ್ಕೆ. ಒಂದು ಕಡೆ ಆತ್ಮೀಯ ಸ್ವಜನ ಬಂಧುಗಳು, ಇನ್ನೊಂದೆಡೆ ಯಮದೂತರು. ಈ ಎಳೆದಾಟದ ನಡುವೆ ಧಾರುಣ ಯಾತನೆಯಲ್ಲಿ ನಮ್ಮ ಜೀವ ಹೋಗಬೇಕು. ಅಸಹ್ಯ! ಅದರ ಕಲ್ಪನೆಯೂ ಅಸಹ್ಯ! ಕೊನೆಗಾಲದಲ್ಲಿ ಮುಪ್ಪಿನ ಮುಂದೆ ಸೋಲೊಪ್ಪಿಕೊಳ್ಳಬೇಕೆ? ಯಾಕೆ ಒಪ್ಪಿಕೊಳ್ಳಬೇಕು, ಹತ್ತಿರ ರಿವಾಲ್ವರ ಇರುವಾಗ?..... ನಾನು ಮಾಡಿದ್ದು ಸರಿಯಾಯಿತು, ಅಲ್ಲ?" ಆತ ಹಸನ್ಮುಖದಿಂದ ಕೇಳಿದ.

"ಹಣೆಗೆ ಗುಂಡಿಕ್ಕಿಕೊಳ್ಳಲಿಲ್ಲ. ಕಾರಣ ಇಷ್ಟೆ. ಇಂಥಾ ನನ್ನ ಸುಂದರ ಮುಖದ ಲಕ್ಷಣವನ್ನು ಹೀಗೆ ಕೆಡಿಸಿಕೊಳ್ಳಲು ಕೈ ಒರಲಿಲ್ಲ. ಒಳ್ಳೇದು ಡಾಕ್ಟರ್, ನನ್ನ ಮುಖಲಕ್ಷಣ ಚೆನ್ನಾಗಿದೆ ತಾನೆ?"

ಗೃಹಸ್ಥ ನಗುಮೊಗದಿಂದ ತಲೆಯೆತ್ತಿ ನಿಂತ. ಆಮೇಲೆ ಕೋಟಿನ ಬಿರಡಿಗಳನ್ನು ಒಂದೊಂದಾಗಿ ತೆಗೆದು ಎರಡೂ ಕೈಗಳಿಂದ ಕೋಟಿನ ಎದೆ ಬಿಚ್ಚಿ ಹೇಳಿದ.

"ಇಲ್ಲಿ ನೋಡಿರಿ, ಎದೆಗೆ ಎಂಥ ಹೊಡೆತ ಕೊಟ್ಟಿದ್ದೇನೆ!"

ನೋಡಿದೆ, ಎದೆಯಲ್ಲಿ ಸರಿಯಾಗಿ ಗುಂಡಿಗೆಯ ಮೇಲೆ ತೀಕ್ಷ್ಣವಾದ ಗಾಯ. ಆ ಗಾಯವೂ ನಗುತ್ತಿರುವಂತೆ ತೋರಿತು.

ಗೃಹಸ್ಥ ಕೋಟಿನ ಬಿರಡಿಗಳನ್ನು ಪುನಃ ಸಿಗಿಸುತ್ತ ಹೇಳಿದ. "ಆದರೆ ನಾನು ಇಷ್ಟು ಸಹಜವಾಗಿ ಸಾಯಬೇಕಾದರೆ, ನನ್ನನ್ನು ಈ ಪ್ರಪಂಚದಲ್ಲಿ ಕಟ್ಟಿ ಹಾಕುವವರಾರೂ ಇಲ್ಲದ್ದೇ ಕಾರಣವಾಗಿರಬಹುದು. ತಂದೆ-ತಾಯಿಗಳು ಚಿಕ್ಕಂದಿನಲ್ಲೆ ತೀರಿ ಹೋಗಿದ್ದರು. ಸುಖದ ಪಾರಿವಾಳಗಳಂತೆ ಕೆಲ ಬಂಧು ಮಿತ್ರರು ಸುತ್ತಲೂ ಮೆರೆದು ಚಿಲಿಪಿಲಿಗುಟ್ಟುತ್ತಿದ್ದರಾದೀತು. ಆದರೆ ಮುಪ್ಪಿನ ಚಿತ್ರಹಿಂಸೆಯನ್ನು ಸಹಿಸಲು ಸಿದ್ಧನಾಗಿ ಮಾಡುವಷ್ಟು ಆ ಬಂಧನಗಳು ಪ್ರಬಲವಾಗಿರಲಿಲ್ಲ."

ಹೀಗೆಂದು ಆ ಗೃಹಸ್ಥ ಎವೆಯಿಕ್ಕದೆ ನೋಡುತ್ತ ಕೆಲಹೊತ್ತು ನಿಂತಿದ್ದ. ಅವನ ಮೋರೆಯ ಮೇಲಿಂದ ನಗೆ ಮಾಯವಾಗಿ ಗಾಂಭೀರ್ಯ ಒಡ ಮೂಡಿತ್ತು. "ಅದೇ ಹೇಳಿದೆ, ನಿಮ್ಮ ತಪ್ಪು ತಿಳುವಳಿಕೆ ಎಂದು. ಎಲ್ಲ ಸಾವಿಗೂ ಪ್ರೇಮವೇ ಕಾರಣವಾಗಿರುವುದಿಲ್ಲ. ಪ್ರೇಮದ ಅಭಾವವೂ ಕಾರಣವಾಗಿರಬಲ್ಲದು. ಜೀವನದಲ್ಲಿ ನನಗೆ ಯಾವ ಬಂಧನಗಳೂ ಇದ್ದಿಲ್ಲ. ಅದರಿಂದಲೇ ಇಷ್ಟು ಸಹಜವಾಗಿ ಸಾಯಲು ಸಾಧ್ಯವಾಯಿತು."

ಆಢ್ಯ ಗೃಹಸ್ಥ ಪುನಃ ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡಿದ. ಅವನ ಕಣ್ಣುಗಳಲ್ಲಿ ಅದೇನು ತಳ ತಳ? ಕಣ್ಣೀರಲ್ಲವೆ? ಸರಿಯಾಗಿ ನೋಡುವ ಮೊದಲೇ ಛಾಯಾ ವಿಗ್ರಹ ಅಂತರ್ಧಾನವಾಗಿ ಹೋಗಿತ್ತು.

ಮುಖ ಹೊರಳಿಸಿ ನೋಡುತ್ತೇನೆ, ಕ್ಯಾಲಂಡರ ಹುಡುಗಿ ನಗುತ್ತಿದ್ದಾಳೆ.

ಕಿಡಿಕಿಯಿಂದ ಹೊರಗೆ ನೋಡುತ್ತ ಕುಳಿತೆ.

ಆಕಾಶದ ರೂಪ ಮತ್ತೊಮ್ಮೆ ಬದಲಾಗಿದೆ. ರಾಶಿಗೂಡಿದ ಮೋಡಗಳನ್ನು ಬಗಿದು ಪುನಃ ಚಂದ್ರ ಹಣಕುತ್ತಿದ್ದಾನೆ. ಒಂದು ಪ್ರಕಾಂಡ ಕಾಳಮೇಘ ನಾಲ್ಕು ತುಣುಕಾಗಿ ಒಡೆದು ಹರಿಹಂಚಾಗಿದೆ. ಅದರ ಸಂದಿಯೊಳಗಿಂದ ನಿರರ್ಗಳ ಧಾರೆಯಲ್ಲಿ ಬೆಳದಿಂಗಳು ಕರೆದಿದೆ.

ಸೃಷ್ಟಿಯೊಳಗೆಲ್ಲ ಬೆಳಕು ಕತ್ತಲೆಗಳ ಈ ಚಿರಂತನ ಲೀಲೆ ಮೈವೆತ್ತಿದೆ. ಸೃಷ್ಟಿಯ ಪ್ರಾರಂಭದಿಂದಲೂ ಇದೆ. ಅವಸಾನ ಪರ್ಯಂತವೂ ಉಳಿಯುವದು. ಬಿಸಿಲಲ್ಲಿ, ತಿಂಗಳ ಬೆಳಕಿನಲ್ಲಿ, ಕಾಮನಬಿಲ್ಲಿನಲ್ಲಿ, ಬಣ್ಣ ಬಣ್ಣದ ಮೇಘಮಾಲೆ

ಯಲ್ಲಿ, ಋತುಮಾನದಲ್ಲಿ, ಬೆಳಕು ನೆಳಲುಗಳ ಮಿಥುನರೂಪವಿದು, ನಾನಾ ವೇಷಗಳಲ್ಲಿ ಮೆರೆಯುತ್ತಿದೆ. ಇವುಗಳ ವಿರಹ ಮಿಲನಗಳು ಅನವದ್ಯ ಪ್ರಕಾಶ ದಿಂದ ಪ್ರಪಂಚವೆಲ್ಲ ರಂಜಿಸುತಿದೆ.

ಕತ್ತಲೆಯ ಕುರುಹಿಲ್ಲದ ಬೆಳ್ಳಂಬೆಳಕು ದೀರ್ಘವಾದ ಹಗಲಿನ ಬಿಸಿಲ ಜಳಕ್ಕೆ ಬಳಲಿ ಸ್ನಿಗ್ಧ ಅಂಧಕಾರವನ್ನು ಬಯಸುತ್ತಿದೆ. ಹಗಲಿನ ಈ ಬಯಕೆಯೆ ರೂಪುವೆತ್ತು ಘನಕೃಷ್ಣ ಮೇಘಮಾಲೆಯಾಗಿ, ಗಂಭೀರ ಜಲರಾಶಿಯ ನೀಲಚ್ಛವಿ ಯಾಗಿ, ಅರಣ್ಯದ ಛಾಯಾಮಯ ಸಾಂದ್ರತೆಯಾಗಿ ಕಾಣಿಸಿಕೊಳ್ಳುವದು. ಬೆಳಕು ಕಾಣದೆ ಗಾಢ ಅಂಧಕಾರವು ನಿರ್ಜನರಾತ್ರಿಯಲ್ಲಿ ಪ್ರಕಾಶದ ಶುಭ್ರಮೂರ್ತಿಯನ್ನು ಧ್ಯಾನಿಸುತ್ತಿರುವದು. ಕತ್ತಲೆಯ ಈ ಬಯಕೆ ಮೈಗೊಂಡಿದೆ ಲಕ್ಷ ನಕ್ಷತ್ರಗಳಲ್ಲಿ, ಬೆಳದಿಂಗಳ ಸ್ನಿಗ್ಧ ಆವೇಶದಲ್ಲಿ, ಅಸೀಮ ಧವಲ ಆಕಾಶಗಂಗೆಯಲ್ಲಿ.

ಹಠಾತ್ತಾಗಿ ಆಕಾಶದ ಶರೀರದಲ್ಲಿ ಕವಿಯ ಮುಖ ಒಡೆದು ಮೂಡಿದಂತೆ ತೋರಿತು. ಆ ವಿದೀರ್ಣ ಮೇಘವೇ ಆತನ ಒಡೆದ ಹಣೆಯೇನೊ, ಆ ಜ್ಯೋತ್ಸ್ನಾ ಧಾರೆಯೆ ಅವನ ಹೊರಬಿದ್ದ ಮಿದುಳ ಮಾಲೆಯೇನೋ, ಎನಿಸಿತು. ಆಕಾಶವನ್ನೂ ಅಂಧಕಾರವನ್ನೂ ತುಂಬಿ ಕವಿಯ ಸ್ವರ ಪ್ರತಿಧ್ವನಿತವಾಯಿತು.

ಗಂಭೀರ ವಿರಹದೊಡಲಲ್ಲಿ
ಇರುವುದೆನಿತು ಮಾಧುರಿ,
ಈಡೇರಿದ–ಏರದೆನಿತು ಕೋರಿಕೆ!
ಎನಿತು ಸತ್ಯ, ಎನಿತು ಭ್ರಾಂತಿ
ಎನಿತು ದಾಹ, ಎನಿತು ಶಾಂತಿ,
ಕಡು ಹರುಷ ವಿಷಾದಗಳ ಏರಿಕೆ!
ಆರರಿವನೊ ಇದರ ಬೆಲೆ?
ಆವೊಡವೆಯೋ ಇದಕೆ ದೊರೆ?
ನಾನರಿಯೆನು–ಅರುಹಲೊಲ್ಲೆನು!
ಬೇಡವೆನಗೆ ಯಾರೊಬ್ಬರ
ಸಂತೈಕೆಯ ನುಡಿಯಾಸರ–
ಈ ಕಂಬನಿ ಒರಸಲೊಲ್ಲೆನು!
ಸಕಲ ಚೇತನದಲಿ ತೀವಿ

ಒಡಲ ವೇದನೆಯನೆ ಓವಿ
ಸ್ನೇಹದೆ ಸಾಕುವೆನು ಲಾಲಿಸಿ,
ಮನದೊಲಮೆಯ ಈ ನೋವು
ಮನದೊಳೆ ಮಾಡಲಿ ಠಾವು,
ತೊಡೆಯಲಾರೆನದನು ನೀಗಿಸಿ."

ಆಕಸ್ಮಾತ್ತಾಗಿ ಗಾಳಿಯ ವೇಗ ಹೆಚ್ಚಿತು.

ಭಾರೀ ಭಾರೀ ಮೋಡಗಳು ನಾಲ್ಕೂ ಕಡೆಗಳಿಂದ ದಾನವರಂತೆ ಏರಿ ಬಂದು ಮುಗಿಬಿದ್ದವು. ಸೊಂಯ್..... ಸೊಂಯ್.....ಸೊಂಯ್.....ಸೊಂಯ್..... ಕತ್ತಲ ಗರ್ಭದಿಂದ ಲಕ್ಷೋಪಲಕ್ಷ ಕಾಳಸರ್ಪಗಳು ಹೆಡೆಯೆತ್ತಿದ್ದವು.... ಚಂದ್ರ ಮರೆಯಾದ. ಕವಿಯೂ ಅವನ ಕವಿತೆಯೂ ಎಲ್ಲಿ ಹಾರಿಹೋದವೋ ಏನೊ. ಮದವೇರಿದ ಬಿರುಗಾಳಿ ಕೋಣೆಯನ್ನು ಹೊಕ್ಕು ತಾಂಡವನ್ನೇ ಪ್ರಾರಂಭಿಸಿತು... ಕ್ಯಾಲಂಡರಿನ ಮೊಗದಲ್ಲಿ ಆ ಮೆಲು ನಗೆ ಈಗಿಲ್ಲ.

ಅವಳು ಭೀತಿಯಿಂದ ಥರಥರ ನಡುಗುತ್ತಿದ್ದಳು.

ಕತ್ತಲನ್ನೆಲ್ಲ ಕಲಕಿ ಒಂದು ಕ್ರಂದನ ಕೇಳಬಂತು.

"ಡಾಕ್ಟರ್ ಸಾಹೇಬ, ಆ ಹುಡುಗ ಪುನಃ ಬಂದಿದ್ದನೆ?"

ಸುಂದರಿಯಾದ ಸೂಳೆ ಮತ್ತೆ ಬಂದಿದ್ದಳು. ಜೀವನದಲ್ಲಿ ಯಾರನ್ನೂ ಪ್ರೀತಿಸುವದು ಸಾಧ್ಯವಾಗಿಲ್ಲೆಂದು ಅವಳು ಕೊರಳಿಗೆ ಉರುಲು ಹಾಕಿ ಕೊಂಡಿದ್ದಳು.

ನಿಜವಾಗಿಯೂ ಅಪೂರ್ವ ಸುಂದರಿ. ಮರಣವೂ ಅವಳ ಸೌಂದರ್ಯ ವನ್ನು ಮಲಿನಗೊಳಿಸಿರಲಿಲ್ಲ.

ಸ್ವಲ್ಪ ಅತ್ತಿತ್ತ ನೋಡಿ ಅವಳು ಕೇಳಿದಳು, "ಆ ಬಾಂಬು ತಯಾರಿಸುವ ಹುಡುಗ ಆಮೇಲೆ ಬಂದಿದ್ದನೆ?"

"ನಿನಗೇಕೆ?"

ಅವಳ ಎರಡೂ ತುಟಿಗಳು ಕಂಪಿಸುತ್ತಿದ್ದುದನ್ನು ಕಂಡೆ.

"ಹಾಸ್ಯ ಮಾಡುತ್ತೀರಿ, ಅಲ್ಲ?"

"ಇಲ್ಲ."

"ನೋಡಿರಿ, ನನ್ನ ಜೀವನವೆಲ್ಲ ತೃಷೆಯಿಂದ ತುಂಬಿಹೋಗಿದೆ. ಇಡಿ ಜೀವಮಾನದಲ್ಲಿ ಒಂದೇ ಒಂದು ಹನಿಯಾದರೂ ಕಣ್ಣಿಗೆ ಬೀಳಲಿಲ್ಲ. ಎಲ್ಲಿ ಹೋದರೂ ಚರಂಡಿಗಳೇ ಚರಂಡಿಗಳು- ಹೊಲಸು ನಾರುವ ನೀರು. ನೀರಡಿಕೆ ತಾಳಲಾರದೆ ಅದನ್ನೆ ಗುಟುಕರಿಸುತ್ತಿದ್ದೆ. ಆದರೂ ಸಾವು ಬರಲಿಲ್ಲ. ಸಾಯ ಬೇಕಾದರೆ ಕಡೆಗೂ ಹಗ್ಗವೇ ಬೇಕಾಯಿತು. ಆದರೆ ಸತ್ತರೂ ನೀರಡಿಕೆ ಹಿಂಗಿತೆ? ಇಲ್ಲ. ಸ್ವಲ್ಪವೂ ಕಡಿಮೆಯಾಗಿಲ್ಲ. ಒಂದು ಬಿಂದು ನೀರಿಗಾಗಿ ರೋಮ ರೋಮವೂ ಹಾತೊರೆಯುತಿದೆ. ಆಗ ಆ ಕವಿಯನ್ನು ಹಾಸ್ಯ ಮಾಡಿದ್ದೇನೋ ಸರಿ. ಆದರೆ ಅವನು ನಿಜವನ್ನೆ ನುಡಿದಿದ್ದ. ಜೀವನದಲ್ಲಿ ಪ್ರೇಮೋದಯ ವಾಯಿತೆಂದರೆ ಕ್ಷುದ್ರ ಜಲಾಶಯವೂ ಮಹಾ ಸಾಗರವಾದೀತು. ಕಬ್ಬಿಣವೂ ಚಿನ್ನವಾದೀತು, ಆದ ನಮ್ಮ ಹತ್ತಿರ ಬಂದಿದ್ದನಲ್ಲ, ಆ ಹುಡುಗ ಎಲ್ಲಿಹೋದ? ಆಹಾ ನಿಜವಾಗಿ ಆತ ಕಾರಂಜಿಯಂತಿದ್ದ ಇದೇನು? ಯಾರವನು? ಸತ್ತಮೇಲೂ ಈ ಜನರು ನನ್ನನ್ನು ಬೆನ್ನಟ್ಟಿ ಬರಬೇಕೆ? ಈಗಲೂ ಸುಟ್ಟ ಮೂತಿಯವರು ಬೆನ್ನು ಬಿಡಬಾರದೆ?"

ರಮಣಿ ಅದೃಶ್ಯಳಾದಳು.

ಎದುರಿಗೆ ಜೋಲಿ ಹೊಡೆಯುತ್ತ ಬಂದು ನಿಂತಿದ್ದಾನೆ. ಇನ್ನಾರೋ ಒಬ್ಬ.

ಎತ್ತರವಾದ ಕೃಶ ದೇಹ. ದವಡೆಯ ಎಲುಬು ಅಸಾಧ್ಯ ಎತ್ತರ. ಕಿಸುಗಾರ ಹೂವಿನಂತೆ ಕೆಂಪಾದ ಕಣ್ಣುಗಳಿಂದ ನನ್ನ ಕಡೆ ನೋಡುತ್ತಿದ್ದ ತೊದಲುತ್ತ ತೊದಲುತ್ತ ಹೇಳತೊಡಗಿದನಾತ;

"ಡಾಕ್ಟರ್, ನನ್ನ ಹೊಟ್ಟೆ ಸೀಳಿ ಏನೇನು ಸರಕು ಹೊರತೆಗೆದಿರಿ ಹೇಳಿರಿ? ಆದಿನ ನಾನು ಕುಡಿದಿದ್ದು ಅಪ್ಪಟ ಸಚ್ಚಾ ಮಾಲು ನೋಡಿರಿ! ಎರಡು ಬಾಟ್ಲಿ ನೀರು ಸೋಕದ ವಿಸ್ಕಿ. ಅದೂ ಬೇರೊಬ್ಬರ ರೊಕ್ಕದಿಂದ. ದೇವರಾಣೆ ಹೇಳುತ್ತೇನೆ_"

ಮನುಷ್ಯ ಪುನಃ ಜೋಲಿ ಹೊಡೆಯತೊಡಗಿದ. ಹೇಳಿದ;

"ಮಂದಿಯ ರೊಕ್ಕದಿಂದ ಪಂಥಕಟ್ಟಿ ಕುಡಿದಿದ್ದೆ. ಡಾಕ್ಟರ್ ಗಂಟಲು ಸುಟ್ಟು ಬೂದಿಯಾಗಿ ಹೋಯಿತು. ದೇವರಾಣೆ ಹೇಳುತ್ತೇನೆ ಕುಡಿದೂ ಕುಡಿದೂ ಮತ್ತೇರಿ ಒರಗಿಬಿಟ್ಟೆ-ಸುಳ್ಳು ಹೇಳಿದರೆ ಹಾಳಾಗಿ ಪೋಃದೇನು-ಏಕ್‌ದಮ್ ಬೇಹೋಶ್!"

ಮತ್ತೆ ತುಸು ಹೊತ್ತು ಜೋಲಿ ಹೊಡೆದು ಪ್ರಾರಂಭಿಸಿದ.

"ಮಂದಿಯ ರೊಕ್ಕದಿಂದ ಕುಡಿದೆ ನೋಡ್ರಿ-ದೇವರಾಣಿ! ಅಲ್ಲಾ ಸ್ವಂತ ಹಣ ಇದ್ದರೆ ತಾನೇ? ಜೇಬು ಯಾವಾಗ ನೋಡಿದರು ಬಟ್ಟಂಬರೀದು. ಒಬ್ಬ ಜಮೀನದಾರ ಪುತ್ರ ಕ್ಯಾಪ್ಪನನ್ನ ಬೋನಿಗೆ ಹಾಕಿಕೊಂಡಿದ್ದೆ. ಆ ಬಡ್ಡಿಮಗನ ಹತ್ತಿರ ಜಿದ್ದು ಕಟ್ಟಿ, ಅವನ ರೊಕ್ಕದಿಂದಲೇ ಇಷ್ಟೇಲ್ಲ ಧಾಂದಲೆ! ದೇವರಾಣೆ-ಸುಳ್ಳಲ್ಲ. ಒಂದು ಗಡದ್ದು ನಿದ್ದೆ ಆಯಿತೆಂದರೆ ಎಲ್ಲ ಸರಿಹೋಗುವದೆಂತ ತಿಳಿದಿದ್ದೆ. ಆದರೆ ಈಗ ನೋಡಲಿಕ್ಕಾಗಿ, ಎಲ್ಲ ಚೌಪಟ್! ಸತ್ತೇ ಹೊದೆ. ಜೀವಮಾನದಲ್ಲಿ ಇಂಥ ದಡ್ಡತನ ಎಂದೂ ಮಾಡಿಲ್ಲ. ದೇವರಾಣೆ ಹೇಳುತ್ತೇನೆ. ಅಲ್ಲರೀ, ಇದೇ ಈಗ ಆ ನಮ್ಮ ಬಿಂದೀ ದನಿ ಕೇಳಿಸಿದ ಹಾಗಾಯಿತಲ್ಲಾ? ಆ ಬಿಂದೀಬಾಯೀದು? ಅವಳ ಗುರುತಿದೆಯೇನು ನಿಮಗೆ? ನಿಜ ಹೆಸರು ವಿನೋದಿನಿ ಅಂತ ಕಾಣುತ್ತೆ ಎಂಥ ನಾಚು ಮಾಡುತ್ತಿದ್ದಳು ಅಂತೀರಿ! ಹುಡುಗಿಯ ಟೊಂಕ ಬಳುಕುವ ಮಜಾ ನೋಡಬೇಕಿತ್ತು ನೀವು! ಏಕ್‌ದಮ್ ರಂಭೆ! ಒಂದು ಚೀಜ್ ಹಾಡಿದಳು ಅಂದರೆ – ದೇವರಾಣೆ!"

ಅವನು ಇನ್ನೂ ಏನೇನೋ ಹರಟಿದ. ಕಣ್ಣೆರಡೂ ಬಾಡಿ ರೆಪ್ಪೆಗಳು ಮುಚ್ಚಿಕೊಳ್ಳಲಾರಂಭಿಸಿದವು. ಪ್ರಯತ್ನ ಪೂರ್ವಕ ಕಣ್ಣು ತೆರೆದು ಕೇಳಿದ ನಾತ. "ಅದು ಹೋಗಲಿ ಡಾಕ್ಟರ್, ಇಲ್ಲಿ ಎಲ್ಲಾದರೂ ಬ್ರಾಂಡಿ ಅಂಗಡಿ ಇದೆಯೆ? ಇಲ್ಲದಿದ್ದರೆ ಸೆರೆಯ ಅಂಗಡಿ? ಅದೂ ಇಲ್ಲದಿದ್ದರೆ ಕಡೆಗೆ ಹೆಂಡದ ಗಡಂಗಾದರೂ ಚಿಂತಿಲ್ಲ. ಒಂದಿಷ್ಟು ಹಾಕದಿದ್ದರೆ ಮನಸೇ ಸ್ವಸ್ಥ ನಿಲ್ಲುವದಿಲ್ಲ. ಹೇಗೋ ಹೇಗೋ ಆಗುತ್ತದೆ. ದೇವರಾಣಿ – ನಿಮ್ಮಾಣೆ!"

ಜೋಲಿ ಹೊಡೆಯುತ್ತ ಹೊಡೆಯುತ್ತ ಅವನು ಹೊರಟು ಹೋದ.

ನಿದ್ದೆಗೇಡಿಯಾಗಿ ಒಬ್ಬನೆ ಕುಳಿತಿದ್ದೆ.

ಮನಸಿನಲ್ಲಿ ನಾನಾ ವಿಚಾರಗಳು.

ಅಲ್ಲ, ಬದುಕಿದ್ದೇನೆ; ಅದರಿಂದಲೇ ಬದುಕಿ ಬಾಳುವದರ ಅರ್ಥವನ್ನು ಗ್ರಹಿಸಲಾರದವನಾಗಿದ್ದೇನೆ. ಮೃತ್ಯುವಿನೊಡನೆ ದಿನನಿತ್ಯ ಭೆಟ್ಟಿಯಾಗುತ್ತದೆ. ಆ ಮೃತ್ಯುವಿನ ಗುರುತಾದರೂ ಹತ್ತುತ್ತದೆಯೆ ನನಗೆ? ನಿತ್ಯ ಅವನನ್ನು ಎಷ್ಟೆಷ್ಟು ರೂಪಗಳಲ್ಲಿ ಕಾಣುತ್ತೇನೆ? ಎಷ್ಟು ತಾಯಂದಿರ ಪಕ್ಕವನ್ನು ಬರಿದು ಮಾಡಿ, ಅರಳಲಾದ ಹೂಗಳಂಥ ಮಕ್ಕಳನ್ನು ಚಿವುಟಿ ಹರಿದೊಯ್ಯುತ್ತಾನೆ! ಆಸೆ, ಆಕಾಂಕ್ಷೆ, ಪ್ರಯತ್ನ ಸಾಹಸಗಳಲ್ಲಿ ಉದ್ಯುಕ್ತವಾದ ಎಷ್ಟು ಹುರುಪಿನ ಜೀವಗಳನ್ನು ಅಕಾಲದಲ್ಲಿ ಕೊನೆಗಾಣಿಸುತ್ತಾನೆ! ಎಷ್ಟು ಕನಸುಗಳನ್ನು ಪುಡಿ ಪುಡಿ ಮಾಡುತ್ತಾನೆ! ಎಷ್ಟು ನಳನಳಿಸುವ ಬಯಕೆ ತೋಟಗಳನ್ನು ಬಾಡಿಸಿ ಒಣಗಿಸಿ

ಬಿಡುತ್ತಾನೆ! ಆತ ನಿರ್ಮಮ ನಿರ್ದಯ ಹಸ್ತದಿಂದ ಹಿಂದೆ ಮುಂದೆ ನೋಡದೆ ಸಂಹಾರ ಲೀಲೆಯಲ್ಲಿ ಮಗ್ನನಾಗಿರುತ್ತಾನೆ.

ಅದೇ ಇನ್ನೊಂದೆಡೆ ನೋಡಿದರೆ ಮೃತ್ಯುವಿನ ಬೇರೊಂದು ರೂಪವನ್ನು ಕಾಣುತ್ತೇವೆ. ಅದು ದಯಾಮಯ. ಅನ್ನವಿಲ್ಲದೆ ಕಂಗೆಟ್ಟ ಶಾಪಗ್ರಸ್ತ ಜೀವನದ ಎಲ್ಲ ದಾಹವನ್ನು ಅವನು ಮುಹೂರ್ತಮಾತ್ರದಲ್ಲಿ ತಣಿಸಿಬಿಡುವ. ಮುಪ್ಪು ಮೀರಿ ಚರ್ಮ ಜೋಲುಬಿದ್ದ ಮುದುಕನ ಸಮಸ್ತ ಅಶಾಂತಿಗೆ ವಿಶ್ರಾಮ ಕೊಡುವ. ಜೀವನದ ಸಕಲ ಅಪಮಾನ, ಎಲ್ಲ ಲಜ್ಜೆ, ಸರ್ವ ಕಲಂಕ, ಸರ್ವ ಶೋಕ, ಸರ್ವದುಃಖಗಳ ಮೇಲೆ ತನ್ನ ಸಿಗ್ಧ ಅಂಧಕಾರದ ತೆರೆಯನ್ನು ಎಳೆದು ಬಿಡುವ, ಮಹಾಮುಕ್ತಿಮಯವಾದ ಮರವೆಯ ರಾಜ್ಯದಲ್ಲಿ ಕರೆದೊಯ್ಯುವ....

ಕಥೆಯಲ್ಲಿ ತಿರುಗಿ ಮನಸು ತೊಡಗಿಸಿದೆ.

"ನದಿಯ ಆಚೆಯ ದಡದ ಏರು ದಾಟಿ ಅವರಿಬ್ಬರೂ ವಿಸ್ತಾರವಾದ ಒಂದು ಜವಳು ಬಯಲಿಗೆ ಬಂದರು. ಅದರ ನೀರು ಹಿಮದಂತೆ ಕೂಡಿತ್ತು. ಅದನ್ನು ದಾಟಿಯೇ ಅತ್ತ ಹೋಗಬೇಕು. ಹುಡುಗಿಯ ಕಣ್ಣಲ್ಲಿ ಏನೋ ಒಂದು ಅನಿರ್ಧಾರದ ಛಾಯೆ ಮೂಡಿತು. ದಾರಿಯನ್ನು ಗುರುತಿಸಲು ಅವಳಿಂದಾಗ ಲಿಲ್ಲವೋ ಏನೋ. ಈ ಜವಳು ಭೂಮಿಯಲ್ಲಿ ದಾರಿ ತಪ್ಪಿದರೇನು ಗತಿ?

"ಒಮ್ಮಿಂದೊಮ್ಮೆ ಅವಳು ಎದುರಿಗೆ ದೂರ ಬೊಟ್ಟು ಮಾಡಿ 'ರಗ' ಎಂದು ನುಡಿದಳು. ನೋಡಿದರೆ ದೂರ ದಿಗಂತದಲ್ಲಿ ಮೋಡದಂಥ ಏನೋ ಒಂದು ಅವರ ಕಡೆ ಸಾಗಿಬರುತ್ತಿತ್ತು.

ತುಸು ಹೊತ್ತಿನಲ್ಲೆ ಅದು ಹಿಮರಾಶಿಯೆಂದು ಸ್ಪಷ್ಟವಾಯಿತು. ನಿಮಿಷಾರ್ಧದಲ್ಲಿ ಅವರನ್ನು ಮಂಜು ಸುತ್ತುವರಿಯಿತು. ಇಬ್ಬರೂ ಇಬ್ಬರ ಕೈಗಳನ್ನು ಬಿಗಿಯಾಗಿ ಹಿಡಿದುಕೊಂಡು ನಿಂತಿದ್ದಾರೆ–ಹಿಂದುಗಡೆ ಒಬ್ಬರಿಗೊಬ್ಬರು ಕಾಣದಂತಾದರೆ!

"ಮೊಣಕಾಲವರೆಗೆ ಮಂಜು ಕರಗಿದ ನೀರು."

"ನಾಲ್ಕೂ ಕಡೆ ದಟ್ಟವಾದ ಮಂಜು."

"ದಾರಿ ತಪ್ಪಿ ಹೋಗಿತ್ತು."

"ನಿಜವಾದ ದಾರಿಯನ್ನು ನೀವಾದರು ಕಂಡಿದ್ದೀರಾ?"

ವಿಷದ ಹಣ್ಣು ತಿಂದು ಆತ್ಮಹತ್ಯೆ ಮಾಡಿಕೊಂಡಿದ್ದ ಗೃಹಸ್ಥ ಮತ್ತೆ

ಕಾಣಿಸಿಕೊಂಡಿದ್ದ. ಅವನ ಮೂಗು ಇನ್ನಷ್ಟು ಮೇಲ್ಮೊಗವಾಗಿತ್ತು. ಗುಳಿ ಸಾರಿದ ಕಣ್ಣುಗಳು ಇನ್ನಷ್ಟು ಪ್ರಖರವಾಗಿದ್ದವು.

"ಹಣವೊಂದಿದ್ದರೆ ದಾರಿ ತಪ್ಪದು. ಜೀವನವಂತೆ, ಮರಣವಂತೆ! ಮಂಜಂತೆ, ನೀರಂತೆ ಹಿಮಗಡ್ಡೆಯಂತೆ!... ಒಮ್ಮೆ ನೀರು ತಣಿದು ಹಿಮಗಡ್ಡೆಯಾಗುತ್ತದೆ. ಇನ್ನೊಮ್ಮೆ ಹಿಮ ಕರಗಿ ನೀರಾಗುತ್ತದೆ. ಅದರಲ್ಲೇನಿದೆ? ಮುಖ್ಯ ಬೇಕಾದ್ದು ಹಣ! ಹಣವಿದ್ದರೆ ಸಾವೂ ಸಹ್ಯವಾದೀತು, ಅದಿಲ್ಲದಿದ್ದರೆ ಜೀವನವೇ ಅಸಹ್ಯ!"

ವಿಕಟವಾದ ನಗೆಯೊಂದನ್ನು ನಕ್ಕು ಆ ಗೃಹಸ್ತ ನಿರರ್ಗಳವಾಗಿ ಬಡಬಡಿಸಹತ್ತಿದ.

"ಹಣವೇ ಸರ್ವಸ್ವ. ಇನ್ನೊಂದು ಜನ್ಮದಲ್ಲಿ ಹೇಗಾದರೂ ಮಾಡಿ ಹಣವಂತನಾಗಿ ಹುಟ್ಟಬೇಕು. ಆ ಮಗ ಇದ್ದಾನಲ್ಲ ನಿರ್ಮಲ, ಅವನನ್ನು ಗೊತ್ತಿಗೆ ಹಚ್ಚಬೇಕು. ಅವನಿಗೆ ಕೊಡಬೇಕಾದ ಶಿಕ್ಷೆಯನ್ನೂ ಈಗಲೇ ನಿರ್ಧರಿಸಿಟ್ಟಿದ್ದೇನೆ. ಏನು ಮಾಡುವೆ ಗೊತ್ತೆ? ಅವನನ್ನು ಹೆಡಮುರಿಗೆ ಕಟ್ಟಿ, ಕೆಡವಿ, ಎರಡು ಕಾದ ಕೆಂಪಾದ ಕಬ್ಬಿಣದ ಸರಳುಗಳನ್ನು ತಂದು ಅವನ ಆ ಉಬ್ಬಿದ ಕಣ್ಣುಗಳಲ್ಲಿ ಹೆಟ್ಟುವೆ. ನಾಲಿಗೆ ಕತ್ತರಿಸಿ ಹಾಕುವೆ!"

ಗೃಹಸ್ಥ ಹಾಹಾ ಎಂದು ನಕ್ಕ. ಎಂಥ ಭೀಕರ ಅಟ್ಟಹಾಸವದು!

"ಆಮೇಲೆ ಅವನ ಸರ್ವಾಂಗಗಳನ್ನೂ ಸೀಳಿ ಹಾಳೆ ಹಾಳೆಯಾಗಿ ಚರ್ಮ ಸುಲಿಯುವೆ. ಗಾಯಗಳಲ್ಲಿ, ಉಪ್ಪು ಮೆಣಸಿನ ಕಾಯಿ ತೀಡುವೆ. ಇಡೀಗಾಯಿ ಪಲ್ಯಕ್ಕೆ ಮಸಾಲೆ ತುರುಕುತ್ತಾರಲ್ಲ, ಹಾಗೆ! ದಯೆ, ಮಾಯೆ, ಒಂದಿಷ್ಟೂ ತೋರಿಸಲಾರೆ. ದಯೆ ಅನ್ನುವ ವಸ್ತು ಇರಲಿಕ್ಕಾದರೂ ಇದೆಯೇ?... ಇಷ್ಟಕ್ಕೂ ಸಾಯದೆ ಹೋದರೆ ಕುದಿಯುವ ಎಣ್ಣೆಯ ಕಡಾಯಿಯಲ್ಲಿ ಹಾಕಿ ತರಿದು ಕೊಲ್ಲುವೆ... ಇನ್ನು ನನ್ನ ಹೆಂಡತಿಯನ್ನೊ? ಅವಳನ್ನು ಕೊಲ್ಲುವದಿಲ್ಲ. ಅವಳಿಗೆ ಮೋಟರು ಕೊಂಡುಕೊಡುವೆ. ಜಗತ್ತಿನಲ್ಲಿ ಎಷ್ಟು ಮೋಟಾರುಗಳಿವೆಯೋ ಅಷ್ಟನ್ನೂ ಕೊಂಡುಕೊಡುವೆ. ಆಮೇಲೆ ಹೇಳುವೆ, 'ಇವುಗಳನ್ನು ಏರಿ ಊರು ಸುತ್ತು' ಅಂತ. ಅವಳಿಗೆ ಒಂದು ಕ್ಷಣಕಾಲವೂ ವಿಶ್ರಾಂತಿ ಕೊಡಲಿಕ್ಕಿಲ್ಲ. ಬಿಟ್ಟೂಬಿಡದೆ ಅವಳು ಇಪ್ಪತ್ತುನಾಲ್ಕು ತಾಸೂ ಮೋಟಾರಿನಲ್ಲಿ ಕೂತು ಸುತ್ತುತ್ತಲೇ ಇರತಕ್ಕದ್ದು. ನೋಡಿಬಿಡುವೆ. ಮೋಟಾರು ಸವಾರಿಯ ಹುಚ್ಚು ಎಷ್ಟಿದೆ ಅಂತ! ಮೋಟಾರು ನಿಲ್ಲಿಸುವ ಹಾಗಿಲ್ಲ–ಹಾಂ, ಒಂದು ಕ್ಷಣಕೂಡ ತಡೆಯದೆ ಓಡಾಡುತ್ತಲೇ ಇರಬೇಕು – ನಿಲ್ಲಿಸಿದರೆ ಬಂತು ಚಾಟಿಯೇಟು! ಕಾಯಿದೆ?

ಬೇಕಾದಷ್ಟು ರೊಕ್ಕ ಇದ್ದರೆ ಕಾಯಿದೆಯ ಅಂಜಿಕೆಯೆಲ್ಲಿ? ಆ ನಿರ್ಮಲ ನನ್ನ ಕಪಾಳಕ್ಕೆ ಎರಡೇಟು ಬಿಗಿದು ನನ್ನ ಹೆಂಡತಿಯನ್ನು ಹಾರಿಸಿಕೊಂಡು ಹೋದನಲ್ಲ, ಅವನಿಗೆ ಕಾಯಿದೆ ಏನು ಮಾಡಿತು? ಏನೂ ಮಾಡಲಿಲ್ಲ. ಹಣವೊಂದಿದ್ದರೆ ಏನೂ ಭಯವಿಲ್ಲ. ಹಣವೊಂದಿದ್ದರೆ ಸಿಗುವುದೆಲ್ಲ. ಹಣವೊಂದಿದ್ದರೆ ನಮಗೆ ಈ ಭೂಮಿಯಲ್ಲಿ ಯಾವುದೂ ಅಡ್ಡ ಬಾರದು. ಮೃತ್ಯುಕೂಡ ಏನೂ ಮಾಡಲರಿಯದು. ಎರಡೂ ಕೈಗಳಿಂದ ಧಾರಾಳವಾಗಿ ಹಣ ಸುರಿದರೆ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಹೆಸರು ಕೆತ್ತಲ್ಪಡುವದು. ತೈಮೂರ, ಜೆಂಗಿಝ್, ನಾದಿರಷಾ ಇವರು ಯಾರಾದರೂ ಸತ್ತಿದ್ದಾರೆಯೆ? ಎಷ್ಟೋ ಸಜ್ಜನರು ಸತ್ತು ಮರವೆಯ ತಳದಲ್ಲಿ ಮುಳಗಿಹೋಗಲು ಕಾರಣ ಅವರಲ್ಲಿದ್ದ ಹಣದ ಅಭಾವವೇ. ಹಣಬೇಕು. ಇನ್ನೊಂದು ಜನ್ಮದಲ್ಲಿ ಕೋಟೀಶ್ವರನಾಗಿ ಹುಟ್ಟಬೇಕು. ಅದಕ್ಕೆ ಬೇಕಾಗಿರುವ ಎಂಥ ತಪಸ್ಸು, ಎಂಥ ಕೃಚ್ಛ್ರ ಸಾಧನೆಗಾದರೂ ನಾನು ಸಿದ್ಧ. ನಿರ್ಮಲನನ್ನ ಒಂದು ಕೈ ನೋಡಿಯೆ ಬಿಡಬೇಕು; ಅವನಿಗೆ ಇಂಥಾ ಶಿಕ್ಷೆ ಕೊಡುವೆನಲ್ಲಾ, ನೋಡಿ ಕಲ್ಲು ಕೂಡ ತತ್ತರಿಸಿ ಹೋಗಬೇಕು! ಹಿಂಡಿ, ಹಿಚುಕಿ, ಕುಟ್ಟಿ, ಹೆಟ್ಟಿ, ಸುಟ್ಟು ಬೇಯಿಸಿ ಕೊಲ್ಲಬೇಕು ಅವನ್ನ! ಹಣಬೇಕು,-ಹಣ-ಹಣ-ಹಣ!-"

ಅವನ ಎರಡೂ ಕಣ್ಣುಗಳು ಕಿಡಿಕಾರ ತೊಡಗಿದವು.

ಕ್ಯಾಲಂಡರಿನ ಹುಡುಗಿಯೂ ಉತ್ಸುಕಳಾಗಿ ಕೇಳುವಂತಿತ್ತು. ಅವಳ ಕಣ್ಣುಗಳಿಂದಲೂ ಮಾತು ಹೊಮ್ಮುವಂತಿತ್ತು. ಅವಳೂ ಹೇಳಿ ಹೊರಟಂತಿತ್ತು.

"ನಿಜ ಹೇಳಿದೆ ಅಣ್ಣಾ, ನಿಜ, ನೂರು ಬಾರಿಗೂ ನಿಜ! ಹಣವೇ ಸರ್ವಸ್ವ. ನನ್ನೀ ಅರಳುತಿರುವ ಯೌವನವನ್ನು ಚಿತ್ರಕಾರನ ಮುಂದೆ ಬಿಚ್ಚಿ ನಿಲ್ಲಿಸಿದ್ದು ಹಣದ ಆಸೆಯಿಂದಲೇ. ವರ್ಣಗಳ ಬಂಧನದಲ್ಲಿ ಸೆರೆಸಿಕ್ಕರೂ ಹಣವನ್ನೆ ಆರಾಧಿಸಿದ್ದೆ. ನನ್ನ ದೇಹದ ಎಲ್ಲ ಸೊಬಗನ್ನು ನೋಟಕ ಲುಬ್ಧ, ಮುಗ್ಧ ದೃಷ್ಟಿಗಳ ಮುಂದೆ ಬಿಡಿಸಿಟ್ಟದ್ದು ಕೇವಲ ಹಣಕ್ಕಾಗಿ. ನನ್ನ ಅಂಗಾಂಗಗಳ ಈ ಮಿರುಗುವ ವರ್ಣವೈಖರಿ, ಈ ವಿಕಸಿತ ಯೌವನಶ್ರೀ-ಎಲ್ಲವೂ ಮಾತಿಲ್ಲದ ಮಾತಿನಲ್ಲಿ ಕರೆಕರೆದು ಹೇಳುತಿವೆ-ಹಣಕೊಡಿರಿ, ಹಣಕೊಡಿರಿ, ಸ್ವಾಮೀ ಒಂದಿಷ್ಟು ಹಣ ಕೊಟ್ಟು ಹೋಗಿ ಎಂದು"

ಹೊರಗೆ ಆಕಸ್ಮಾತ್ತಾಗಿ ಒಂದು ಮಿಂಚಿನ ಸೆಳಕು ಅಂಧಕಾರವನ್ನು ಭೇಧಿಸಿ ಹೊಳೆದು ಹೋಯಿತು. ಒಡನೆ ಒಂದು ಭಯಾನಕವಾದ ಸಿಡಿಲು. ಆ ಮೇಲೆ ಎಲ್ಲವೂ ನಿಶ್ಶಬ್ದ.

ಗಾಳಿಯ ಹೊಡೆತಕ್ಕೆ ದೀಪ ನಂದಿ ಹೋಗಿತ್ತು. ಎದ್ದು ಅದನ್ನೂ ಹೊತ್ತಿಸಿದೆ. ಹೊತ್ತಿಸಿ ನೋಡಿದೆ. ಪುನಃ ಅದೇ ಪತಂಗ ಹಾರಾಡುತಿದೆ, ಅದೇ ಸ್ವಲ್ಪ ಮುಂಚೆ ಸುಟ್ಟು ಬೂದಿಯಾಗಿ ಹೋಗಿತ್ತಲ್ಲ!

ಸಾಯಲಾದ ಕಪ್ಪೆಯ ಕರುಣಾಕ್ರಂದನ ಸ್ಪಷ್ಟತರವಾಗಿತ್ತು. ವಿಮೂಢನಾಗಿ ಕುಳಿತಿದ್ದೆ.

ಯಾಕೋ ಏನೊ ನನ್ನ ಸ್ವಂತ ಜೀವನ ನೆನಪಾಯಿತು.

ಎಂಥ ದುಃಖಮಯ ಜೀವನವದು! ತಂದೆ ಒಬ್ಬ ಸಾಮಾನ್ಯ ಕಾರಕೂನರು. ಚಿಕ್ಕ ಹಂಚಿನ ಮನೆಯಲ್ಲಿ ವಾಸ. ನಾವು ಮೂವರು ಅಣ್ಣ-ತಮ್ಮ, ಐವರು ಅಕ್ಕತಂಗಿಯರು. ನಮ್ಮೀ, ಧರ್ಮಪ್ರಾಣ ದೇಶದಲ್ಲಿ ಬಡ ಕಾರಕೂನನ ಮನೆಯಲ್ಲಿ ಐವರು ಹೆಣ್ಣುಮಕ್ಕಳು! ಬಾಲ್ಯವನ್ನು ಎಂಥ ಕಷ್ಟದಲ್ಲಿ ಕಳೆದಿದ್ದೆ; ಅದೆಲ್ಲ ಈಗಲೂ ದುಃಸ್ವಪ್ನದಂತೆ ನೆನಪಿನಲ್ಲಿ ಅಚ್ಚೊತ್ತಿದೆ.

ನನ್ನ ತಂದೆಯವರ ಮಾತು ನೆನಪಿಗೆ ಬರುತ್ತಿದೆ. ಜೀವಮಾನದಲ್ಲಿ ಒಂದು ದಿನವೂ ಶಾಂತಿಯನ್ನು ಕಂಡವರಲ್ಲ ಅವರು. ಬೆಳಿಗ್ಗೆ ಎದ್ದು ಹೇಗೊ ಎರಡು ತುತ್ತು ಉಂಡು ಕಚೇರಿಗೆ ಹೋದರೆ ಮತ್ತೆ ಮನೆಕಾಣುವಾಗ ರಾತ್ರಿ ಎಂಟು ಬಡಿಯುತ್ತಿತ್ತು. ತಿರುಗಿಬಂದ ಮೇಲಾದರೂ ಶಾಂತಿ ದೊರಕುತ್ತಿತ್ತೆ? ಅದೂ ಇಲ್ಲ. ಮನೆಯಲ್ಲಿ ನಮ್ಮ ತಾಯಿಯ ಕಿರಿಕಿರಿ ಕೇಳುವದು ಅವರಿಗೆ ಮೈಯುಂಡುಹೋಗಿತ್ತು. ತಾಯಿಯದಾದರೂ ತಪ್ಪಿಲ್ಲ. ಅವಳೂ ಮನುಷ್ಯಳು ತಾನೆ? ರಕ್ತ ಮಾಂಸದ ಶರೀರ ತಾನೆ ಅವಳದೂ? ಆ ಹರಕು ಮುರುಕು ಮನೆಯಲ್ಲಿ ಚಿತ್ತ ಸಮಾಧಾನದಿಂದ ಜೀವನದ ಅರವತ್ತೂ ಗಳಿಗೆಯನ್ನು ದೂಡುವದು ಅವರಿಗೆ, ಅಸಾಧ್ಯವಾಗಿತ್ತು. ಬಾಯಲ್ಲಿ ಒಂದೇ ಒಂದು ಸವಿಮಾತು ಹೊರಡುತ್ತಿರಲಿಲ್ಲ. ಎಲ್ಲ ಮಾತುಗಳಲ್ಲಿಯೂ ಒರಟಾಟಕೆಯೆ. ಹೆಂಗಸರು ತಮ್ಮ ವ್ಯಕ್ತಿಗತ ದುಃಖದುಮ್ಮಾನಗಳನ್ನು ಹೇಗಾದರೂ ಸಹಿಸಿಕೊಂಡು ದಿನದೂಡ ಬಲ್ಲರು. ಆದರೆ ಮಕ್ಕಳಮರಿಗಳ ಕ್ಲೇಶಗಳನ್ನು ಕಂಡು ಕಂಡೂ ತಡೆದು ಕೊಳ್ಳುವದು ಮಾತ್ರ ಅವರ ಶಕ್ತಿಗೆ ಮೀರಿದ ಮಾತು. ಮಕ್ಕಳಿಗೆ ಒಂದಿಷ್ಟು ಸವಿತಿನಿಸು ತಿನಿಸುವ ಸಲುವಾಗಿ, ಅವರಿಗೆ ಏನಾದರೂ ಅಂದಚಂದದ ಉಡಿಗೆ ತೊಡಿಗೆ ಹಾಕಿ ನೋಡಿ ನಲಿಯುವ ಸೌಖ್ಯಕ್ಕಾಗಿ ಅವರು ಎಂಥೆಂಥ ವ್ರತೋಪವಾಸವನ್ನು ಬೇಕಾದರೂ ಮಾಡಲನುವಾಗುವರು. ನಮ್ಮ ತಾಯಿ ಯಾದರೂ ಕಡಿಮೆ ವ್ರತೋಪವಾಸವನ್ನು ಮಾಡಿದವಳಲ್ಲ. ಹಣ ಉಳಿಸುವ ಸಲುವಾಗಿ ಅವಳು ತಾನೇ ಅಗಸಗಿತ್ತಿ, ಚಾಕರಗಿತ್ತಿ, ಅಡಿಗೆಯವಳು ಎಲ್ಲವೂ

ಆಗಿದ್ದಳು. ಮನೆಯಲ್ಲೆ ಹೊಲಿಗೆ ಕೆಲಸ ಮಾಡಿ ಸಿಂಪಿಗಿತ್ತಿಯೂ ಆಗಿದ್ದಳು. ಇಷ್ಟೆಲ್ಲ ಒದ್ದಾಡಿದರೂ ತನ್ನ ಮೂವರು ಹುಡುಗರ, ಐವರು ಹುಡುಗಿಯರ ಕೊರತೆಗಳಲ್ಲಿ ಕೆಲವನ್ನು ನೀಗಿಸುವದೂ ಅವಳಿಂದಾಗುತಿರಲಿಲ್ಲ. ಸಾಲದ್ದಕ್ಕೆ ನೆರೆಮನೆಯಲ್ಲೊಂದು ಕಾಟ. ಅಲ್ಲೊಬ್ಬ ಶ್ರೀಮಂತ ಇರುತ್ತಿದ್ದ. ಅವನ ಮನೆಯಲ್ಲಿ ನಿತ್ಯೋತ್ಸವ. ಮೂರು ನಾಲ್ಕು ಮೋಟಾರುಗಳು ಚಿತ್ರವಿಚಿತ್ರ ಶಬ್ದಗಳನ್ನು ಮಾಡುತ್ತ ಬಂದು ಹೋಗುತ್ತಿರಬೇಕು. ಗ್ರಾಮಾಫೋನು ಹಗಲಿರಳೂ ಹಾಡುತ್ತಿರಬೇಕು. ಪುಟಪುಟಿಸುವ ಮಕ್ಕಳ ಬಳಗ. ಒಬ್ಬ ಸಂಪಗೆ ಬಣ್ಣದ ರೇಶ್ಮೆ ಪೋಲಕಾದಮೇಲೆ ಜೋಡು ಜಡೆ ಲೋಲಯಮಾನವಾಗಿರಬೇಕು. ಇನ್ನೊಬ್ಬ ಸೇಲರ್ಸ್ ಸೂಟು ಧರಿಸಿ ಬಗಲಲ್ಲಿ ಫುಟ್‌ಬಾಲ್ ತೂರಿಕೊಂಡು ಆಟಕ್ಕೆ ಹೊರಟಿರಬೇಕು; ಮತ್ತೊಬ್ಬನ ಮುಖದಲ್ಲಿ ಬಣ್ಣದ ಕೊಳಲು, ಮಗುದೊಬ್ಬನ ಕೈಯಲ್ಲಿ ಚಿತ್ರವಿಚಿತ್ರ ಘುಗ್ಗಗಳು, ನಿತ್ಯ ನೂತನವಾದ ಆಟಿಕೆಗಳನ್ನು ಹಿಡಿದು ಕೊಂಡು, ನಿತ್ಯನೂತನ ವರ್ಣದ ಉಡಿಗೆತೊಡಿಗೆಗಳಿಂದ ಮೆರೆಯುತ್ತ ಅವರು ನಮ್ಮ ಕಣ್ಣು ಕುಕ್ಕಿಸಿ ಕುಕ್ಕಿಸಿ ಓಡಾಡುವರು. ತೇಪೆಹಾಕಿದ ದೋತರ, ಶತಚ್ಛಿದ್ರ ಅಂಗಿಗಳಿಂದ ಮೈ ಮುಚ್ಚಿಕೊಂಡ ನಾವು ಲುಬ್ಧ ನೇತ್ರಗಳಿಂದ ಅವರನ್ನು ನೋಡುತ್ತಿದ್ದೆವು. ನಮ್ಮ ಮನಸ್ಸಿನಲ್ಲಿ ಆಗ ಹೇಗೆ ಅನಿಸುತ್ತಿತ್ತು? ಅದನ್ನು ಬಣ್ಣಿಸುವುದರಿಂದ ಏನೂ ಪ್ರಯೋಜನವಿಲ್ಲ.

ನಮ್ಮ ತಾಯಿಯ ಮನಸ್ಸಿನಲ್ಲಿ ಎಳ್ಳಷ್ಟು ಸ್ಥೈರಣೆ ಉಳಿಯುವಂತಿರಲಿಲ್ಲ. ಇದೆಲ್ಲದರ ಪ್ರತಿಕ್ರಿಯೆ ಹೋಗಿ ಅಪ್ಪಳಿಸಬೇಕು ನಮ್ಮ ತಂದೆಯವರಮೇಲೆ. ಅವರ ಮೇಲೆಯೇ ಅವಳು ಎಲ್ಲದರ ಸೇಡು ತೀರಿಸಿಕೊಳುತ್ತಿದ್ದಳು.

ಒಂದು ದಿನವಾದರೂ ತಂದೆಯವರು ಮಾರುತ್ತರ ಕೊಟ್ಟದ್ದನ್ನು ನಾವು ಕಂಡಿರಲಿಲ್ಲ. ಇನ್ನೂ ಹತ್ತಾರು ದುಃಖಗಳಂತೆ ಈ ಭರ್ತ್ಸನೆಯನ್ನು ಅವರು ಪಿಟ್ಟೆನ್ನದೆ ನುಂಗಿಕೊಳ್ಳುತ್ತಿದ್ದರು. ಅವರ ಸಹನ ಶಕ್ತಿ ಅಗಾಧವಾಗಿತ್ತು. ಆದರೆ ಈ ಸಹನ ಶಕ್ತಿಗೆ ತಾಯಿ ಮರ್ಯಾದೆ ಕೊಡುತ್ತಿರಲಿಲ್ಲ. ಈ ಸಹನ ಶಕ್ತಿಯ ಫಲವಾಗಿಯೆ ಅವರು ತಾಯಿಯ ಕೈಯಲ್ಲಿ ಕೊನೆ ಮೊದಲಿಲ್ಲದ ಛಲನೆಯನ್ನನುಭವಿಸಬೇಕಾಗಿ ಬರುತ್ತಿತ್ತು. ಅವಳು ಎಷ್ಟೋ ವೇಳೆ ಹೇಳುತ್ತಿದ್ದುದನ್ನು ಕೇಳಿದ್ದೇನೆ.

"ಅಲ್ಲಾ ನಿಮ್ಮ ಮೈಯಲ್ಲಿ ಒಂದು ತಟುಕಾದರೂ ಮನುಷ್ಯ ರಕ್ತ ಉಂಟೋ ಇಲ್ಲವೊ ಅಂತೇನೆ. ಹುಡುಗರ ಮೈಮೇಲೆ ಒಂದು ಅಂಗಿಯಿಲ್ಲ, ಹುಡುಗಿಯರು ಚಳಿಯಿಂದ ನಡುಗುತಿದ್ದಾರೆ. ಕಣ್ಣಿಲ್ಲವೇ ನಿಮಗೆ? ಅವೇನು ಮನುಷ್ಯರ ಕಣ್ಣುಗಳೋ ಕಲ್ಲಿನವೊ".

ತಂದೆಯವರು ಒಂದು ಬಾರಿಯೂ ಪ್ರತ್ಯುತ್ತರ ಕೊಟ್ಟವರಲ್ಲ. ಅವರ ಮನಸು ವಿಕಾರವಶವಾದುದನ್ನು ಒಮ್ಮೆಯೂ ನಾನು ನೋಡಿಲ್ಲ ಕಚೇರಿಯ ಅಂಗಿ ವಸ್ತ್ರ ಕಳಚಿಟ್ಟು ಕೈಕಾಲು ತೊಳೆದುಕೊಂಡು, ನಿರ್ವಿಕಾರ ಚಿತ್ತದಿಂದ ಅವರು ಸಂಧ್ಯಾವಂದನೆಗೆ ಕೂಡುತಿದ್ದರು. ಬಹುಶಃ ಪರಬ್ರಹ್ಮ ಚಿಂತನೆಯಲ್ಲಿ ಮಗ್ನರಾಗುತ್ತಿದ್ದಿರಬೇಕು.

"ಸ್ವಲ್ಪ ನೋಡಿರಿಲ್ಲಿ ಡಾಕ್ಟರ ಸಾಹೇಬ್, ನಾನು ನೋಡಲಿಕ್ಕೆ ಅಷ್ಟೊ ಕುರೂಪಿಯೆ?" ಸ್ಥೂಲ ದೇಹದ ಕಪ್ರನ್ನ ಹೆಂಗಸೊಬ್ಬಳು ಬಂದು ಕುಳಿತಿದ್ದಳು.

"ಸತ್ಯ ಹೇಳಿರಿ, ನಾನು ನೋಡಲಿಕ್ಕೆ ಅಷ್ಟೇನು ಕೆಟ್ಟ ಕಾಣುವೆನೆ? ಮತ್ತೆ ಯಾಕೆ ಯಾರು ನನ್ನನ್ನು ಮೆಚ್ಚಲಿಲ್ಲ? ಸಾಲುಸಾಲಾಗಿ ಜನರು ಬಂದು ನೋಡಿದರು, ಹೊರಟುಹೋದರು. ಯಾರಿಗೂ ನಾನು ಮನಸಿಗೆ ಬರಲಿಲ್ಲ. ಏನು ಮಾಡಿದರು ನನಗೆ ಮದುವೆ ಆಗಲಿಲ್ಲ."

ಹುಡುಗಿಯೇನೋ ಕುರೂಪಿಯೆ, ಇದರಲ್ಲಿ ಯಾವ ಸಂದೇಹವೂ ಇರಲಿಲ್ಲ.

"ನೀವೇ ಹೇಳಿರಿ, ನಾನು ಅಷ್ಟು ಕುರೂಪಿಯೇ?"

ನಾನು ಸಂಕೋಚವಿಲ್ಲದೆ ಸುಳ್ಳು ಹೇಳಿದ. "ಅಲ್ಲ"

"ಹಾಗಾದರೆ ಯಾರೂ ನನ್ನನ್ನು ಮಾಡಿಕೊಳ್ಳಲಿಲ್ಲ ಏಕೆ? ಹೀಗೆ ನಾನು ತಿಂದು ಸಾಯಬೇಕಾಗಿ ಬಂತೇಕೆ? ನನ್ನೀ ದೇಹವನ್ನು ಸೃಷ್ಟಿಮಾಡಿದವಳು ನಾನಂತೂ ಅಲ್ಲ. ಯಾರು ಸೃಷ್ಟಿಸಿದನೆಂದು ನೀವು ಬಲ್ಲಿರಾ? ಅವನ ಗೊತ್ತು ಗುರಿ ನಿಮಗೆ ಗೊತ್ತೆ?"

ಅವಳ ಕಣ್ಣುಗಳು ಹುಲಿಯವುಗಳಂತೆ ಉರಿದೆದ್ದವು.

"ಈ ಕಪ್ಪು ಬಣ್ಣ, ದಪ್ಪ ತುಟಿ, ಹೊರ ಹಣಕುವ ಹಲ್ಲು, ಮೂಗು ಗಿಣಿಯ ಚಂಚುವಿನಂತಿಲ್ಲದಿರೋಣ. ಇದಕ್ಕೆಲ್ಲ ಯಾರು ಹೊಣೆ? ಅವನಿಂದ ನನಗೆ ಬೇಕಾಗಿದೆ ಉತ್ತರ. ಅವನ ಮುಂದೆ ಕೂಗಿ ಕೂಗಿ ಕೇಳುವೆ, ಒಬ್ಬಳನ್ನು ಕುರೂಪಿಯಾಗಿ ಯಾಕೆ ನಿರ್ಮಿಸಿದೆ ನೀನು? ಯಾಕೆ-ಯಾಕೆ-ಯಾಕೆ? ನಾನೇನು ಅಪರಾಧ ಮಾಡಿದ್ದೆ ನಿನಗೆ?"

ಚೀತ್ಕಾರ ಮಾಡುತ್ತ ಅವಳು ಕತ್ತಲೆಯಲ್ಲಿ ಲೀನವಾದಳು.

ನಮ್ಮ ತಂದೆಯವರು ಹೆಣ್ಣು ಮಕ್ಕಳ ದೆಸೆಯಿಂದ ಕಡಿಮೆ

ಭೋಗಿಸಿದವರೆ? ಒಬ್ಬಿಬ್ಬರಲ್ಲ. ಐದ್ವೈದು ಹೆಣ್ಣುಮಕ್ಕಳು! ಮೂವರಿಗೆ ಮದುವೆ ಮಾಡುವಷ್ಟರಲ್ಲೆ ಅವರ ಸರ್ವಸ್ವವೂ ಮಾರಿ ಹೋಗಿತ್ತು. ಊರಲ್ಲಿ ಹತ್ತು ಕೂರಿಗೆ ಜಮೀನಿತ್ತು. ಅದೂ ಹೋಯಿತು, ಒಂದು ಕವಡೆಯೂ ಉಳಿದಿದ್ದಿಲ್ಲ.

"ಡಾಕ್ಟರ್ ಸಾಹೇಬ, ಡಾಕ್ಟರ್ ಸಾಹೇಬ!"

ಅದೇ ಆ ಭಯೋತ್ಪಾದಕ ಹುಡುಗ ಓಡುತೋಡುತ್ತ ಬರುತ್ತಿದ್ದ, ಹೆದರಿದ ಅವನ ಮುಖ ಒಣಗಿ ಹೋಗಿತ್ತು. ದೇಹವೆಲ್ಲ ಗದಗುಟ್ಟಿ ನಡುಗುತ್ತಿತ್ತು.

"ಆ ಮನುಷ್ಯನನ್ನು ಕಳಿಸಿ ಬಿಡಿರಿ, ಡಾಕ್ಟರ ಸಾಹೇಬ! ನೋಡಿ, ನೋಡಿದಲ್ಲಿ ಮೈಮೇಲೆ ಏರಿ ಬರುತ್ತಾನೆ. ನೋಡಿರಿಲ್ಲಿ, ಹೇಗೆ ಕಚ್ಚಿ ಬಿಟ್ಟಿದ್ದಾನೆ!"

ಅದೇ ಆ ದೀರ್ಘಾಕೃತಿಯ ಕಪ್ಪು ಮನುಷ್ಯ ಬಂದು ನಿಂತಿದ್ದ. ಕೊರಳ ಗಾಯದಿಂದ ನೆತ್ತರು ಸುರಿಯುತ್ತಿತ್ತು. ಮುಖ ಹಿಂಸ್ರವಾಗಿತ್ತು. ಅವನು ಸಿಡಿದೆದ್ದು ಅರಚಿದ.

"ಕಚ್ಚಿ ನಿನ್ನ ನಾಳಿ ಹಿರಿದು ಹಾಕುವೆ! ಲಫಂಗ, ಬದಮಾಶ್, ಕಳ್ಳ, ಸೂಳೇಮಗ ಎಲ್ಲಿಯೋ ಹೇಳು, ಎಲ್ಲಿ ನನ್ನ ಮಗಳು."

ಯುವಕ ಕಾತರ ಸ್ವರದಿಂದ ಬಿನ್ನವಿಸಿದ, 'ಸತ್ಯ ಹೇಳುತ್ತೇನೆ. ನನಗೆ ನಿಮ್ಮ ಮಗಳ ಸುದ್ದಿಯೇ ಗೊತ್ತಿಲ್ಲ. ಅವಳನ್ನು ಎಂದೂ ನೋಡಿಯೂ ಇಲ್ಲ."

ಕರಿಯ ಭೀಕರವಾಗಿ ಗರ್ಜಿಸಿದ; "ನಿನಗೆ ಗೊತ್ತಿಲ್ಲದಿದ್ದರೆ ನಿನ್ನ ಗೆಳೆಯರಿಗೆ ಗೊತ್ತಿದ್ದೀತು. ಹುಡುಕಿ ತಾ. ಎಲ್ಲಿಂದಾದರೂ ಹುಡುಕಿ ಕರೆದುಕೆಂಡು ಬಾ. ಇಲ್ಲದಿದ್ದರೆ ನಿನ್ನ ಗಂಟಲು ಸೀಳಿ ಬಿಡುವೆ!"

ಮನುಷ್ಯ ಬಾಯಿ ತೆರೆದು ಹರಿತವಾದ ಹಲ್ಲುಗಳನ್ನು ಪ್ರದರ್ಶಿಸುತ್ತ ಎರಡು ಹೆಜ್ಜೆ ಮುನ್ನುಗ್ಗಿದ–

ಯುವಕ ಉಸಿರು ಕಟ್ಟಿ ಓಡಿ ತಲೆತಪ್ಪಿಸಿಕೊಂಡ.

"ಅದೆಲ್ಲ ಕೇಳುವವನಲ್ಲ ನಾನು! ನನ್ನ ಅಂಗಡಿ ತಿರುಗಿ ಕೊಡು, ಕೊಡು ನನ್ನ ಮಗಳನ್ನ!"

ಅವನ ಕತ್ತಿನ ಗಾಯದಿಂದ ರಕ್ತದ ಬುರುಗು ಎದ್ದಿತು.

ಮತ್ತೆ ಎಲ್ಲವೂ ನಿಃಸ್ತಬ್ಧ.

ಪತಂಗದ ಪ್ರೇತಾತ್ಮವೊಂದು ದೀಪದ ಕುಡಿಗೆ ಪ್ರದಕ್ಷಿಣೆ ಹಾಕುತಿತ್ತು.

ಇವರೆಲ್ಲರ ಜೀವನಗಳೊಡನೆ ನನ್ನದನ್ನು ಹೋಲಿಸಿ ನೋಡಿದೆ. ಅಷ್ಟು ದೊಡ್ಡ ಅಂತರವೇನೂ ಕಾಣಲಿಲ್ಲ. ಇವರು ಎಂಥ ಅವಸ್ಥೆಯಲ್ಲಿ ಸಿಲುಕಿ ಆತ್ಮಹತ್ಯೆ ಮಾಡಿಕೊಂಡರೋ, ಆ ಅವಸ್ಥೆಯಲ್ಲಿ ನಾನೂ ಬಿದ್ದಿದ್ದೆ. ಆತ್ಮಹತ್ಯೆ ಮಾಡಿಕೊಳ್ಳಲಿಲ್ಲವೇಕೋ, ಆದೀಗ ಚೋದ್ಯದ ಸಂಗತಿ.

ನಾನು ಇಂಟರ ಸಾಯನ್ಸ್ ಪಾಸಾದಾಗ ನನ್ನಿಬ್ಬರು ತಮ್ಮಂದಿರು ಮ್ಯಾಟ್ರಿಕಿನಲ್ಲಿ ಓದುತ್ತಿದ್ದರು. ನಾವು ಮೂವರೂ ಓದುಬರಹದಲ್ಲಿ ತುಂಬ ಮುಂದೆ. ಯಾವ ವರ್ಗದಲ್ಲಿಯೂ ಎರಡನೆ ಸ್ಥಾನ ಪಡೆದವರಲ್ಲ. ಶಿಷ್ಯವೃತ್ತಿಯಿಂದ ಹೇಗೋ ನಮ್ಮ ವಿದ್ಯಾಭ್ಯಾಸದ ವೆಚ್ಚ ಹುಟ್ಟುತಿತ್ತು. ನಮ್ಮ ಬಾಳುವೆಯ ನಾನಾ ದೈನ್ಯಗಳ ನಡುವೆ ಇದ್ದ ಸುಖದ ಕಳೆಯೆಂದರೆ ಇದೊಂದೆ.

ಇಂಟರ ಸಾಯಿನ್ಸ್ ಮುಗಿಸಿದೊಡನೆ ತಂದೆಯವರು ಸ್ವಲ್ಪವೂ ತಡಮಾಡದೆ ನನಗೆ ತಮ್ಮ ಕಚೇರಿಯಲ್ಲಿ ಒಂದು ನೌಕರಿ ಹಚ್ಚಿಕೊಟ್ಟರು. ಇದಾದ ಮೇಲೆ ಘಟಿಸಿದಂಥ ಆಶ್ಚರ್ಯಕರ ವ್ಯಾಪಾರ ನನ್ನ ಜನ್ಮದಲ್ಲೇ ಬೇರೊಂದು ಕಣ್ಣಿಗೆ ಬಿದ್ದಿಲ್ಲವೆನ್ನಬಹುದು. ಕಾಕತಾಲೀಯವಿದ್ದರೂ ಇದ್ದೀತು. ಆದರೂ ಅತ್ಯಂತ ವಿಸ್ಮಯಜನಕ.

ನನಗೆ ನೌಕರಿ ಹತ್ತಿದ ದಿನವೇ ತಂದೆಯವರು ಕಾಲವಶರಾದರು. ಆ ಮರಣವೂ ಆಶ್ಚರ್ಯವೇ. ಎಂದಿನಂತೆ ಅಂದಿನ ದಿನವೂ ರಾತ್ರಿ ಊಟ ತೀರಿಸಿ ಮಲಗಿದ್ದರು. ಯಾವ ಅಸ್ವಸ್ಥವೂ ಇದ್ದಿಲ್ಲ. ಮರುದಿನ ಮುಂಜಾನೆ ಎದ್ದು ನೋಡಿದರೆ ಅವರು ಸತ್ತು ಹೋಗಿದ್ದರು... ನಾನು ಅವರ ಜ್ಯೇಷ್ಠಪುತ್ರ, ಜ್ಯೇಷ್ಠಪುತ್ರನಿಗೆ ನೌಕರಿ ಹಚ್ಚಿಕೊಟ್ಟು ಆಮೇಲೆ ಅವರು ನಿಶ್ಚಿಂತರಾಗಿ ಕೊನೆಯ ಉಸಿರು ಬಿಟ್ಟಿದ್ದರೇನೊ.

ಇನ್ನು ತಾಯಿಯೊ?

ಅವಳಾದರೂ ಬಾಳಿನಲ್ಲಿ ಕಂಡುಂಡ ದುಃಖದುಮ್ಮಾನಗಳಿಗೆ ಲೆಕ್ಕವುಂಟೆ? ಬಡವಿಯಾದ ತಾಯ ಹೃದಯದಲ್ಲಿ ಹುದುಗಿದ ನೋವನ್ನು ಅಳೆಯುವ ಶಕ್ತಿ ಯಾರಿಗಿದೆ? ಈಡೇರದ ಬಯಕೆಗಳೆಷ್ಟು, ಕೈಗೂಡದ ಆಕಾಂಕ್ಷೆಗಳೆಷ್ಟು ಅವಳ ಮಾತೃ ಹೃದಯದಲ್ಲಿ ಹತ್ತಿಕ್ಕಲ್ಪಟ್ಟಿವೆಯೋ ಬಲ್ಲವರಾರು? ಇಷ್ಟು ಮಾತ್ರ ಬಲ್ಲೆ, ಅವಳು ಎಷ್ಟೋ ದಿನಗಳನ್ನು ನಿರಾಹಾರದಲ್ಲೆ ಕಳೆದಿದ್ದಳು. ನಾನಾ ವ್ರತೋಪವಾಸಗಳಂತೂ ಇದ್ದೇ ಇದ್ದವು. ಸಾಲದ್ದಕ್ಕೆ ಎಷ್ಟೋ ದಿನ ಅನ್ನವೂ ಸಾಲುತಿರಲಿಲ್ಲ. ತಂದೆಯವರು ತೀರಿಕೊಂಡ ನಂತರ ನಮ್ಮ ಉತ್ಪನ್ನ

ಇಳಿದುಹೋಗಿತ್ತು. ದೊರಕಿದ ಅಲ್ಪ ಸ್ವಲ್ಪವನ್ನೂ ನಮಗೇ ಕೊಟ್ಟು ತಾನು ಉಪವಾಸ ಕೂಡುತಿದ್ದಳವಳು.

"ಡಾಕ್ಟರ್ ಸಾಹೇಬ್, ಇದು ಬದುಕಿಲ್ಲ. ಸುಮ್ಮನೆ ಸುಳ್ಳು ಹೇಳಿ ಮುಸಲಾಯಿಸಿದಿರಿ ನೀವು!"

ಅದೇ ಆ ಶಿಶುಘಾತಕಿ ತಾಯಿ ಮತ್ತು ಅವಳ ಬಗಲಲ್ಲಿ ಅದೇ ಮೃತ ಶಿಶು.

"ಇದು ಎಲ್ಲಾದರೂ ಬದುಕುವದುಂಟೆ? ಬದುಕುವ ಸಂಭವವಾದರೂ ಎಲ್ಲಿ? ಹೆತ್ತ ತಾಯಿಯೇ ಕತ್ತು ಹಿಸುಕಿದ ಮೇಲೆ ಮಗು ಬದುಕುವದಾದರೂ ಹೇಗೆ? ನನ್ನಂಥ ಪಿಶಾಚಿಯನ್ನು, ದುಷ್ಟಳನ್ನು ಎಲ್ಲಾದರೂ ಕಂಡಿದ್ದೀರಾ ನೀವು? ಜಗತ್ತಿನಲ್ಲಿ ಯಾವಾಗಲೂ ಹೀಗೆ ಶಿಶುಹತ್ಯೆ ಮಾಡುತ್ತಿರುತ್ತಾರೆಯೇ? ಭೂಕಂಪದಿಂದ ಇನ್ನೂ ಪೃಥ್ವಿ ಹೋಳು ಹೋಳಾಗಿ ಹೋಗಿಲ್ಲವೆ?"

ತಾಯಿ ಸತ್ತ ಮಗನನ್ನು ಎದೆಗೊತ್ತಿಕೊಂಡಳು.

"ನನ್ನ ಕಂದಾ! ನನ್ನ ಕಂದಾ!!?

ಬಹಳ ಹೊತ್ತು ಇಬ್ಬರ ಬಾಯಿಯಿಂದಲೂ ಮಾತು ಹೊರಡಲಿಲ್ಲ. ಬಳಿಕ ಅವಳು ಮೆಲ್ಲಮೆಲ್ಲನೆ ನನ್ನ ಬಳಿಸಾರಿ ನುಡಿದಳು.

"ಆದರೂ ಆಶ್ಚರ್ಯದಲ್ಲೊಂದು ಆಶ್ಚರ್ಯವೇನು ಗೊತ್ತೆ? ಹೇಳಿರಿ ನೋಡೋಣ? ಅದನ್ನು ನಾನಿನ್ನೂ ಮರೆತಿಲ್ಲ. ಅದೇ ಕಾಳಸರ್ಪ ಈಗಲೂ ಹೆಡೆಬಿಚ್ಚಿ ಕುಳಿತು ನನ್ನ ಮನಸ್ಸಿನ ಕೊಳಲಗಾನ ಕೇಳುತಿದೆ. ಈಗಲೂ ತಲೆಯೆತ್ತಿ ಕುಂಡಲಾಕೃತಿಯಲ್ಲಿ ಸುತ್ತು ಹಾಕಿ ಕುಳಿತಿದೆ. ಅದು ನನ್ನ ಹೃದಯದಲ್ಲಿ. ಏನು ಮಾಡಿದರೂ ಅದು ಹೃದಯದಿಂದ ಉಚ್ಚಾಟನೆ ಹೊಂದಲಿಲ್ಲ. ಏನು ಮಾಡಿದರೂ ಅದು ಕದಲಲೊಲ್ಲದು. ಏನಾದರೊಂದು ಉಪಾಯ ಇದ್ದರೆ ಹೇಳಿರಿ, ಡಾಕ್ಟರಸಾಹೇಬ್. ಹೇಗೆ ಮಾಡಿದರೆ ಇವೆಲ್ಲವೂ ನೆನಪಿನಿಂದ ಅಳಿಸಿ ಹೋದೀತು? ಈ ನೆನಪಿನ ಕೈಯಿಂದ ನಾನು ಹೇಗೆ ಉಳಿದುಕೊಳ್ಳಬಹುದು? ಒಮ್ಮೆಲೇ ಎಲ್ಲವೂ ಮರೆತುಹೋಗುವಂತೆ ಮಾಡಿರಿ, ಡಾಕ್ಟರ ಸಾಹೇಬ್."

ಅವಳ ಬತ್ತಿದ ಕಣ್ಣುಗಳಲ್ಲಿ ಒಂದು ಹನಿ ನೀರೂ ಇಲ್ಲ.

ಆಕಸ್ಮಾತ್ತಾಗಿ ಒಂದುಸಿರು ಗಾಳಿ ಬುಸ್ಸೆಂದು ಕೋಣೆಯಲ್ಲಿ ನುಗ್ಗಿತು. ನೀರಗಡಲೆಕೆಲ ನೀರ ಹನಿಗಳು. ಹೊರಗೆ ಆಕಾಶವೆಲ್ಲ ಮೇಘೋಚ್ಛನ್ನ ಮಳೆ ಸುರಿಯುತಿತ್ತು.

ಪೃಥ್ವಿಯೆಲ್ಲ ನಿರರ್ಗಳ ಅಶ್ರುಧಾರೆಯಿಂದ ಅಳುತ್ತಿತ್ತು. ಮಿಂಚಿಲ್ಲ, ಸಿಡಿಲಿಲ್ಲ; ಬರಿ ಮಳೆ. ಎಡೆಬಿಡದೆ ಅಳುವವರಂತೆ ಅವಿಶ್ರಾಂತ ವರ್ಷಣ ಕ್ಯಾಲಂಡರಿನ ಚಿತ್ರದ ಕಡೆ ನೋಡಿದರೆ ಅದರ ಕಣ್ಣಲ್ಲಿಯೂ ನೀರು.

ಮಳೆಯ ಸದ್ದಡಗಿದ ಕತ್ತಲನ್ನು ಕ್ಷುಬ್ಧಗೊಳಿಸುತ್ತ ಕವಿಯ ಗಂಭೀರ ಸ್ವರ ತೇಲಿ ಬರತೊಡಗಿತು.

"ನಿದ್ದೆಯೊಳಗೊರಗಿಲ್ಲ, ಎಚ್ಚರವೊ ಅದು ಅಲ್ಲ,
ಕಣ್ಣನಾವರಿಸಿತ್ತು ಬರಿ ಜೊಂಪು;
ಜೊಂಪಿನಾವೇಶದೊಳಗಿರಲು, ಬಂದಳು ಕೆಳದಿ
ಮಧುರ ಛಂದದ ಗೀತಿ ಬಂದಂತು!
ಜೊಂಪಿನಲಿ ಮೈಯ ತೋರಿ
ಬಂದವಳ ಕೋರಿ ಕೋರಿ
ಎಚ್ಚರದಿ ನೋಂತಿಂದು ನೆನೆಯುತಿಹೆ ಬಾರಿ ಬಾರಿ,
ಆ ನೆನಹೆ ಗುಣುಗುಣಿಸಿ ಕತ್ತಲೆಯನುಣ್ಮಿ ಮೀರಿ,
ಎದೆಗಿರುಳ ಮಾಡಿತ್ತು ಪ್ರಿಯಬಂಧು!
ಆ ಕ್ಷಣಿಕ ಸ್ವಪ್ನವೊಂದು
ತೊಳಗುತಿಹ ರತ್ನದಂತು
ಮನದ ಕತ್ತಲ ತುಂಬಿ ಮಿಂಚುತಿದೆ ಮಾಣ್ಮದಿಂದು,
ಈ ಪ್ರಭೆಯ ಕುಸುರ ಬೆಳಕಿಗೆ ಭಿಕ್ಷೆ ದೊರೆಯದಂದು
ಬಾನತಿಂಗಳು ತಾರೆ ಬರಿ ಕಂದು!"

ಎತ್ತೆತ್ತಲೂ ಸೂಜಿ ಚುಚ್ಚಲೆಡೆಯಿಲ್ಲದ ಕತ್ತಲು. ಝಿಂ-ಝಿಂ-ಝಿಂ-ಎಂಬ ಮಳೆಯ ಸಂತತ ಧಾರೆಯ ಶ್ರುತಿಯೊಡನೆ ಕವಿಯ ಗಂಭೀರ ಉದಾತ್ತ ಧ್ವನಿ ಸಮಶ್ರುತಿಯಲ್ಲಿ ಬೆರೆತಿತ್ತು. ಕಿಡಿಕಿಯಿಂದ ಚಳಿಗಾಲ ನುಗ್ಗುತ್ತಲೆ ಇತ್ತು. ನಡುನಡುಗುವ ದೀಪದ ಕುಡಿಯ ಸುತ್ತ ಪ್ರೇತಪತಂಗದ ಪ್ರದಕ್ಷಿಣೆಯೂ ಯಥಾಪ್ರಕಾರ ಸಾಗಿಯೆ ಇತ್ತು. ಕವಿ ಮೆಲ್ಲ ಮೆಲ್ಲನೆ ಒಳಗೆ ಬಂದನು. ಅವನ ಹಣೆಯ ಛಿದ್ರದೊಳಗಿಂದ ಅದೇ ಹೊರಬಿದ್ದ ಮಿದುಳು ಮಾಲೆ. ಆವರಣವಿಲ್ಲದ ಮಿದುಳ ಮೇಲೆ ಮಳೆನೀರು ಬಿದ್ದು ಕೆಳಗಿಳಿಯುತ್ತಿತ್ತು. ಸರಿಯಾಗಿ ನೋಡಿದೆ, ಅವನ ಮೇಲೆ ಅಲ್ಲಲ್ಲಿ ಕಪ್ಪು ಕಪ್ಪಾಗಿ ಕಾಣುತಿದ್ದವು. ರಕ್ತ ಕಣಗಳಲ್ಲ, ಕೆಸರು. ಕವಿ ಬಂದ ಹಾಗೆಯೆ ಮೆಲ್ಲ ಮೆಲ್ಲಗೆ ಹೊರಟು ಹೋದ.

ನಾನೂ ಪ್ರೇಮಪಾಶದಲ್ಲಿ ಸಿಲುಕಿದವನೆ ಒಂದು ಕಾಲದಲ್ಲಿ.

ಎಷ್ಟು ಕಷ್ಟಪಟ್ಟು ನನ್ನ ತಂದೆಯವರು ನನಗೊಂದು ನೌಕರಿ ಹಚ್ಚಿಕೊಟ್ಟು ಸತ್ತು ಹೋಗಿದ್ದರಲ್ಲಾ, ಆದರೆ ಅದನ್ನು ಉಳಿಸಿಕೊಳ್ಳಲು ನಾನು ಸಮರ್ಥನಾಗಲಿಲ್ಲ. ಒಂದು ತಿಂಗಳು ಕಳೆಯುವ ಮೊದಲೇ ಅದಕ್ಕೆ ಶರಣು ಹೊಡೆದು ಹೊರಬಿದ್ದೆ.

ಯಾಕೆ ಹೊರಬಿದ್ದೆ? ಈ ಪ್ರಶ್ನೆಯನ್ನು ಸಾವಿರ ಸಲ ನನಗೆ ನಾನೆ ಕೇಳಿಕೊಂಡಿದ್ದೇನೆ. ಉತ್ತರವನ್ನು ನಿರ್ಣಯಿಸಿಕೊಂಡಿದ್ದೇನೆ. ಮಾತ್ರ ಸಮರ್ಪಕ ಉತ್ತರವಲ್ಲ.

ಸ್ವಾಭಿಮಾನಕ್ಕೆ ಧಕ್ಕೆ ಬಂದದ್ದರಿಂದ, ನಿಜ, ಅದರಲ್ಲಿಯೂ ಒಂದಿಷ್ಟು ಸತ್ಯಾಂಶವಿಲ್ಲದಿರಲಿಲ್ಲ. ಆದರೆ ಅದೊಂದೇ ಕಾರಣದಿಂದ ನಾನು ನೌಕರಿಯನ್ನು ಒದ್ದು ಹೊರಬಂದೆನೆಂಬುದು ಸತ್ಯವಲ್ಲ. ಇನ್ನೂ ಒಂದು ಕಾರಣವಿತ್ತು. ನಾನು ಪ್ರೇಮದಲ್ಲಿ ಬಿದ್ದಿದ್ದೆ. ಪ್ರೇಮದಲ್ಲಿ ಸಿಲುಕಿದ ಮನುಷ್ಯ. ಇಂಥ ನೀಚ ಕಾರ್ಯಕ್ಕೂ ಹೇಸುವದಿಲ್ಲ. ಅವಳ ಮುಂದೆ ನಾನು ಇಪ್ಪತ್ತೈದು ರೂಪಾಯಿಯ ಕಾರಕೂನನೆಂದು ಯಾವ ಮುಖದಿಂದ ಪರಿಯ ಹೇಳಲಿ? ನಾಚಿಕೆಯಾಯಿತು ನನಗೆ.

ಪಂಕದಿಂದಲ್ಲವೆ ಪಂಕಜದ ಉದ್ಭವ? ನನ್ನ ದಾರಿದ್ರ್ಯದ ಕಲಂಕನ್ನು ಪುನೀತಗೊಳಿಸಲು ಪ್ರೇಮದ ಹೂ ಅರಳಿತ್ತು. ಕಾರ್ಮೋಡದಲ್ಲಿಯೂ ಬೆಳಕಿನ ಹೊಳಪು ಮಿಂಚದೆ?

ಸಹಪಾಠಿಯೊಬ್ಬನ ಮನೆಗೆ ಹೋಗಿ ಬರುವ ಪರಿಪಾಠವಿತ್ತು. ಕಾಲೇಜನಲ್ಲಿ ಜಾಣಹುಡುಗನೆಂದು ನನಗೆ ಮನ್ನಣೆ. ಸರಸ್ವತಿಯ ಒಡ್ಡೋಲಗದಲ್ಲಿ ಬಡವ ಬಲ್ಲಿದರೆಂಬ ಜಾತಿಭೇದಕ್ಕೆ ಇಂಬಿಲ್ಲ. ಅಲ್ಲಿ ನನ್ನ ಕೊರಳಲ್ಲಿ ಜಯಮಾಲೆ. ರೂಪದಲ್ಲಿ ದರಿದ್ರನಲ್ಲ. ನನ್ನ ಗೆಳೆಯನ ತಂಗಿ ನೋಡಿ ಮುಗ್ಧಳಾದುದರಲ್ಲಿ ಸೋಜಿಗವೇನು? ನಾನೂ ಮುಗ್ಧನಾದೆ.

ಬಾಳಿನಲ್ಲಿ ಒಂದು ಹೊಸ ಅಧ್ಯಾಯವೇ ಪ್ರಾರಂಭವಾಯಿತು.

"ಒಳ್ಳೇ ಕಥೆ ಸಿಕ್ಕಿದ ಹಾಗೆ ತೋರುತ್ತದೆ, ಅಲ್ಲ?"

ಹೊರಳಿ ನೋಡಿದರೆ ಒಬ್ಬ ಕುಷ್ಠವ್ಯಾಧಿಗ್ರಸ್ತ ಭಿಕ್ಷುಕ ನಗುತಿದ್ದ. ಅವನ ಕೈಯಲ್ಲಿ ಒಂದೇ ಒಂದು ಬೆರಳು ಉಳಿದಿರಲಿಲ್ಲ. ಕಣ್ಣು ಮೂಗು ಬಾಯಿಗಳಲ್ಲೆಲ್ಲ ವ್ಯಾಧಿಯ ಕುತ್ಸಿತ ಪ್ರಕೋಪದ ವಿಕಾರ ರೂಪ ಮೈವೆತ್ತು ನಿಂತಿತ್ತು.

"ಒಳ್ಳೇ ಕತೆ ಸಿಕ್ಕಿದ ಹಾಗೆ ಕಾಣುತ್ತದೆ ನಿಮಗೆ. ಆದರೆ ಮೊದಲು ನನ್ನದೊಂದು ಕವಿತೆ ಕೇಳಿರಲ್ಲ ಸ್ವಲ್ಪ? ಬದುಕಿದ್ದಾಗ ಕವಿಯೆಂದು ಲೋಕದಲ್ಲಿ ಕೀರ್ತಿಯಿದ್ದಿಲ್ಲ ನಿಜ; ಯಾವ ಮಾಸಪತ್ರಿಕೆಯಲ್ಲಿಯೂ ನನ್ನ ಕವಿತೆ ಬೆಳಕನ್ನೂ ಕಂಡಿಲ್ಲ; ಆದರೂ ನನ್ನ ಹೃದಯದಲ್ಲಿ ಕವಿತೆಯಿತ್ತು. ನನ್ನಲ್ಲೂ ಕೂಳಿಗೆ ಗತಿಯಿಲ್ಲದೆ ತಿರಿದು ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರೂ ನಾನು ಕವಿಯಾಗಿದ್ದೆ."

ಅವನು ತನ್ನದೊಂದು ಕವಿತೆಯನ್ನು ಅನ್ನತೊಡಗಿದ.

"ಬಲುಗಾಲದಿಂದ ಕಡುಪಾಡುಪಟ್ಟೆ
ದುಗುಡವೇ ಬಾಳ್ಗೆ ಮುಪ್ಪು
ಈ ಧರಣಿಯಿಷ್ಟು ಚೆಲುವಾಕೆಯೆಂದು
ನಡುನಡುವೆ ಹಾರುವುದು ನೆಪ್ಪು.
ಹೊಸ ಹಸಿರು ಕರಿಕೆ ಚಿಗುರು,
ಮೂಡಣದ ರವಿಯ ಹೊಂಬೊಗರ,
ಕಾಡಿಗೆಯ ಮುಗಿಲ ಒಪ್ಪಾದ ನೆಳಲ
ನಾ ಕಂಡು ಮೈಯ ಮರೆವೆ.
ಏನಾದರೇನು? ಎಲ್ಲೆಲ್ಲು
ಮೈಯಲ್ಲು ನನ್ನ ಮನದಲ್ಲು
ಹಬ್ಬಿರುವ ತೊನ್ನ, ಹಸಿದೊಡಲ ಬನ್ನ
ಸೈರಿಸಲದೆಂತು ನೆರೆವೆ!
ಆ ಯಾತನೆಯಲಿ ನರಳಿದೆನದೆಂತು
ಹಗಲಿರುಳು ಕಾಣದಲೆ ತಣ್ಪು!
ಈ ಧರಣಿಯಿನಿತು ಚೆಲುವಾಕೆಯೆಂದು
ಆಗಾಗ ಹಾರದೇ ನೆಪ್ಪು.
ಅದು ಏನ ಮೆಚ್ಚಿ ಮತ್ತಾರ ನೆಚ್ಚಿ
ಆ ವಾಸೆ ಹಚ್ಚಿಕೊಂಡೆಂದು
ತಾನಾವ ತಾಯಿ ಹಡೆದಿಹಳೊ ಎನ್ನ
ಆವಲ್ಲಿ–ಅರಿಯೆ ನಾನೊಂದೂ!
ಹತಭಾಗ್ಯ ನೆನ್ನ ಸಲಹೆ
ಆವಾಕೆ ಸುರಿದಳೆನಗೆ

ತೊರೆದ ಮೊಲೆಯ ಆ ಸೊದೆಯ ಸೆಲೆಯ
ಅವಳೆಲ್ಲ?-ಒರೆವರೆನಗಿಲ್ಲ.
ದಿಟವಾಗಿ ಆಕೆಯೆನಗಾಗಿ
ಕಣ್ಣಲ್ಲೆ ಇರುಳುಗಳ ನೀಗಿ
ಕುಳಿತಿದ್ದುದುಂಟೆ?- ಇದು ಸುಳ್ಳುಕತೆ
ನನಗಾರು 'ಎಂದೂ' ಇರಲಿಲ್ಲ.
ನಸು ನೇಹವನ್ನೆ ಕೊಡದಾಕೆ ಕೊಟ್ಟಹಳು
ಮೈಯ ತುಂಬ ತೊನ್ನೊಂದು!
ತಾನಾವ ತಾಯಿ ಹಡೆದಳೋ ಎನ್ನ
ಆವಲ್ಲಿ?-ಅರಿಯೆ ನಾನೊಂದೂ!
ಯಾರ ಶಾಪದಿಂದಾಯ್ತೊ ಜನುಮ?
ಇಲ್ಲಾರ ಶಾಪದಲಿ ಬಂದೆ?
ಅವರಿಗಾಗಿ ನಾ ಶಿಕ್ಷೆ ಭೋಗಿಪಾ-
ಗೆಲ್ಲಿ ನನ್ನ ತಾಯ್ತಂದೆ?
ಈ ಹರಕು ಮೂಗು, ಒಕ್ಕಣ್ಣು,
ಅಂಗಾಂಗ ವಡಸಿದಾ ತೊನ್ನು,-
ಇವ ಕುಷ್ಠಿಯೆಂದು ಹೇಸುವರು ಕಂಡು
ನೀರೋಗಿ ನರರು ನನ್ನ.
ಕಡುಲಜ್ಜೆಯಿಂದ ಮೊಗ ಬಾಡಿ
ಕಂಡವರ ಬಾಗಿಲಲಿ ಬೇಡಿ,
ಹಾಳೊಡಲ ತಣಿಸಿ ನಾಯ್ಗಳಲಿ ಸೆಣಸಿ
ಆಯ್ದುಂಡು ತಂಗಳನ್ನ
ನಾ ಮರ್ತ್ಯಲೋಕದಲಿ ಕಾಲಕಳೆದೆ;
ಇದಕಿಂತ ಹಿರಿದನೇಂ ಕಂಡೆ?
ಮೋಟಾರಿನಡಿಗೆ ಮೈಯೊಗೆದು ಅಂದು ನಾ
ದಿಟಕು ಬದುಕಿಕೊಂಡೆ!

ಬರಿ ಒಂದ ನೆನೆದು ನಾನಿಂದು ನೋವೆ
ನನ್ನನ್ನು ಉಳಿಸಿದಾ ತ್ರಾತ
ನರಲೋಕದಲ್ಲಿ ಸೆರೆಮನೆಯೊಳೀಗ
ನವೆಯುತ್ತಲಿರುವ, ಪಾಪ!"

"ನನ್ನ ನೆನಪು ಅಷ್ಟು ಬೇಗ ಹಾರಿತೇ, ಡಾಕ್ಟರ ಸಾಹೇಬ? ಮೋಟಾರಿನಿಂದ ಜಜ್ಜಿ ಹೋದ ನನ್ನ ದೇಹವನ್ನು ನೀವು ಎಷ್ಟೆಷ್ಟು ಹೋಳು ಮಾಡಿ ಪರೀಕ್ಷಿಸಿ ನೋಡಿದಿರಲ್ಲಾ. ಇಷ್ಟು ಮಾಡಿಯೂ ಸರಿಯಾದ ತೀರ್ಮಾನಕ್ಕೆ ಬರಲು ನಿಮ್ಮಿಂದಾಗಲಿಲ್ಲ. ವಿಚಾರಣೆಯಲ್ಲಿ, ಪಾಪ, ಆ ಬಡ ಡ್ರಾಯವ್ವರನೇ ತಪ್ಪುಗಾರನೆಂದು ತೀರ್ಪಾಗಿ ಹೋಯಿತು. ಆದರೆ ಬಡ ಡ್ರಾಯವ್ವರನದೇನೂ ತಪ್ಪಿರಲಿಲ್ಲ. ಇದರಲ್ಲಿ ನಾನೇ ಬೇಕೆಂದು ನುಗ್ಗಿ ಬಂದು ಅವನ ಮೋಟಾರಿನ ಕೆಳಗೆ ಬಿದ್ದು ಪ್ರಾಣ ಕಳೆದುಕೊಂಡೆ. ಅವನೇನೂ ಕೆಡಹಲಿಲ್ಲ, ನನ್ನನ್ನು ಶಕ್ತಿಮೀರಿ ಉಳಿಸಬೇಕೆಂದೇ ನೋಡಿದ ಪಾಪ! ನೀವೆಲ್ಲರೂ ದಯಾಳುಗಳೇ! ಎಲ್ಲರೂ ನನ್ನನ್ನು ಉಳಿಸಬೇಕೆಂದು ಹೆಣಗಾಡುವವರೆ."

ಅವನ ಕಣ್ಣು ಮೋರೆಗಳಲ್ಲಿ ಏನೋ ಒಂದು ವಿದ್ರೂಪ ನಗೆ ಹಬ್ಬಿತ್ತು. "ಆಹಾ! ನೀವೆಲ್ಲರೂ ಮಹಾ ದಯಾಳುಗಳು-ನೀವೆಲ್ಲರೂ! ಯಾರೂ ಒಂದು ಕಾಸು ಬಿಚ್ಚದಿದ್ದರೂ-ಯಾರೂ ಒಂದು ಹಿಡಿ ಕಾಳು ಕೊಡದಿದ್ದರೂ-ಯಾರೂ"

ಅಷ್ಟಕ್ಕೇ ಅವನ ಮಾತು ನಿಂತುಹೋಯಿತು. ಅವನು ಇದಿರಿನ ಗೋಡೆಯತ್ತ ಕಣ್ಣು ಪಿಳುಕಿಸದೆ ನೋಡತೊಡಗಿದ್ದ. ಅತ್ತ ಹೊರಳಿ ನೋಡಿದೆ. ಕ್ಯಾಲಂಡರನ ಚಿತ್ರದಲ್ಲಿ ಅವನ ಕಣ್ಣು ನಟ್ಟಿದೆ. ಬಾಯಲ್ಲಿ ಒಂದು ಸುದ್ದಿಯಿಲ್ಲ. ಚಿತ್ರವೂ ಅವನನ್ನೇ ದಿಟ್ಟಿಸುವಂತೆ ಕಾಣುತಿತ್ತು.

ಕುಷ್ಠವ್ಯಾಧಿಗ್ರಸ್ತ ಮನುಷ್ಯ ಮೆಲ್ಲಮೆಲ್ಲನೆ ಕ್ಯಾಲಂಡರಿನ ಸಮೀಪಕ್ಕೆ ತೆರಳಿ ಅದರ ಮುಂದೆ ನಿಂತು ಹೇಳತೊಡಗಿದ;

"ನಿನ್ನನ್ನು ಎಲ್ಲೊ ನೋಡಿದಂತೆ ಅನಿಸುತ್ತದೆ ನನಗೆ! ನೀನೇ ಏನು ನನ್ನ ತಾಯಿ? ಇಲ್ಲದಿದ್ದರೆ ನನ್ನ ಮನಸಿನಲ್ಲಿ ಇಷ್ಟೇಕೆ ಆತ್ಮೀಯತೆ ಮೂಡಬೇಕು? ಹೇಳು, ಯಾರು ನೀನು? ಮಾತಾಡು. ನೀನೇ ಏನು ನನ್ನ ತಾಯಿ? ನೀನಿಷ್ಟು ಸುಂದರಿ, ಆದರೂ ನಾನಿಷ್ಟು ಕುರೂಪಿ!"

ಗಾಳಿ ಬುಸ್ಸೆಂದು ಒಳನುಗ್ಗಿ ಕ್ಯಾಲಂಡರನ್ನು ಹಾರಿಸಿ ನೆಲದ ಮೇಲೆ ಒಗೆಯಿತು. ಕುಷ್ಠರೋಗಿ ಕ್ಷಣದಲ್ಲಿ ಎಲ್ಲಿ ಮಾಯವಾದನೊ! ನಾನು ಎದ್ದು ಹೋಗಿ ಕ್ಯಾಲಂಡರನ್ನು ಎತ್ತಿ ಮತ್ತೆ ತೂಗಹಾಕಿದೆ.

ಚಿತ್ರ ಅಳುತ್ತಿತ್ತು !

ಹೌದು. ಅಳುತ್ತಿತ್ತು ! ಹೆಂಗಸರು ಎಷ್ಟು ಸುಲಭವಾಗಿ ಅಳುತ್ತಾರೆ ಮತ್ತು ಎಷ್ಟು ಸಹಜವಾಗಿ ನಗುತ್ತಾರೆ! ಅವಳೂ ಒಮ್ಮೆ ಅತ್ತಿದ್ದಳು. ನಮ್ಮಿಬ್ಬರ ಮಿಲನ ವಾಗುವದು ಅಸಾಧ್ಯವೆಂದು ಆ ದಿನ ಖಂಡಿತವಾಗಿ ಗೊತ್ತಾದಾಗ ಅವಳು ನನ್ನ ವಕ್ಷಃಸ್ಥಲದಲ್ಲಿ ಮೊಗವನ್ನಿಟ್ಟು ಎಷ್ಟು ಅತ್ತಿದ್ದಳು! ಅವಳ ಮದುವೆಯಾಯಿತು. ಆಮೇಲೆ ಅವಳು ನಗುವದನ್ನೂ ನಾನೂ ನೊಡಿದ್ದೇನೆ. ಮೈ ತುಂಬ ಆಭರಣ ಗಳು, ಬೈತಲೆಯಲ್ಲಿ ಸಿಂಧೂರ, ಶರೀರದ ಕಣಕಣದಲ್ಲಿಯೂ ಯೌವನದ ಮಾದಕತೆ. ಶ್ರೀಮಂತನ ಮಗಳು ಶ್ರೀಮಂತನ ಸೊಸೆ, ಶ್ರೀಮಂತನ ಹೆಂಡತಿ, ಯಾಕೆ ನಗಬಾರದು ಅವಳು? ಅವಳ ಅಳುವೆಷ್ಟು ಸತ್ಯವೋ ನಗುವೂ ಅಷ್ಟೇ ಸತ್ಯ.

ಜೀವನದಲ್ಲಿ ಅದೇ ನನ್ನ ಪ್ರಥಮ ಪ್ರೇಮ ಮತ್ತು ಅದೇ ನನ್ನ ಪ್ರಥಮ ಮನೋರಥ ಭಂಗ. ಒಲಿದವಳು ಕೈ ತಪ್ಪಿಹೋದ ಆ ಸಮಯದಲ್ಲಿ ನನಗೆ ಜಗತ್ತಿನ ಪೇಟೆಯಲ್ಲಿ ಒಮ್ಮೆಲೇ ದಿವಾಳಿಯೆದ್ದಂತೆ ಅನಿಸಿತು. ಆದರೆ ಬಂಡವಾಳ ಮಾತ್ರ ಕೈಯಲ್ಲೆ ಇತ್ತು. ಅದು ಮನವರಿಕೆಯಾಗಬೇಕಾದರೆ ಮಾತ್ರ ಸ್ವಲ್ಪ ಕಾಲ ಹಿಡಿಯಿತು.

ಅವಳು ನನ್ನವಳಾಗಲಿಲ್ಲೆಂಬ ದುಃಖವೇ ಸಾಕಷ್ಟು ಗುರುತರವಾಗಿತ್ತು. ಆದರೆ ನನ್ನ ಬಡತನದ ಕಾರಣದಿಂದಲೇ ಅವಳು ಕೈತಪ್ಪಿ ಹೋದಳೆಂದು ತಿಳಿದ ಮೇಲೆ ಆದ ಮರ್ಮಾಂತಿಕ ವೇದನೆ ವರ್ಣನಾತೀತ. ಈ ಕೀಳ್ಮೆಯಿಂದ ನನ್ನ ಬಾಳು ಹಾಳು ಸುರಿಯತೊಡಗಿತು. ನನ್ನನ್ನೇ ನಾನು ಹಳಿದುಕೊಳ್ಳತೊಡಗಿದೆ. “ಕುಳ್ಳನಾದ ನೀನು ಆಕಾಶದ ಚಂದ್ರನಿಗೆ ಕೈಯೊಡ್ಡಿದಿಯಲ್ಲೋ, ಎಷ್ಟು ಸಾಹಸ ನಿನಗೆ! ಈ ಛಲ ಇನ್ನಾದರೂ ಮಣ್ಣು ಮುಕ್ಕಿತೋ ಇಲ್ಲವೋ? ಅಷ್ಟು ದೊಡ್ಡ ದೇಶಿ ಸಂಸ್ಥಾನದ ದಿವಾಣಗಿರಿಯನ್ನು ಸಂಪಾದಿಸಿ ಅವರು ಮಗನಿಗಾಗಿ ಅವಳನ್ನು ತಂದುಕೊಳ್ಳಲನುವಾಗಿರುವಾಗ ನೀನು ಬಡಪಾಯಿ ಅವಳನ್ನು ನಿನ್ನವಳನ್ನಾಗಿ ಮಾಡಿಕೊಳ್ಳಬೇಕೆನ್ನುತಿದ್ದಿಯಲ್ಲ! ಭಾರೀ ದಿಟ್ಟನೇ ಸೈ ನೀನು.”

ನಿಜವಾಗಿಯೂ ನನ್ನ ದಿಟ್ಟತನ ಚಿಕ್ಕದಾಗಿರಲಿಲ್ಲ. ಆ ಮುಗಿಲು ಮುಟ್ಟುವ ಸಾಹಸ ಬೇಗನೇ ನುಚ್ಚು ನೂರಾಯಿತು.

ಇದಕ್ಕಿಂತಲೂ ಕಠೋರವಾದ ಅಗ್ನಿಪರೀಕ್ಷೆ ನನಗಾಗಿ ಕಾದಿತ್ತು. ಬಡತನದ ಬೇಗೆ ನೂರಾರು ನಾಲಿಗೆಗಳನ್ನು ಚಾಚಿ ನನ್ನನ್ನು ಸುತ್ತುವರಿದಿತ್ತು.

ಒಂದು ಕಾಸು ಗಳಿಕೆಯಿಲ್ಲ. ಮನೆಯ ಬಾಡಿಗೆ ಕೊಟ್ಟು ಸಾಗಿಸಿಕೊಂಡು ಹೋಗುವುದು ಸಾಧ್ಯವೇ ಇರಲಿಲ್ಲ. ನನಗೇನಾದರೊಂದು ಉದ್ಯೋಗ ಕೂಡಿ ಬರುವವರೆಗೆ ನಮ್ಮ ಸೋದರ ಮಾವಂದಿರಾದರೂ ಆಶ್ರಯ ಕೊಡಬಹುದೆಂಬ ಆಸೆಯಿಂದ ನಾಲ್ಕನೆಯ ಮಗಳನ್ನು ಕರೆದುಕೊಂಡು ತಾಯಿ ತೌರುಮನೆಗೆ ಹೊರಟುಹೋದಳು... ನಾನು ಒಂದು ಕೋಣೆ ಬಾಡಿಗೆ ಹಿಡಿದು ಉಳಿದವರನ್ನು ಕಟ್ಟಿಕೊಂಡು ಸುದ್ದಿಯ ದಾರಿ ನೋಡುತ್ತ ಇರತೊಡಗಿದೆ.

ಸಮಸ್ಯೆಯೇನೋ ಬಗೆಹರಿಯಿತು - ಆದರೆ ಬೇರೊಂದು ಬಗೆಯಲ್ಲಿ. ನಮ್ಮ ತಾಯಿ ಹೊರಟು ಹೋದ ಒಂದೆರಡು ದಿನಗಳಲ್ಲೆ ನನ್ನ ಇಬ್ಬರು ತಮ್ಮಂದಿರಿಗೂ, ಕರಿಯ ತಂಗಿಗೂ ಕಾಲರಾ ಬೇನೆ ಬಂತು. ನಾನೊಬ್ಬ ಹೇಗೆ ಉಳಿದು ಕೊಂಡೆನೋ ದೇವರಿಗೆ ಗೋಚರ. ಬಡವರ ಮನೆಯಲ್ಲಿ ಕಾಲರಾ ಕಾಲಿಟ್ಟಿತೆಂದರೆ ಅವಸ್ಥೆ ಏನಾಗುವದೆಂದು ಕಣ್ಣಾರೆ ಕಂಡವರು ಮಾತ್ರ ಊಹಿಸಿ ಕೊಳ್ಳಬಲ್ಲರು. ಆ ದೃಶ್ಯವನ್ನು ನಾನು ಸತ್ತರೂ ಮರೆಯಲಾರೆ.

ನಮ್ಮಂಥ ದಟ್ಟದರಿದ್ರರು ಡಾಕ್ಟರರನ್ನು ಮನೆಗೆ ಕರೆತಂದು ಚಿಕಿತ್ಸೆ ಮಾಡಿಸುವದು ಕನಸಿನಲ್ಲಿಯೂ ಸಾಧ್ಯವಿರಲಿಲ್ಲ. ಯಾರೋ ಒಬ್ಬ ಕುಂಟು ವೈದ್ಯನಿದ್ದ. ಅವನ ಕೈಕಾಲು ಕಟ್ಟಿಕೊಂಡೆ. ಆದರೆ ಅವನಿಗೆ ಕರುಣೆಯೇ ಬರಲಿಲ್ಲ. ಕೊನೆಗೊಂದು ದಿನ ಧರ್ಮಾರ್ಥ ಔಷಧಾಲಯದ ಮುಂದೆ ಡಾಕ್ಟರ್ ಸಾಹೇಬರ ಕೃಪಾಕಟಾಕ್ಷದ ಆಸೆ ತೊಟ್ಟು ನೆರೆದ ಭಿಕಾರಿಗಳ ನೆರವಿನಲ್ಲಿ ನಾನೂ ಸೇರಿಕೊಂಡು ಕಾದು ನಿಂತೆ. ಧರ್ಮಾಸ್ಪತ್ರೆಯಿರುವದು ಬಡಬಗ್ಗರಿಗಾಗಿ ಎಂದು ಕೇಳಿದ್ದೆ. ಅಲ್ಲಿ ಹೋಗಿ ನೋಡಿದರೆ ದೀನದರಿದ್ರರು ಗುಂಪು ಗುಂಪಾಗಿ ಒಂದು ಬದಿಯಲ್ಲಿ ನಿಂತಿದ್ದರೇನೋ ಸರಿ. ಡಾಕ್ಟರ್ ಸಾಹೇಬರು ಮಾತ್ರ ತಮ್ಮ ಶ್ರೀಮಂತ ರೋಗಿಯ ಯೋಗಕ್ಷೇಮವನ್ನು ವಿಚಾರಿಸುವದರಲ್ಲಿಯೇ ಮಗ್ನರಾಗಿಬಿಟ್ಟಿದ್ದರು. ಸಾಧಾರಣ ಒಂದೂವರೆ ಎರಡು ಗಂಟೆಗಳ ಕಾಲ ಕಾದು ನಿಲ್ಲಬೇಕಾಯಿತು. ಡಾಕ್ಟರ್ ಸಾಹೇಬರು ಆಸ್ಪತ್ರೆಯಲ್ಲಿ ನೌಕರಿ ಮಾಡುತ್ತಿದ್ದರೇ ಹೊರತು ರೋಗಿಗಳ ಪರೀಕ್ಷೆ ಮಾಡಿ ಔಷಧ ಕೊಡಲು ಅವರಿಗೆಲ್ಲಿತ್ತು ಸಮಯ? ಈ ತಿರುಕರ ತಂಡವನ್ನು ಹೇಗಾದರೂ ಮಾಡಿ ಹನ್ನೊಂದು ಗಂಟೆಯೊಳಗೆ ಹೊತ್ತು ಹಾಕಿಬಿಡ ಬೇಕೆಂದು ಅವರು ಹೆಣಗುತ್ತಿದ್ದರು. ಅವರು ಈ ಗುರಿಯನ್ನಿಟ್ಟುಕೊಂಡು ಹೊರಟಿರುವಾಗ ಬಂದು ಮುಕುರಿದ್ದ ನೂರು-ನೂರೈವತ್ತು ಜನರಿಂದ ಬಗೆಬಗೆಯ ಕುತ್ತಗಳ ವಿಸ್ತಾರವಾದ ಪೂರ್ವ ಕಥೆಗಳನ್ನು ಕೇಳಿಕೊಂಡು ಔಷಧವನ್ನು ಕೊಡುವಷ್ಟು ತಾಳ್ಮೆ ಅವರಿಗೆಲ್ಲಿಂದ ಬರಬೇಕು?

ಇನ್ನೂ ನಮ್ಮ ಹೇಳಿಕೆ ಮುಗಿಯುವ ಮೊದಲೇ ಡಾಕ್ಟರ್ ಸಾಹೇಬರು ಅನುಪಾನ ಪತ್ರಿಕೆಯನ್ನು ಗೀಚಿ ಕೊಟ್ಟುಬಿಡುತ್ತಿದ್ದರು. "ಹೋಗು, ಮೂರು ಸಲ ಕುಡಿಸು, ಬಾರ್ಲಿಗಂಜಿ ಹೊರತು ಬೇರೇನೂ ಕೊಡುವಂತಿಲ್ಲ." ಇದು ಅವರು ಎಲ್ಲರಿಗೂ ಹೇಳುತ್ತಿದ್ದ ಪಥ್ಯ.

ನಾನೆಂದೆ "ಅವರ ಹೊಟ್ಟೆಯಲ್ಲಿ ಒಂದು ಚಮಚೆ ನೀರು ಸಹಿತ ನಿಲ್ಲುವದಿಲ್ಲ–" ಆದರೆ ನನ್ನೀ ಮಾತು ಡಾಕ್ಟರ್ ಸಾಹೇಬರ ಕಿವಿಯನ್ನು ಹೊಕ್ಕಿತೋ ಇಲ್ಲವೋ ಗೊತ್ತೇ ಆಗಲಿಲ್ಲ. ಏಕೆಂದರೆ ಅಷ್ಟರಲ್ಲಿ ಅವರ ಮುಂದೆ ದಪ್ಪನ್ನ ಆಸಾಮಿಯೊಬ್ಬ ನಿಂತು ನಾಲಿಗೆಯನ್ನು ಹೊರಚಾಚಿ ಏನೇನೋ ಅನ್ನುತ್ತಿದ್ದ. ಡಾಕ್ಟರರಾದರೆ ಅವನ ನಾಲಗೆಯ ಕಡೆ ಕಣ್ಣೆತ್ತಿ ನೋಡದೆ, ಒಂದು ಕೈಯಿಂದ ಅವನ ಮುಂಗೈಯನ್ನು ಅದುಮಿ ಹಿಡಿದು ಇನ್ನೊಂದರಿಂದ ಲೆಕ್ಕಣಿಕೆಯನ್ನೋಡಿಸುತ್ತಲೇ ಇದ್ದರು.

ಹತಾಶನಾಗಿ ಹಿಂತಿರುಗಿ ಬರಬೇಕಾಯಿತು.

ಮರಳಿ ಬಂದು ಅಂದು ನಾನು ಕಂಡ ದೃಶ್ಯವನ್ನು ಸತ್ತರೂ ಮರೆಯಲಾರೆ. ರೋಗಿಗಳಲ್ಲಿ ಒಬ್ಬನೂ ಬದುಕಿರಲಿಲ್ಲ. ಸತ್ತಿದ್ದುದೇನೂ ಅಷ್ಟು ವಿಚಿತ್ರವಲ್ಲ. ಆದರೆ ಎಂಥ ಭೀಕರ ಮೃತ್ಯುವದು! ಮಲಮೂತ್ರ ವಾಂತಿಗಳ ಕೊಳದಲ್ಲಿ ಒಬ್ಬರಿಗೊಬ್ಬರು ತೆಕ್ಕೆಬಿದ್ದು ಯದ್ವಾತದ್ವಾ ಬಿದ್ದಿದ್ದರು. ಆ ಮೂರು ಜನ ಮನುಷ್ಯರಲ್ಲ, ಹುಳಗಳು, ಎಂಬಂತೆ ಅವರ ಕಳೆಗೆಟ್ಟ ಆ ನಿಶ್ಚಲ ದೃಷ್ಟಿಗಳು ಇಂದೂ ನನ್ನ ಮನಃಪಟಲದಿಂದ ನಸುವೂ ಮಾಸಿಲ್ಲ. ಮೂರು ಸುಂದರ ಕುಸುಮಗಳನ್ನು ತಾಯ್ಗಿಡದಿಂದ ಹರಿದು, ಮಲಿನಗೊಳಿಸಿ ಚಿತಾಗ್ನಿಯಲ್ಲಿ ಒಕ್ಕೊಟ್ಟು, ಗಹಗಹಿಸುತ್ತಿದ್ದಂತೆ ಕಾಣಿಸಿತು.

ಇಂದು ನಾನೂ ಆಗಿದ್ದೇನೆ ಡಾಕ್ಟರ್. ಅನೇಕ ಕಾಲರಾ ರೋಗಿಗಳ ಚಿಕಿತ್ಸೆ ಮಾಡಿದ್ದೇನೆ. ಆದರೆ ಇದೀಗ ವಿಚಿತ್ರ, ಬಡ ಬಗ್ಗರ ಗೋಳು ಕಿವಿಗೆ ಬಿದ್ದಾಗ ನನ್ನ ಮನಸ್ಸು ಎಳ್ಳಷ್ಟೂ ವಿಚಲಿತವಾಗುವದಿಲ್ಲ. ಯಾಕೋ ಏನೋ–

"ಕೇಳಿರೀ ಅಂದರೆ– "

ಮತ್ತೆ ಆ ಬಿಂದಿ. ಆ ಕ್ರಾಂತಿಕಾರ ಹುಡುಗನನ್ನು ಕೂಗುತ್ತಿದ್ದಾಳೆ. ಬಿಂದೀ ಸಾನಿಯ ರೂಪ ವೇಷ ಹಿಂದಿನಂತಿಲ್ಲ. ಈಗ ಕೂದಲನ್ನು ಒಪ್ಪಾಗಿ ಬಾಚಿ ತುರುಬು ಕಟ್ಟಿದ್ದಾಳೆ. ತುರುಬಿಗೆ ಬೇಲಕುಸುಮದ ದಂಡೆ. ಇದೆಲ್ಲ ಎಲ್ಲಿ ಸಂಪಾದಿಸಿಕೊಂಡಳೋ ಏನೋ. ಕಪೋಲಗಳಿಗೆ ರಂಗು, ತುಟಿಗಳಿಗೆ ರಂಗು,

ಲಕ್ಷಣವಾದ ಕಣ್ಣುಗಳಿಗೆ ಕಾಡಿಗೆ ತಿದ್ದಿದ್ದಾಳೆ. ಉಟ್ಟಿದ್ದು ಮಖಮಲ್ ಅಂಚಿನ ಆಕರ್ಷಕ ಸೀರೆ. ಪುಟ್ಟಪೂರಾ ಮೋಹಿನೀ ವೇಷ!

ಕಿಸಕ್ಕನೆ ನಕ್ಕು ಬಿಂದಿ ಉತ್ತರವಿತ್ತಳು. "ಮತ್ತೇನೂ ಇಲ್ಲ. ಈ ಸೇಫ್ಟಿಪಿನ್ ಒಂದಿಷ್ಟು ಬೆನ್ನಬದಿ–ಓ ಅಲ್ಲಿ–ಚುಚ್ಚುತ್ತಿರಾ?"

ಬಿಂದಿ ಒಯ್ಯಾರದಿಂದ ಅವನ ಕಡೆ ಬೆನ್ನು ಹಾಕಿ ನಿಂತುಕೊಂಡಳು.

ಕ್ರಾಂತಿಕಾರ ಹುಡುಗ ಸ್ವಲ್ಪ ಹಿಂದೆ ಮುಂದೆ ನೋಡಿ ಕೊನೆಗೆ ಸೇಫ್ಟಿಪಿನ್ ಹಚ್ಚಲನುವಾದ.

ಹಚ್ಚುವ ಕೆಲಸ ಮುಗಿಯಲೇ ಇಲ್ಲ.

ಬದುಕಿದ್ದಾಗ ಗಂಡಸರ ನೋಟದ ಕಾಟಕ್ಕೆ ಬೇಸತ್ತು ಅಸಹ್ಯದಿಂದ ಕೊರಳಿಗೆ ಉರುಲು ಹಾಕಿಕೊಂಡಾಕೆ ಇವಳು ಸತ್ತ ಮೇಲೆ ತಾನೇ ಅಭಿಸಾರಿಕೆಯಾಗಿ ಒಲಿಸ ಹೊರಟಿದ್ದಾಳೆ–ಅದೂ ನಾರಿಯ ಮೇಲೆ ಸಿಟ್ಟಿದುಕೊಂಡು ಶಾಂತಿಯ ಆಸೆಯಿಂದ ಸಾಯನೈಡ್ ನುಂಗಿದ ಆ ಭಗ್ನ ಪ್ರಣಯಿಯನ್ನು!.

ಹೊರಗೆ ಕಣ್ಣು ಹಾಯಿಸಿದೆ. ಮಳೆಯ ಹೊಡೆತ ಕಡಿಮೆಯಾಗಿತ್ತು. ಮೋಡದ ತೆರೆ ತೆಳ್ಳಗಾಗಿತ್ತು. ಅದರ ಸಂದಿ ಸಂದಿಯಿಂದ ಬೆಳದಿಂಗಳ ಅಭಾಸ ಕಂಗೊಳಿಸುತಿತ್ತು. ಮಳೆಯೇನೋ ಇನ್ನೂ ಪೂರ್ತಿಯಾಗಿ ನಿಂತಿದ್ದಿಲ್ಲ. ಎದುರಿನ ಗದ್ದೆಯಲ್ಲಿದ್ದ ಆಲದ ಮರ ಇನ್ನೂ ಹನಿಗಳನ್ನು ಉದುರಿಸುತ್ತಿತ್ತು. ಪಿಶಾಚಿಯ ಕಣ್ಣಗಳೆಲ್ಲ ಕುರುಡಾಗಿದ್ದವು–ಮಿಣುಕು ಹುಳ ಒಂದೂ ಕಾಣಲಿಲ್ಲ. ಒಂದು ಅಸ್ಫುಟವಾದ ಮರ್ಮರಧ್ವನಿ ಕತ್ತಲೆಯ ಮೌನವನ್ನು ತಳಮಳಗೊಳಿಸುತ್ತಿತ್ತು. ಹತ್ತಿರ–ದೂರ ಎಲ್ಲ ಕಡೆ ಸೂರ್ಯನ ಕುದುರೆಗಳ ಧ್ವನಿ. ನೋಡು ನೋಡುತ್ತ ಒಂದೆಡೆ ಮೋಡಗಳು ಸರಿದು ಹೋಗಿ ಎರಡು ನಕ್ಷತ್ರಗಳು ತಲೆದೋರಿದವು. ಯಾರವೋ ಕಣ್ಣುಗಳು ನನ್ನ ಕಡೆ ಕೌತುಕ ತುಂಬಿ ದಿಟ್ಟಿಸುತಿರುವಂತೆ ಭಾಸವಾಯಿತು. ಅಷ್ಟರಲ್ಲಿ ಮೋಡಗಳು ತಿರುಗಿ ಅವನ್ನು ಮುಚ್ಚಿಬಿಟ್ಟವು.

ಮಳೆ ನಿಂತಿತು...

ಕಪ್ಪೆಯ ಆರ್ತನಾದ ಮಾತ್ರ ಇನ್ನೂ ಕೇಳುತ್ತಲೇ ಇತ್ತು. ಅದಕ್ಕಿನ್ನೂ ಸಾವು ಬಂದಿರಲಿಲ್ಲ.

ಆ ಹಾವೂ ನುಂಗಿದ ಕಪ್ಪೆಯಂತೆ ನಾವೂ ನಿಧಾನವಾಗಿ ಸಾಯಬೇಕೆ?

ನಡು ನಡುವೆ ವಿಧಿ ಒಂದೊಂದು ಚಮತ್ಕಾರವನ್ನು ಪುಟಿಸುತ್ತಾನೆ.

ಬದುಕೇ ಅಸಹ್ಯವೆಂದು ತೋರಿದಾಗ, ನನ್ನೀ ಶಾಪಗ್ರಸ್ತ ಜೀವನವನ್ನು ಎಲ್ಲಿ ಅಡಗಿಸೋಣವೆಂದೇ ಹೊಳೆಯದಿದ್ದಾಗ, ದಡಗಾಣದ ಸಮುದ್ರದಲ್ಲಿ ಉತ್ತಾಲ ತರಂಗಗಳ ಹೊರತು ಬೇರೊಂದು ಕಣ್ಣಿಗೆ ಬೀಳದಿದ್ದಾಗ-ಆಗ ಹಠಾತ್ತಾಗಿ ದಡ ಕಾಣಿಸಿತು. ನನ್ನೀ ಕಷ್ಟ ಪರಂಪರೆಯನ್ನು ಕೇಳಿ ಮನ ಕರಗಿದ ನನ್ನ ಗೆಳೆಯನೊಬ್ಬನ ತಂದೆ ಧನ ಸಹಾಯ ಮಾಡಿದ್ದರಿಂದ ನಾನು ವೈದಕೀಯ ಕಾಲೇಜಿಗೆ ಸೇರಿದೆ, ತಾಯಿಯೂ ಅವಿವಾಹಿತ ಭಗಿನಿಯ ಸಹಿತ ತೌರುಮನೆ ಯಲ್ಲಿ ಉಳಿದುಕೊಂಡು ನಾನು ಡಾಕ್ಟರ್‌ನಾಗಿ ಹೊರಬಂದೆನೆಂದರೆ ತನ್ನ ಸಮಸ್ತ ದುಃಖಗಳು ಕೊನೆಗೊಂಡಾವೆಂಬ ಆಸೆಯಿಂದ ದಿನ ದೂಡ ಹತ್ತಿದಳು.

ತಾಯಿಯ ಆಭರಣಗಳನ್ನು ಮಾರಿ ನಿಶ್ಚಿಂತೆಯಿಂದ ಕಾಲೇಜಿನ ಪಠ್ಯ ಪುಸ್ತಕಗಳನ್ನು ಕೊಂಡುಕೊಂಡೆ. ಆ ಆಭರಣಗಳೇ ನಮ್ಮ ಕಟ್ಟಕಡೆಯ ಸೊತ್ತು ಗಳಾಗಿದ್ದವು. ಆ ಮೇಲೆ ಉಳಿದುದು ಕೇವಲ ತಾಯಿಯ ಹರಕೆ ಮತ್ತು ನನ್ನ ಅದೃಷ್ಟ

ಓದು ಬರಹವೊಂದರಲ್ಲಿ ಮಾತ್ರ ಅದೃಷ್ಟ ಎಂದೆಂದೂ ನನ್ನ ಕೈ ಬಿಡಲಿಲ್ಲ. ಸರಸ್ವತಿ ಬಿಡುಗೈಯಿಂದಲೇ ವರಪ್ರದಾನ ಮಾಡಿದ್ದಳು. ವೈದ್ಯಕೀಯ ಕಾಲೇಜಿನ ಪ್ರತಿಯೊಂದು ಪರೀಕ್ಷೆಯಲ್ಲಿಯೂ ನಾನು ಮೊದಲನೆಯವನಾಗಿ ತೇರ್ಗಡೆ ಹೊಂದಿದೆ. ಎಲ್ಲ ಶಿಷ್ಯವೃತ್ತಿಗಳೂ ಪದಕಗಳೂ ನನ್ನ ಕೈ ಸೇರಿದವು.

ಅದೆಲ್ಲ ಸರಿಹೋಯಿತು. ಆದರೂ ನನ್ನ ದುಃಖದ ಕೊಡ ಇನ್ನೂ ತುಂಬಿರಲಿಲ್ಲ. ನಾಲ್ಕೂ ಕಡೆಗಳಿಂದ ಮತ್ತೆ ಮೋಡ ಮುಸುಕಿತು. ಮಿಂಚು ಝಳಪಿಸಿತು. ಗುಡುಗು ಮೊಳಗಿತು.

ನನ್ನ ಗೆಳೆಯನ ತಂದೆ-ಯಾರ ಕರುಣೆಯಿಂದ ನನಗೆ ವೈದ್ಯಕೀಯ ಕಾಲೇಜಿನಲ್ಲಿ ವ್ಯಾಸಂಗ ನಡೆಸುವುದು ಸಾಧ್ಯವಾಯಿತೋ ಅವರು-ಒಂದು ದಿನ ದೈವಾಧೀನರಾದರು. ಎರಡನೆ ಬಾರಿ ಪಿತೃಹೀನನಾದೆ ನಾನು. ಕೇವಲ ಪಿತೃಹೀನ ನಷ್ಟೇ ಅಲ್ಲ. ಮಿತ್ರಹೀನನೂ ಆದೆ. ನನ್ನ ಗೆಳೆಯ ಬಿ.ಎಸ್.ಸಿ. ವರ್ಗದಲ್ಲಿ ಓದುತ್ತಿದ್ದ. ಅವನೊಂದು ದಿನ ನನ್ನ ಬಳಿ ಬಂದು ಹೇಳಿದ. "ನೋಡಪ್ಪ ನೀನು ಕೋಣೆಯಲ್ಲಿ ಅಸ್ಥಿಪಂಜರಗಳನ್ನು ತಂದು ಹಾಕಿಕೊಂಡಿರುತ್ತೀ. ಇದೆಲ್ಲ ನನ್ನ ತಾಯಿಗೆ ಸೇರುವುದಿಲ್ಲ. ಏನು ಮಾಡಲಿ ಹೇಳು? ಅಲ್ಲದೆ, -ನೋಡು, ನನಗೂ ಯಾಕೋ ಈಗ ಕೆಲ ದಿನಗಳಿಂದ ಎಲ್ಲಿಲ್ಲದ ದುಃಸ್ವಪ್ನಗಳು-"

ಮೂಳೆಗೀಳೆಗಳನ್ನು ತಂದೊಟ್ಟಿಕೊಂಡು ಆ ಕೋಣೆಯಲ್ಲಿ ನಾನು ಇರತೊಡಗಿ ಎರಡು ವರ್ಷವಾಗಿತ್ತು. ಈವರೆಗೆ ತಾಯಿಯೂ ಯಾವ

ಅಡ್ಡಿಯನ್ನೂ ಎತ್ತಿರಲಿಲ್ಲ. ಗೆಳೆಯನಿಗೂ ಕೆಟ್ಟ ಕನಸುಗಳು ಬಿದ್ದಿದ್ದಿಲ್ಲ. ಈಗೇಕೆ ಆಕಸ್ಮಾತ್ತಾಗಿ ಇವೆಲ್ಲ ಪ್ರಾರಂಭವಾದವು? ಏಕೆ ಪ್ರಾರಂಭವಾದವೋ ಬಹು ಕಾಲ ನನಗೆ ಗೊತ್ತಾಗಲೇ ಇಲ್ಲ. ನನ್ನ ನಡೆನುಡಿಗಳಲ್ಲಾದರೂ ಅಂಥ ಆಕ್ಷೇಪಾರ್ಹ ವಿಚಾರಗಳಿರಲಿಲ್ಲ. ಹಾಗಾದರೆ ಹೀಗೇಕಾಯಿತು?

ಎಷ್ಟೋ ದಿನಗಳ ನಂತರ ನನಗೆ ಇದರ ಮರ್ಮ ತಿಳಿಯಿತು. ಕಾರಣ ಬೇರೇನೂ ಇರಲಿಲ್ಲ–"ಕೇವಲ ನನ್ನ ಯಶಸ್ಸು. ನಾನು ಜಾಣ ಹುಡುಗ. ಪ್ರತಿಯೊಂದು ಪರೀಕ್ಷೆಯಲ್ಲಿಯೂ ಉಚ್ಚ ಶ್ರೇಣಿಯಲ್ಲಿ ತೇರ್ಗಡೆ ಹೊಂದುತಿದ್ದೆ. ನನ್ನ ಗೆಳೆಯ ಬಿ.ಎಸ್.ಸಿ. ವರ್ಗದಲ್ಲಿ ಮತ್ತೆ ಮತ್ತೆ ಸೋಲುತಿದ್ದ. ಇದೇ ಇಷ್ಟೆಲ್ಲ ಸಂಕಟದ ಮೂಲ. ಹೊಟ್ಟೆಕಿಚ್ಚು ಮನುಷ್ಯನ ಹುಟ್ಟುಗುಣ. ಅದರಿಂದ ಸರ್ವಥಾ ಮುಕ್ತರಾದವರು ತೀರ ವಿರಳ. ಅಸೂಯೆ ಅಂಥ ದುರ್ಲಭ ವಸ್ತುವೇನೂ ಅಲ್ಲ. ಅಧಿಕಾಂಶ ಕಲಹಗಳಲ್ಲಿ ಅದರ ಕೈವಾಡ ಇದ್ದೇ ಇರುತ್ತದೆ" ಪ್ರತ್ಯಕ್ಷವಾಗಿ ಅಲ್ಲದಿದ್ದರೆ ಪರೋಕ್ಷವಾಗಿ.

ಅದೇನೇ ಇರಲಿ, ಇದೆಲ್ಲದರ ಫಲವಾಗಿ ನಾನು ಆ ಗೆಳೆಯನ ಮನೆಯಿಂದ ತಳ ಕೀಳಬೇಕಾಗಿ ಬಂತು. ದಿನಕ್ಕೆರಡು ಬಾರಿ ಊಟಕ್ಕೆ, ರಾತ್ರಿ ಮಲಗಲಿಕ್ಕೆ ನಾನು ಅಲ್ಲಿ ಹೋಗುತ್ತಿದ್ದೆ. ಅದೂ ಅಂದಿನಿಂದ ನಿಂತು ಹೋಯಿತು.

ಹೊರೆಯ ಮೇಲೆ ಹೊರೆ ಏರಿಸಿಕೊಳ್ಳುವವನಂತೆ ಪ್ರಾಯವೇಟ್ ಟ್ಯೂಶನ್ನಿನ ಭಾರವೊಂದನ್ನು ಹೊಸದಾಗಿ ಹೆಗಲ ಮೇಲೆ ತೆಗೆದುಕೊಂಡೆ. ಹಗಲಿಡೀ ಅಸ್ಥಿಪಂಜರಗಳೊಡನೆ ಹೆಣಗಾಡಿ ಸಂಜೆ ಒಬ್ಬ ಶ್ರೀಮಂತನ ಮುದ್ದಿನ ಮಗನನ್ನು ಕಟ್ಟಿಕೊಂಡು ಕೂಡುತಿದ್ದೆ. ಅವನಿಗೆ ನಾನು ಏನು ಕಲಿಸುತಿದ್ದೆನೋ ನನಗೆ ಗೊತ್ತಿದ್ದಿಲ್ಲ. ವಾಸ್ತಾವಿಕವಾಗಿ ಏನೇನೂ ಕಲಿಸುತ್ತಿರಲಿಲ್ಲ. ಅವನು ನನ್ನ ಮನಸ್ಸಿಗೆ ಬಂದದ್ದನ್ನೇ ಮಾಡುತ್ತಿದ್ದ. ನಾನು ಸುಮ್ಮನೇ ಕುಳಿತುಕೊಂಡು ನೋಡುತ್ತಿದ್ದೆ. ಸ್ವಲ್ಪ ಗದರಿಸಿ ಏನಾದರೂ ಮಾಡ ಹೇಳಿದರೆ ಅವನು ಬಿಕ್ಕಿ ಬಿಕ್ಕಿ ಅಳತೊಡಗುತ್ತಿದ್ದ. ಹೇಳಿಕೇಳಿ ಹತ್ತು ವರ್ಷದ ಬಡಕಲು ಮಗು ಆತ. ಮೂಗು ಚಪ್ಪಟೆ, ಹಲ್ಲು ಹುಳುಕು. ಆದರೂ ತಂದೆ ತಾಯಿಗಳ ಕಣ್ಮಣಿ. ಅವನಿಗೆ ಏನೂ ಅನ್ನುವಂತಿರಲಿಲ್ಲ. ಅವನ ಓದು ಬರಹ ಸ್ವಲ್ಪವೂ ಮುಂದುವರಿಯದಿರುವದನ್ನು ಕಂಡು ಒಂದು ದಿನ ಅವನ ತಂದೆಗೆ ಹೇಳಿದೆ. "ಹುಡುಗನಿಗೆ ಒಂದಿಷ್ಟು ತಾಕೀತು ಮಾಡಬೇಕು ನೋಡಿರಿ" ಎಂದು ಶ್ರೀಮಂತ ನಿರ್ವಿಕಾರ ಚಿತ್ತದಿಂದ ಉತ್ತರ ಕೊಟ್ಟ. "ತಾಕೀತು ಗೀಕೀತು ಮಾಡಬೇಕಾಗಿಲ್ಲ. ಅದಕ್ಕಾಗಿ ನಿಮ್ಮನ್ನು

ಇಟ್ಟುಕೊಂಡದ್ದೂ ಅಲ್ಲ. ನೀವು ಸಂಜೆ ಹೊತ್ತು ಅವನನ್ನು ಒಂದಿಷ್ಟು ರಮಿಸಿ ಇಲ್ಲೆ ತಡೆದು ಹಾಕಿರಿ. ಏನಾದರೂ ಓದು ಬರಹ ಬಂದರೆ ನೆಟ್ಟಗೆ, ಬಾರದಿದ್ದರೆ ನಿರ್ಬಂಧ ಮಾಡುವ ಅವಶ್ಯಕತೆ ಇಲ್ಲ. ಮುಖ್ಯ, ಸಂಜೆ ಹೊತ್ತಿನಲ್ಲಿ ಅವನು ಅಟ್ಟದ ಮೇಲೆ ಬಾರದಂತೆ ನೋಡಿಕೊಂಡು ಬಿಡಿರಿ, ತೀರಿ ಹೋಯಿತು." ಆ ದೊಡ್ಡ ಮನುಷ್ಯ ಕೈ ತುಂಬ ಸಂಬಳ ಕೊಡುತಿದ್ದ. ಅಂದ ಮೇಲೆ ನಾನೇಕೆ ಅವನಿಗೆ ಎದುರಾಡಲಿ? ಕೆಲ ದಿನಗಳ ಮೇಲೆ ಗುಟ್ಟು ತಿಳಿಯಿತು-ಸಂಜೆ ಹೊತ್ತಿಗೆ ಹುಡುಗ ಅಟ್ಟದ ಮೇಲೆ ಹೋಗಲು ಏನು ಅಡ್ಡಿ, ಎಂದು. ಹುಡುಗನ ತಾಯಿ ಹುಚ್ಚಿ. ಅವಳನ್ನು ಅಟ್ಟದ ಮೇಲೊಂದು ಕೋಣೆಯಲ್ಲಿ ಹಾಕಿದ್ದರು. ಸಂಜೆ ಹೊತ್ತಿನಲ್ಲಿ ಅವಳಿಗೆರಡು ತುತ್ತು ಉಣಿಸಬೇಕಾಗುತ್ತಿತ್ತು. ಒತ್ತಾಯದಿಂದ ಬಾಯಿಯನ್ನು ಬಿಡಿಸಿ ಎರಡು ತುತ್ತು ಗಂಜಿಯನ್ನಾದರೂ ಕಾಣಿಸದಿದ್ದರೆ ಅವಳು ಉಪವಾಸದಿಂದಲೇ ಸಾಯಬಹುದೆಂದು ಡಾಕ್ಟರ್ ಜನರು ಸಂಶಯಪಟ್ಟಿದ್ದರು. ಒತ್ತಾಯದಿಂದ ಉಣಿಸುವ ವ್ಯಾಪಾರ ಬಹಳ ದೃಷ್ಟಿ ವಿರುದ್ಧವಲ್ಲವೆ? ಅದಕ್ಕಾಗಿಯೇ ಆ ದೊಡ್ಡ ಮನುಷ್ಯ ಸಂಜೆಯ ಹೊತ್ತಿನಲ್ಲಿ ಮಗನನ್ನು ಕೆಳಗೇ ತಡೆದಿಡುವ ವ್ಯವಸ್ಥೆ ಮಾಡಿದ್ದ. ಓದುಬರಹ ಬರಿ ನೆವ.

"ನಾನು ನಿನ್ನನ್ನೇ ಮದುವೆಯಾಗುವೆ. ನಿನಗೆ ಕಣ್ಣುಗಳಿಲ್ಲ. ನೀನಾದರೆ ಕಾಣಲಾರಿ. ನಿನ್ನನ್ನೇ ಮದುವೆಯಾಗುವೆ!"

ಬೊಜ್ಜು ಬೆಳೆದ ಆ ಕಪ್ಪು ಹುಡುಗಿ ಮತ್ತೆ ಬಂದಿದ್ದಳು. ಎದುರಿಗೆ ರುಂಡ ವಿಲ್ಲದ ಕಬಂಧವೊಂದು ಲೋಲುಪ ಬಾಹುಗಳನ್ನು ಚಾಚಿ ಮುನ್ನುಗು ತ್ತಿತ್ತು.

ಹುಡುಗಿ ಹೇಳುತ್ತಿದ್ದಳು, "ನೀನೇ ನನ್ನ ತಾರಕ, ಕಣ್ಣಿದ್ದವರಿಗೆ ನನ್ನ ಕಷ್ಟ ಕಾಣಿಸಲಿಲ್ಲ. ನಿನಗೆ ಬಾಯಿಯಿಲ್ಲ, ಕಣ್ಣೂ ಇಲ್ಲ. ನೀನಾದರೆ ನನ್ನ ಮನೋ ವ್ಯಥೆಯನ್ನು ಮನಗಾಣುವಿ."

ಗಾಳಿ ಸುಯ್ಯೆಂದು ಬೀಸಿ ದೀಪವನ್ನು ನಂದಿಸಿಬಿಟ್ಟಿತು. ನಾನು ಎದ್ದು ಅದನ್ನು ಹಚ್ಚಿದೆ. ನೋಡಿದರೆ ಯಾರೂ ಇಲ್ಲ. ಒಂದು ಕಾಗದದ ಚೂರು ಮಾತ್ರ ಕೋಣೆಯಲ್ಲಿ ಹುಚ್ಚನಂತೆ ಗಿರಿಗಿರಿ ತಿರುಗುತ್ತ ಹಾರುತ್ತಿತ್ತು. ಅದನ್ನು ಹಿಡಿದು ತಂದು ಮೇಜಿನ ಮೇಲಿಟ್ಟೆ. ಮಹತ್ವದ ಕಾಗದವಾಗಿತ್ತದು.

ಹುಚ್ಚಿ ತಾಯಿಯ ಒಬ್ಬನೇ ಮಗನನ್ನು ತಡೆದು ನಿಲಿಸಿಕೊಳ್ಳುವದರದಲ್ಲಿ ನನ್ನ ಪ್ರತಿ ಸಂಜೆಯೂ ಕಳೆದು ಹೋಗುತ್ತಿತ್ತು. ಅವರ ಮನೆತನದೊಡನೆ ಸಂಬಂಧ ಬೆಳೆದಂತೆ ಆ ಮಹಿಳೆಗೆ ಹುಚ್ಚೇಕೆ ಹಿಡಿಯಿತೆಂದೂ ತಿಳಿದುಬಂತು.

ಕಾರಣ ಬೇರೇನೂ ಇರಲಿಲ್ಲ. ಅವಳಿಗೆ ಆರೇಳು ಮಕ್ಕಳು, ಹುಟ್ಟಿ ಹುಟ್ಟಿ ಸತ್ತಿದ್ದವು. ಈ ಬಡಕಲು ಹುಡುಗನೊಬ್ಬನೇ ಉಳಿದಿದ್ದ. ಮಕ್ಕಳು ಸತ್ತ ಕಾರಣವೂ ಅವಳಿಗೆ ಹಿಂದಿನಿಂದ ಗೊತ್ತಾಯಿತು. ಗಂಡನ ಲಂಪಟತನವೇ ಅದು. ಇಷ್ಟೆಲ್ಲ ದಾರುಣ ಶೋಕ ಬಂದರೂ ಅವನ ಚರ್ಯೆ ಬದಲಾಗಿರಲಿಲ್ಲ. ಹುಚ್ಚಿ ಹೆಂಡತಿಯನ್ನು ಅಟ್ಟದ ಮೇಲೆ ಬಂಧಿಸಿಟ್ಟು, ಏಕಮಾತ್ರ ಪುತ್ರನನ್ನು ನನ್ನ ಜೋಪಾನಕ್ಕೆ ಬಿಟ್ಟು, ಆ ಮನುಷ್ಯ ಅನುದಿನ ಸಂಜೆ ಬೇಟದ ಬೇಟೆಗಾಗಿ ಪಯಣ ಮಾಡುತ್ತಿದ್ದ. ಮೈಗೆ ಇಸ್ತ್ರಿಯನುಣ್ಣನ್ನ ಪಂಜಾಬಿ ಅಂಗಿ, ಕಾಲಿಗೆ ಪೇಟೆಂಟ್ ಲೆದರಿನ ಜೋಡು, ಕೈಯಲ್ಲಿ ಮಲ್ಲಿಗೆಯ ಚಂಡು. ಮದಿರಾಪಾನದಿಂದ ಕಣ್ಣೆರಡೂ ಕೆಂಪಡರಿರುತ್ತಿದ್ದವು. ಬಲಗೈಯಲ್ಲೊಂದು ಬೆಲೆಬಾಳುವ ಸಿಗರೇಟು ಹೊತ್ತಿಸಿ ಹಿಡಿದುಕೊಂಡು, ತಳತಳಿಸುವ ಮೋಟಾರು ಹತ್ತಿ ಹೊರಬೀಳುತ್ತಿದ್ದನಾತ. ರಾತ್ರಿಯಲ್ಲಿ ತಿರುಗಿ ಬರುತ್ತಲೇ ಇರಲಿಲ್ಲ. ದೇವರು ಮನುಷ್ಯನಲ್ಲಿ ಕಾಮ ಪ್ರವೃತ್ತಿಯನ್ನಿಟ್ಟಿರುವದು ಸೃಷ್ಟಿ ರಕ್ಷಣೆಗಾಗಿ. ಆದರೆ ಮನುಷ್ಯ ಸಭ್ಯನಾದ ಮೇಲೆ–ಅದಕ್ಕಿಂತಲೂ ಮುಂಚಿನಿಂದಲೇ ಇರಬಹುದು–ಆ ಪ್ರವೃತ್ತಿಯನ್ನೇ ಸೃಷ್ಟಿ ಧ್ವಂಸಕ್ಕಾಗಿ ವಿನಿಯೋಗಿಸಿಬಿಡುತ್ತಾನೆ......

ಕವಿ ನಿಧಾನವಾಗಿ ಪ್ರವೇಶಿಸಿದ.

ಅವನ ರೂಪ ಭಯಾನಕರವಾಗಿತ್ತು. ಮಿದುಳೆಲ್ಲ ಹೊರಬಿದ್ದಂತಿತ್ತು, ಕಡೆಗಣ್ಣಿಂದ ರಕ್ತ ಸುರಿಯುತ್ತಿತ್ತು.

"ನಿದ್ದೆಯಲಿ ಕನಸಿನಾ ಕುರುಹಗಳ ನೆಟ್ಟು ನೆಟ್ಟು,
ನನ್ನ ಮನದಲಿ ನಿನ್ನ ಸೋಂಕಿನಾ ಕಂಪನಿಟ್ಟು,
ಸಿರಿಲಜ್ಜೆಯೊಂದು ಸಮ್ಮೋಹನಿಯ ತೆರೆಯ ಮೆರೆಗೆ
ಒಮ್ಮೆಲೇ ನೀ ಬಂದು ನಿಂತೆಯಲಗೆ!

ನಿನ್ನ ಕಾಡಿಗೆಗಣ್ಣ ಕುಡಿಯೊಳಿತ್ತಾ ಹತಿಯನು
ಎದೆಯ ಬೀಣೆಯ ಮಿಡಿದ ಗಂಧರ್ವನಾವನವನು?
ಹಗಲೇನು ಇರುಳೇನು ಬಿಸಿಲೊ ಬೆಳ್ಳಿಯೊ ಜೊನ್ನವೊ
ತಿಳಿವು ಮರೆವಿನ ನಡುವೆ ಇದು ಸ್ವಪ್ನವೋ
ಆವ ಸೊಬಗಿದು ನಿನ್ನ ತನುವಿನಲಿ ತುಂಬಿ ಹರಿದು,
ನನ್ನ ನಯನಗಳ ನಿಮಿಷವನೊಯ್ದುದೆಂಬೆ ಸೆಳೆದು,

ಅಂತರಂಗದ ಕಿವಿಯೊಳಾವ ಕತೆಯನು ನುಡಿದುದೊ
ಆವ ಭಾವದೊಳಾವ ರಾಗದೊಳಗೊ!

ನಿನ್ನೊಳಗೆ ಅಡಗಿರುವೊಲಾರ ನಾ ಕಾಂಬೆನೆಲಗೆ?
ಎಂದಾದರೆನ್ನ ನೀ ನೆನೆವೆಯಾ ಕನಸಿನೊಳಗೆ?
ಅರ ಪೂಜಿಪೆ ನಾನು ಛಂದದಲಿ ಗಾನದಲ್ಲಿ
ಕಿತ್ತರ್ಪಿಸಿದ ಹೃತ್ಪ್ರಸೂನದಲ್ಲಿ?
ಓ ಎನ್ನ ಗುಪಿತ ಹೃದಯವನು ಕದ್ದಾಕೆ! ನಿನಗೆ
ಎಲ್ಲೆ ಕಟ್ಟಿಲ್ಲವೇನೋ! ಅದರರಿಯದೆನಗೆ,
ಬರಿ ಮಾಯೆಯೋ ನೀನು, ಮಾಯೆಯಲ್ಲದ ಮಾಟವೋ,
ಬರಿದೆ ವಂಚಿಸುವ ನೆರಳಿನ ಹೂಟವೊ!

ಅರಿಯೆ: ಆದರು ನಾನು ಬಾಳಿನಲಿ ಸಾವಿನಲ್ಲಿ
ವಿಸು ಮುಡಿಪುಗಳಿಟ್ಟೆ ನಿನ್ನಡಿಯ ಠಾವಿನಲ್ಲಿ,
ವರ್ಣಸುಂದರ ಗಂಧಮಧುರ ಛಂದಗಳೊಳೇಸೊ
ವಿಧುರ ಹೃದಯದ ಕಂದವಗಳೊಳೇಸೊ?"

ಹಾಡುತ್ತ ಹಾಡುತ್ತ ಬಂದ, ಹಾಡುತ್ತ ಹಾಡುತ್ತ ಹೊರಟುಹೋದ, ಕಾಮದ ಇನ್ನೊಂದು ರೂಪ. ಛಂದೋಲಯಾನುಪ್ರಾಸಗಳಿಂದ ತನ್ನ ಅಂತರಂಗದ ದಿಟಸಟೆಗಳನ್ನೆಲ್ಲ ಬೆಳಗಿಸುತ್ತ ಅಲೆಯುತ್ತಿದ್ದನಾತ,

ಅನಿವಾರ್ಯ.

ನಿಜವಾಗಿ ಅನಿವಾರ್ಯ.

ಆಕಸ್ಮಾತ್ತಾಗಿ ಒಂದು ದಿನ ತಾಯಿಯ ಕಾಗದ ಬಂತು. ಓದಿ ಮನಸು ಅರಳಿತು. ಕಾರಣವಿಲ್ಲದೆ ಅಲ್ಲ. ತಂಗಿಯ ವಿವಾಹ ನಿಶ್ಚಯವಾದಂತೆಯೆ ಆಗಿತ್ತಂತೆ. ನಾನೊಮ್ಮೆ ಹೋಗಿ ಕೊಡಕೊಳ್ಳುವ ಮಾತುಗಳನ್ನು ಮುಗಿಸಿದೆನೆಂದರೆ ಮತ್ತೆ ವಿಲಂಬವಿಲ್ಲದೆ ಶುಭಕಾರ್ಯ ಸಾಂಗವಾಗುವದು. ಕೊಡಕೊಳ್ಳುವ ಮಾತೆಂದಾಕ್ಷಣ ಗಾಬರಿಯಾಗಬೇಕಾಗಿಲ್ಲ. ರೊಕ್ಕದ ದೆಸೆಯಿಂದ ಯಾವುದೂ ನಿಂತು ಹೋಗಲಿಕ್ಕಿಲ್ಲ. ವರ ನಮ್ಮ ಚಂಪೆಯನ್ನು ಕಂಡು ಒಪ್ಪಿಗೆಯಾಗಿತ್ತು. ಹಣ

ಬೇಕಾಗಿಲ್ಲ. ಹರ್ಷಚಿತ್ತದಿಂದ ನಾನು ಸೋದನಮಾವನ ಮನೆಗೆ ಪಯಣ ಬೆಳೆಸಿದೆ.

ಅಲ್ಲಿ ಹೋದ ಮೇಲೆ ಕಣ್ಣು ತೆರೆಯಿತು! ಸಿಡಿಲು ಬಡಿದವನಂತೆ ದಂಗಾಗಿ ನೋಡಿದೆ-ವರನ ವಯಸ್ಸು ಅರವತ್ತೈದೋ ಎಪ್ಪತ್ತೈದೋ ಇನ್ನೂ ಹೆಚ್ಚೋ! ಪ್ರಾಚ್ಯ ಸಂಶೋಧಕರಲ್ಲದವರಿಗೆ ಶ್ರೀಮಾನ್ ಕೃಷ್ಣಕುಮಾರರಾಯರ ವಯಸ್ಸನ್ನು ನಿರ್ಧರಿಸುವದು ಬಿಗಿ. ಹಳ್ಳಿಯಲ್ಲಿ ಅವರ ಓರಗೆಯವರು ಒಬ್ಬರೂ ಬದುಕಿರಲಿಲ್ಲ.

ಚಂಪೆಯ ಮುಖದ ನಗೆ ಒಣಗಿಹೋಗಿತ್ತು. ತಾಯಿಯ ಕಣ್ಣೀರು ನನ್ನನ್ನು ಕಂಡು ನಗೆಯಾಗಿ ಮಾರ್ಪಡುವ ಪ್ರಯತ್ನದಲ್ಲಿ. ಇನ್ನಷ್ಟು ನಿರ್ವಿಣ್ಣ ವಾಯಿತು. ಬ್ರಾಹ್ಮಣರ ಮನೆಯಲ್ಲಿ ಕನ್ಯಾಭಾರವೆಂದರೆ ವಿಷಮಭಾರ ತಾನೆ! ಆದರಿಂದಲೇ ಈ ಎಪ್ಪತ್ತರ ನಡುಗು ಮುದುಕನಿಗೇ ನಮ್ಮ ಚಂಪೆಯನ್ನು ಧಾರೆ ಯೆರೆದುಕೊಡಲು ನಮ್ಮ ತಾಯಿ ಇಷ್ಟು ಅವಸರ ಪಡುತ್ತಿದ್ದಳು.

ತಾಯಿಗೆ ಹೇಳಿದೆ ನಾನು, "ಇದಕ್ಕಿಂತ ಚಂಪೆಯನ್ನು ಕೈ ಕಾಲು ಕಟ್ಟಿ ಹೊಳೆಯಲ್ಲಿ ಮುಳುಗಿಸಿ ಬಿಡೋಣವಲ್ಲ!"

ತಾಯಿ ಉತ್ತರಿಸಿದಳು, "ಕೃಷ್ಣರಾಯರು ಅನುರೂಪ ವರನಲ್ಲ ಅನ್ನೋದು ನನಗೂ ತಿಳಿಯುತ್ತದೆ. ಅದನ್ನು ನೀನು ಹೇಳಿಕೊಡಬೇಕಾಗಿಲ್ಲ. ಆದರೆ ಕೈಲಿ ಒಂದು ಬಿಡಿ ಕಾಸೂ ಇಲ್ಲದವರಿಗೆ ಇದಕ್ಕಿಂತ ಯೋಗ್ಯ ವರ ಹೇಗೆ ಗಂಟು ಬೀಳಬೇಕು ಹೇಳು? ಚಂಪೆಗೆ ಈಗ ಹದಿನೇಳು ತುಂಬಿ ಹದಿನೆಂಟು ನಡೆಯುತಿದೆ, ಇದರ ಲೆಕ್ಕ ಇಟ್ಟಿದ್ದೀಯಾ? ಕೃಷ್ಣಾರಾಯರಿಗೆ ವಯಸ್ಸು ಸ್ವಲ್ಪ ಹೆಚ್ಚಾಗಿದೆ; ಇದೊಂದು ಬಿಟ್ಟರೆ ಅವರು ಭಾರಿ ಒಳ್ಳೆ ಮನುಷ್ಯ. ಈ ಪ್ರಾಂತದಲ್ಲಿ ಅವರು ತುಂಬ ಘನವಂತರು. ಮನೆಯಲ್ಲೂ ನಾಲ್ಕು ದುಡ್ಡು ದುಗ್ಗಾಣಿ ಇದ್ದವರು. ಹೊಲ ಮನೆ ಆಸ್ತಿ ಪಾಸ್ತಿ ಬೇಕಾದಷ್ಟು ಇದೆ. ತಿನ್ನಲು ಉಣ್ಣಲು ದಾರಿದ್ರ್ಯ ಇಲ್ಲ. ಕೃಷ್ಣಾರಾಯರು ತಾವಾಗಿ ಮುಂದೆ ಬಿದ್ದಿರುವಾಗ ಈ ಸುಸಂಧಿಯನ್ನು ಚೆಲ್ಲಿಕೊಡುವದು ಸರಿಯಲ್ಲ. ನಾವು ಬಡವರು. ಇದರಂತೆ ಒಳ್ಳೆ ನಂಟಸ್ತಿಕೆ ಎಲ್ಲಿ ಸಿಗಬೇಕು.?"

ವಾದವೇನೋ ಯುಕ್ತಿ ಯುಕ್ತವೇ ಇತ್ತು. ಆದರೆ ಆ ಚೋಲು ತೊಗಲಿನ ಕಾಮುಕ ಲೋಲುಪ ವೃದ್ಧನ ಕೈಗೆ ನನ್ನ ಇಷ್ಟು ಚೆಲುವೆ ತಂಗಿಯನ್ನು ಒಪ್ಪಿಸಲು ಮನಸು ಒಡಂಬಡಲಿಲ್ಲ. ಆ ಮುದುಕನ ಹಲ್ಲಿಲ್ಲದ ಬಾಯಿಯಿಂದ ಹೊರಡುತ್ತಿದ್ದ ಜೊಲ್ಲು ಸುರುಕ ಮಾತುಗಳು ಈಗಲೂ ನನ್ನ ಕಿವಿಯಲ್ಲಿ ದನಿಗುಡುತಿವೆ. ಅವನ

ಗುಳಿ ಸಾರಿದ ಕಣ್ಣುಗಳ ಲುಬ್ಧ ದೃಷ್ಟಿ ಈಗಲೂ ನನ್ನ ಹೃದಯದಲ್ಲಿ ನಟ್ಟು ನಿಂತಿದೆ!

ತಾಯಿಗೆ ಹೇಳಿಬಂದೆ. "ಇಷ್ಟು ದಿನ ತಡೆದದ್ದಾಯಿತು, ಇನ್ನೂ ಕೆಲ ದಿನ ತಡೆ. ನಾನು ಒಳ್ಳೆಯ ವರನನ್ನು ಹುಡುಕಲು ಪ್ರಯತ್ನ ಮಾಡುವೆ. ನನ್ನ ಗೆಳೆಯರಲ್ಲಿ ಯಾರಾದರೂ ಇದ್ದರೆ ನೋಡುವೆ."

ಸರಿ, ಕಲಕತ್ತೆಗೆ ಮರಳಿ ನನ್ನ ಗೆಳೆಯರ ಗುಂಪಿನಲ್ಲಿ ವರಾನ್ವೇಷಣವನ್ನು ಪ್ರಾರಂಭಿಸಿದೆ. ತಾಯಿ ಹಳ್ಳಿಯಲ್ಲಿ ನಿರೀಕ್ಷೆ ಮಾಡತೊಡಗಿದಳು.

ನಾನು ಹುಡುಕುವದರಲ್ಲಿ ಏನೂ ಲೋಪ ಮಾಡಲಿಲ್ಲ. ದೇಶದಲ್ಲಿ ವರ ಜನರ ದುರ್ಭಿಕ್ಷವೂ ಇರಲಿಲ್ಲ. ಆದರೂ ವರ ದೊರಕಲಿಲ್ಲ. ಏನೂ ವರದಕ್ಷಿಣೆ ತೆಗೆದುಕೊಳ್ಳದೆ ನನ್ನ ತಂಗಿಯ ಕೈ ಹಿಡಿಯಲು ಸಿದ್ಧನಾದ ಫಲೇಚ್ಛೆಯಿಲ್ಲದ ಸಚ್ಚರಿತ್ರ ಯುವಕ ಒಬ್ಬನೂ ಸಿಗಲಿಲ್ಲ. ಎಲ್ಲರೂ ಪರಿಣಾಮದರ್ಶಿಗಳು. ನಾಳಿನ ವಿಚಾರ ಹಚ್ಚಿಕೊಳ್ಳದೆ ಒಂದು ಹೆಜ್ಜೆ ಕೂಡ ಮುಂದಿಡುವ ಧೈರ್ಯ ಯಾರಿಗೂ ಇದ್ದಿಲ್ಲ. ಎಲ್ಲರೂ ನನ್ನ ತಂಗಿಯ ಗುರುತರ ಭಾರವನ್ನು ಹೊರಲು ಒಪ್ಪುವವರೆ; ಆದರೆ ಭಾರ ಹೊರುವ ಕೂಲಿ ಮಾತ್ರ ಸಮೀಚೀನವಾಗಿ ಕೈಗೆ ಬೀಳಬೇಕು. ಅದನ್ನು ಕೊಡುವ ಸಾಮರ್ಥ್ಯ ಆಗ ನಮ್ಮಲ್ಲಿರಲಿಲ್ಲ. ವರದಕ್ಷಿಣೆ ತೆಗೆದುಕೊಳ್ಳದೇ ಮದುವೆಯಾಗಲು ಒಪ್ಪುವವರೂ ಒಬ್ಬಿಬ್ಬರು ಇದ್ದರು. ಆದರೂ ನಂಟಸ್ತಿಕೆ ಕೂಡಿಬರಲಿಲ್ಲ. ಒಬ್ಬನಿಗೆ ವಿದ್ಯಾವತಿ ಬೇಕಾಗಿದ್ದಳು. ಇನ್ನೊಬ್ಬ ಅಪೇಕ್ಷಿಸುತ್ತಿದ್ದ ಅನಿಂದ್ಯ ಸುಂದರಿಯನ್ನು. ನನ್ನ ತಂಗಿಗೆ ಓದು ಬರಹ ಕಲಿಸಲು ಅನುಕೂಲವಾಗಿದ್ದಿಲ್ಲ; ಅವಳ ಸೌಂದರ್ಯದಲ್ಲಿಯೂ ಒಂದು ಲೋಪವಿತ್ತು. ಮುಡಿಬಿಚ್ಚಿ ಕೆದರಿಬಿಟ್ಟರೆ ಅದು ತೊಡೆಯನ್ನು ಸೋಂಕುತಿದ್ದಿಲ್ಲ.

ಇತ್ತ ನಾನು ಎಡೆಬಿಡದೆ ವರಾನ್ವೇಷಣದಲ್ಲಿ ತೊಡಗಿದೆ. ಅತ್ತ ತಾಯಿಯೂ ಎಡೆಬಿಡದೆ ನಿರೀಕ್ಷಣೆಯಲ್ಲಿ ತೊಡಗಿದಳು. ಇದೇ ರೀತಿಯಲ್ಲಿ ಎಷ್ಟು ಕಾಲ ಕಳೆಯುತಿತ್ತೋ ಗೊತ್ತಿಲ್ಲ. ಆದರೆ ಅದಕ್ಕೂ ಒಂದು ಕೊನೆ ಬಂತು. ಒಂದು ದಿನ ನಮ್ಮ ಮಾವನ ಊರಿಂದ ಒಬ್ಬ ಆಳು ಬಂದು ಸುದ್ದಿ ಕೊಟ್ಟ–

"ಉಳಿಸಿರಿ ರಕ್ಷಿಸಿರಿ, ಡಾಕ್ಟರ್ ಸಾಹೇಬ!"

ತಾರಸ್ವರದಲ್ಲಿ ಚೀರುತ್ತ ಆ ಕ್ರಾಂತಿಕಾರಿ ಯುವಕ ಓಡಿ ಬರುತಿದ್ದ. ಅವನ ಬೆನ್ನಟ್ಟಿ ಅದೇ ಕಪ್ಪನ್ನ ಕಟ್ಟಾಳು ಬರುತಿದ್ದ. ಆ ಭಾರೀ ಮುಖದಲ್ಲಿ ಕಣ್ಣುಗಳೆರಡೂ ಧಗಧಗನೆ ಉರಿಯುತಿದ್ದವು. ಅವುಗಳಲ್ಲಿ ಎಂಥ ಉನ್ಮತ್ತ

ಹಿಂಸ್ರದೃಷ್ಟಿ. ಅವನ ಕತ್ತಿನ ಗಾಯ ಕೆಂಪಾಗಿತ್ತು. ದೊಡ್ಡ ಕೆಂಡ ನಿಶ್ಯಬ್ದವಾಗಿ ಉರಿಯುವಂತೆ ತೋರುತಿತ್ತದು.

"ಯಾರು ನಿನ್ನ ಅಪ್ಪ ನಿನ್ನನ್ನು ಬಚಾಯಿಸುತ್ತಾನೆ ನೋಡುವೆ! ನನ್ನ ಮಗಳನ್ನು ಅಪಹರಿಸಿದ್ದೀರಿ, ನನ್ನ ಅಂಗಡಿಯನ್ನ ಅಪಹರಿಸಿದ್ದೀರಿ– ನಿಮ್ಮನ್ನ ಬಿಡಬೇಕೆ? ಕಟಕಟನೆ ಜಗಿದು ತಿಂದುಹಾಕುವೆ ನಿನ್ನನ್ನ! ಪಾಜೀ ಹರಾಮ, ಸುವರ–"

ಆ ಕರಾಳ ಪುರುಷ ಒಮ್ಮೆಲೆ ಹಾರಿ ಯುವಕನ ಕೊರಳು ಹಿಸುಕತೊಡಗಿದ.

"ಅಯ್ಯೋ ಬಿಡಿಸಿರಿ ಬಿಡಿಸಿರಿ ನನ್ನ–"

ಆರ್ತನಾದದಿಂದ ಸಮಸ್ತ ಅಂಧಕಾರವೂ ತಳಮಳಿಸಿತು. ಯುವಕನ ಮುಖ ಆರಕ್ತವಾಯಿತು.

ಕ್ಷಣಮಾತ್ರದಲ್ಲಿ ಬಿಂದಿ ಪ್ರತ್ಯಕ್ಷಳಾದಳು. ಅವಳು ಆ ಕರಿ ಮನುಷ್ಯನ ಕೂದಲನ್ನು ಜಗ್ಗುತ್ತ ಚೀತ್ಕಾರ ಮಾಡಿದಳು, "ಬಿಡು ಅವನ್ನ, ಬಿಡು, ಬಿಡುವಿಯೋ ಇಲ್ಲವೊ?"

ಅವಳ ಜಗ್ಗಾಟದ ಭರಕ್ಕೆ ಅವನು ಯುವಕನನ್ನು ಬಿಟ್ಟು ಹಿಂತಿರುಗಿ ನಿಂತು.

"ಯಾರೇ ನೀನು?"

"ನಾನು ಯಾರೇ ಇರಲಿ, ನೀನು ಅವನನ್ನು ಬಿಟ್ಟುಬಿಡು. ನಿನ್ನ ಕಾಲು ಹಿಡಿಯ ಬಿಂದಿ ಅವನ ಪಾದಕ್ಕೆರಗಿದಳು.

ಕಿಡಿಕಿಯಿಂದಾಚೆಗೆ ನೋಡಿದೆ. ಕೃಷ್ಣಪಕ್ಷದ ಕ್ಷೀಣ ಚಂದ್ರನು ಮೋಡಗಳ ತಮಸ್ಸನ್ನು ಭೇದಿಸಿ ಮೆಲ್ಲಮೆಲ್ಲನೆ ಹಣುಕಿಕ್ಕುತಿದ್ದಾನೆ. ಅವನ ಮುಖದಲ್ಲಿ ಹೆಣದ ನಗೆ. ಈ ಜೀವಂತ ಪೃಥ್ವಿಯ ಕೆಸರೆದ್ದ ರೂಪವನ್ನು ಕಂಡು ಆ ಮೃತಜ್ಯೋತಿ ಅಟ್ಟಹಾಸ ಮಾಡುವಂತಿತ್ತು. ಹತ್ತಿರ ಕಾಲ ಪುರುಷನ ಉಜ್ವಲ ನಕ್ಷತ್ರಗಳ ಜೋಡೊಂದು ಕ್ಷಣಕಾಲ ಮುಖತೋರಿಸಿ ಪುನಃ ಮೋಡಗಳ ಮರೆಯಲ್ಲಿ ಅವಿತುಕೊಂಡಿತು. ದೊಡ್ಡ ಮೋಡವೊಂದು ತೇಲಿಬಂದು ಎಲ್ಲವನ್ನೂ ಮುಸುಕಿ ಬಿಟ್ಟಿತು. ಚಂದ್ರನೂ ಮರೆಯಾದ, ಮಂದವಾದ ಬೆಳದಿಂಗಳೂ ನಷ್ಟವಾಯಿತು.

ಮಳೆಗರೆದು ಕರೆದು ಸೋತಿದ್ದ ಗಂಭೀರ ರಾತ್ರಿಯ ಅಂಧಕಾರಮಯ

ಶಾಂತಿಯನ್ನು ಭಗ್ನಗೊಳಿಸಿ ಕಪ್ಪೆಯ ಮೃತ್ಯುಕಾತರ ಆರ್ತಧ್ವನಿ ತಡೆತಡೆದು ಕಿವಿಗೆ ಬೀಳುತಿತ್ತು. ಹೊರಗೆ ಎಲ್ಲೆಲ್ಲೂ ಕತ್ತಲು ಕೋಣೆಯಲ್ಲಿ ದೀಪದ ಕುಡಿಗೆ ಪ್ರದಕ್ಷಿಣೆ ಹಾಕುತ್ತ ಪತಂಗವೊಂದು ಮತ್ತೂ ಭ್ರಮಿಸುತಿತ್ತು-ವಿಮಾನದಂತೆ.

ಈ ದೀಪ ಮತ್ತು ಈ ಪತಂಗ!

ತನ್ನ ತಂಗಿ !.........

ಸುದ್ದಿ ಬಂದಿತ್ತು-ಅವಳನ್ನು ಪುಂಡರು ಅಪಹರಿಸಿಕೊಂಡು ಹೋಗಿದ್ದರಂತೆ. ನಮ್ಮ ಮುದುಕಿ ತಾಯಿ ಕೂಡ ಅವರ ಅತ್ಯಾಚಾರದಿಂದ ಪಾರಾಗಿರಲಿಲ್ಲವಂತೆ.

ನನ್ನ ತಾಯಿ-ತಂಗಿಯರನ್ನು ಅತ್ತ ಪುಂಡರು ಅಪಹರಿಸುತ್ತಿದ್ದಾಗ ಇಲ್ಲಿ ನಾನೇನು ಮಾಡುತ್ತಿದ್ದೆ? ಮೆಡಿಕಲ್ ಕಾಲೇಜಿನಲ್ಲಿ ಒಬ್ಬ ಸುಂದರಿ ದಾದಿಯೊಡನೆ ಏನೋ ನೆವ ಮಾಡಿಕೊಂಡು ವಾರ್ತಾಲಾಪದಲ್ಲಿ ತೊಡಗಿದ್ದೆ. ಅವಳೊಡನೆ ಹರಟೆ ಹೊಡೆಯಲು ಎಲ್ಲರೂ ಹಾತೊರೆಯುವವರೆ. ನಾನಾದರೂ ಸುಸಂಧಿಯನ್ನು ಸಾಧಿಸಿ ವಾರ್ತಾಲಾಪ ಮಾಡುತ್ತಿದ್ದೆ. ವಾರ್ತಾಲಾಪವೆನ್ನುವ ಬದಲು ಅದು ಪ್ರೇಮಾಲಾಪವೆಂದು ಹೇಳಿದರೆ ಅಷ್ಟೇನೂ ಉತ್ಪ್ರೇಕ್ಷೆಯಾಗದು.

ಎಷ್ಟೆಷ್ಟು ಸಂಗತಿಗಳು ನೆನಪಿಗೆ ಬರುತಿವೆ! ವಿಚಾರ ಮಾಡಿದರೆ ಏಳು ಮಕ್ಕಳನ್ನು ಕಳೆದುಕೊಂಡ ಆ ಸಿಫಿಲಿಸ್ ರೋಗಿ ತಂದೆ, ಕವಿತಾ ಮುಖರನಾದ ಪ್ರೇಮಿಕ ಕವಿ, ವಿವಾಹಾತುರನಾದ ಆ ಸುಕ್ಕು ಮೈಯ ಮುದುಕ, ಹೆಂಗಸರನ್ನು ಅಪಹರಿಸಿದ ಆ ಪುಂಡರು, ಮತ್ತು ದಾದಿಯ ಅನುಗ್ರಹಕ್ಕೆ ಸೆರಗೊಡ್ಡಿದ ನಾನು- ಎಲ್ಲರೂ ಒಂದೇ ಅಲ್ಲವೇ? ಅಂಥ ಅಂತರವೇನೂ ತೋರುವದಿಲ್ಲ ನನಗೆ.

ಆದರೆ, ಇಲ್ಲ, ನಾನು ಎಲ್ಲವನ್ನೂ ಮರೆತು ಬಿಡಲು ಹಾತೊರೆಯುತ್ತೇನೆ. ನಿಶ್ಶೇಷನಾಗಿ, ಕುರುಹು ಕೂಡ ಉಳಿಯದಂತೆ ಎಲ್ಲವನ್ನೂ ನೆನಪಿನಿಂದ ಅಳಿಸಿ ಒಗೆಯಬೇಕೆನ್ನುತ್ತೇನೆ. ಆದರೆ ಅದು ನನ್ನಿಂದಾಗಿಲ್ಲ. ನನ್ನ ಸ್ಮರಣ ಶಕ್ತಿ ಅಗಾಧ ಏನೊಂದೂ ಮರೆತು ಹೋಗುವಂತಿಲ್ಲ.

ಹುಡುಗನಾಗಿದ್ದಾಗ ಒಮ್ಮೆ ಒಂದು ಹುಚ್ಚು ನಾಯಿಯನ್ನು ಬಡಿದು ಕೊಲ್ಲುವದನ್ನು ಕಂಡಿದ್ದೆ. ಆದರೆ ಒಡೆದ ತಲೆ, ನೆತ್ತರು ಬಸಿಯುತಿದ್ದ ಕಣ್ಣು, ಈಗಲೂ ಕಣ್ಣಿಗೆ ಕಟ್ಟಿದಂತಿವೆ. ನಾಯಿಯ ರೂಪ ಈಗಲೂ ಮನಸ್ಸಿನಲ್ಲಿ ಅಚ್ಚಳಿಯದಂತೆ ಒತ್ತಿದೆ. ಕಪ್ಪು ಬಣ್ಣ, ಒಂದುಕಿವಿ ಇನ್ನೊಂದಕ್ಕಿಂತ ತುಸು ಹೆಚ್ಚು ಜೋಲು, ಬಾಲದ ಬಳಿ ಒಂದು ಗಾಯ, ಅದರ ಮೇಲೆ ಕುಳಿತು ಕುಕ್ಕುವ

ಒಂದು ದೊಡ್ಡ ನೋಟ, ಎಲ್ಲವೂ ಮನಸ್ಸಿನಲ್ಲಿ ಉಳಿದುಕೊಂಡಿದೆ. ಒಂದೂ ಮರೆತಿಲ್ಲ. ಎಲ್ಲಿ, ಯಾವಾಗ, ಯಾವ ತಗಣೆಯನ್ನು ನಾನು ಒರೆದು ಕೊಂದಿದ್ದೇನೆ, ಅದರ ಆಕಾರ ಹೇಗಿತ್ತು ಇತ್ಯಾದಿಯಾಗಿ ಎಲ್ಲವೂ ಸ್ಪಷ್ಟವಾಗಿ ನೆನಪಿನಲ್ಲಿದೆ.

ಈ ನಿಸ್ತಬ್ಧ ರಾತ್ರಿಯಲ್ಲಿ ಕಣ್ಣಿಗೆ ಕಣ್ಣು ಹತ್ತದೆ ಇರುವ ನನ್ನ ಸಂಗಡ ಸದಾ ಜಾಗೃತವಾಗಿರುವ ಒಂದೇ ಒಂದು ವಸ್ತುವೆಂದರೆ ನನ್ನ ಸ್ಮರಣಾ ಶಕ್ತಿ.

ಅದೊಂದು ಪ್ರೇತ.

ತಂದೆಯವರ ಮುಖ ಕಣ್ಮುಂದೆ ನಿಂತಂತಾಗುತ್ತದೆ. ಶಾಂತ, ಧೀರ, ಶೀರ್ಣ ಮುಖ. ಬಡತನವೆಂದು ಯಾವ ಅಸಂತೋಷವನ್ನು ಅವರು ಪ್ರದರ್ಶಿಸಿದ್ದಿಲ್ಲ. ಜೀವನದಲ್ಲಿ ಕೊನೆಯ ದಿನದವರೆಗೂ ತಮ್ಮ ಕರ್ತವ್ಯವನ್ನು ಪರಿಪಾಲಿಸುತ್ತಲೇ ಹೋಗಿದ್ದರು. ಮೃತ್ಯು ಕೂಡ ಅವರಿಗೆ ಯಾವ ಕಷ್ಟವನ್ನೂ ಕೊಡಲಿಲ್ಲ. ಬಳಲಿದವರು ಮಲಗಿ ನಿದ್ದೆ ಹೋದಂತಿತ್ತು.

ಒಂದು ಭಾಷಾತೀತ ಚೀತ್ಕಾರ ಅಂಧಕಾರವನ್ನು ಸೀಳಿ ಹೋಯಿತು.

ಗೂಗೆಯ ಕೂಗೇನೊ ಅದು? ವ್ಯಾಕುಲ ಕ್ರಂದನದಂತಿದೆ. ಲ್ಯಾಪಲಂಡಿನ ಹಿಮಶೀತಲವಾದ ಕೊಳಚೆ ಬಯಲಲ್ಲಿ ಇಬ್ಬರು ಅಪರಿಚಿತ ಯುವಕ-ಯವತಿಯರು ನಿಂತಿರುವರಲ್ಲ? ಸುತ್ತಲೂ ಮಂಜು ಮುಸುಕಿದೆ; ಒಬ್ಬರಿಗೆ ಇನ್ನೊಬ್ಬರ ಮಾತು ತಿಳಿಯದು. ಮಂಜು ಕ್ಷಣಕ್ಷಣವೂ ದಟ್ಟವಾಗುತಿದೆ. ಆ ಇಬ್ಬರ ಹೃದಯದ ವ್ಯಾಕುಲವೇ ಗಂಭೀರ ರಾತ್ರಿಯ ಇರುಳು ಹಕ್ಕಿಯ ಕರುಣಸ್ವರದಲ್ಲಿ ಮೂರ್ತವಾಗಿರಬಹುದೆ?

"ಡಾಕ್ಟರ್ ಸಾಹೇಬ!"

ಬೆಚ್ಚಿಬಿದ್ದು ನೋಡಿದೆ. ಮತ್ತೆ ಆ ಶ್ರೀಮಂತ ಗೃಹಸ್ಥ-ಮುಪ್ಪಿನ ಅತ್ಯಾಚಾರ ದಿಂದ ತಪ್ಪಿಸಿಕೊಳ್ಳಲು ಮಹಾ ಕಾಲನಿಗೆ ಚಳ್ಳಿಕಾಯಿ ತಿನ್ನಿಸಿ ಎದೆಗೆ ರಿವಾಲ್ವರಿನಿಂದ ಗುಂಡಿಕ್ಕಿಕೊಂಡಿದ್ದನಲ್ಲ. ಆ ಮನುಷ್ಯ.

"ನೋಡಿ ಹೇಳಿರಿ, ಡಾಕ್ಟರ್ ಸಾಹೇಬ, ನನ್ನ ಮುಖ ಲಕ್ಷಣವಾಗಿದೆ. ಹೌದೋ ಅಲ್ಲೋ?"

ಅವನು ಸಿಳ್ಳು ಹಾಕತೊಡಗಿದವನು.

"ಚೆನ್ನಾಗಿದೆ"

"ಕೂದಲು ಹಣ್ಣಾಗಿಲ್ಲವಲ್ಲ?"

"ಇಲ್ಲ"

ಮನುಷ್ಯ ಹೊರಟೆದ್ದು ಹೋದ.

ಶ್ಯಾಮ ವರ್ಣದ ಸುಂದರಿ ಬಂದು ನಿಂತಳು.

"ಅಸಾಧ್ಯ ಉರಿ, ಡಾಕ್ಟರ್ ಸಾಹೇಬ, ಅಸಾಧ್ಯ ಉರಿ" ಅವಳ ಕಾಲು, ಹೊಟ್ಟೆ, ಎದೆ ಇವೆಲ್ಲ ಕಡೆಗಳಲ್ಲಿಯೂ ಗಾಯಗಳ ಕೀವಿನಿಂದ ದುರ್ಗಂಧ ಇಡುಗುತಿದೆ. ಎಡ ಮೊಲೆ ಬಾತು, ಕೀವು ಸುರಿಯುತಿದೆ.

"ಅಬ್ಬಾ ಯಾತನೆಯೇ! ಅಯ್ಯೋ ಸುಟ್ಟು ಹೋಯಿತು. ಸರ್ವಾಂಗವೂ ಸುಟ್ಟು ಹೋಯಿತು ನನ್ನದು."

ಪಿಟ್ಟೆನ್ನದೆ ಕುಳಿತು ಕೇಳುತಿದ್ದೆ.

"ಈ ಉರಿಯನ್ನು ಹೇಗಾದರೂ ಶಮನ ಮಾಡಿರಿ. ನಿಮ್ಮ ಕಾಲಿಗೆ ಬೀಳುತ್ತೇನೆ."

"ಇದಕ್ಕೆ ನನ್ನಲ್ಲಿ ಔಷಧವಿಲ್ಲ."

"ಇಲ್ಲ, ಸುಮ್ಮನೆ ಕಾಡಬೇಡಿರಿ. ನಿಮಗೆ ಗೊತ್ತಿದೆ. ಇಷ್ಟು ದೊಡ್ಡ ಡಾಕ್ಟರರು ನೀವು, ನಿಮಗೆ ಗೊತ್ತಿಲ್ಲದೆ ಉಂಟೆ?"

ಏನು ಹೇಳಲಿ? ಒಮ್ಮೆ ತೋರಿತು, ಗೀತೆಯ ಒಂದು ಶ್ಲೋಕವನ್ನು ಜಪಿಸಲೇ ಎಂದು ಯಾರಿಗೆ ಗೊತ್ತು, ಏನಾದರೂ ಸಮಾಧಾನ-

"ವ್ಯಾಕ್, ವ್ಯಾಕ್-"

ಕುಡುಕ ಬಂದ. ಅವನು ಆ ಹುಡುಗಿಯ ಮೈ ಮೇಲೆಯೆ ಕಾರಿಕೊಂಡ.

"ಅಣ್ಣಾ, ತುಸು ನೀರು ಕೊಡಲಾರಿಯಾ? ಸ್ವಲ್ಪ ಕೊಡು ಕಾಲೆಲ್ಲ ಸೆಳೆಯುತಿದೆ."

ನನ್ನ ತಮ್ಮ ತಂಗಿಯರ ಹಾಹಾಕಾರ ಈಗಲೂ ಇದೆಲ್ಲಿಂದ ಕೇಳಿಸುತಿದೆ? ಕಾಲರಾ ರೋಗಿಗಳ ಆಕಂಠತೃಷೆ ಇನ್ನೂ ಹಿಂಗಿಲ್ಲವೆ?

ರುಂಡವಿಲ್ಲದ ಕಬಂಧ ಆ ಸ್ಥೂಲಾಂಗಿನಿಯ ಕೊರಳನ್ನು ತೋಳಿಂದ ಬಳಸಿ, ಸಾಗಿ ಬಂತು. ಅಷ್ಟರಲ್ಲೆ ಅದರ ಮುಖದಲ್ಲಿ ವಿಕಟ ಹಾಸ.

"ಮೋಸ, ಮೋಸ ಮಾಡಿದ್ದಾಳೆ ನಿನಗೆ! ಬಿಟ್ಟು ಬಿಡೋ! ಬಿಟ್ಟು ಬಿಡು ಅವಳನ್ನ. ಇಸ್ಸಿ, ಎಂಥ ವಿಕಾರ ಹೆಂಗಸಪ್ಪಾ ಇವಳು! ಅಸಹ್ಯ! ನಾರೀ ಮಾಂಸವೆಂದರೆ ನನಗೆ ತುಂಬ ಪ್ರೀತಿ ನಿಜ; ಆದರೂ ಈ ಪ್ರೇತಿನಿಯನ್ನು ಕಟ್ಟಿಕೊಳ್ಳಲು ನನಗೂ ಓಕರಿಕೆಬರುತ್ತದೆ. ಬಿಟ್ಟುಬಿಡು, ಬಿಟ್ಟುಬಿಡು–"

ಕಬಂಧ ಕ್ಷಣದೊಳಗೆ ಸ್ಥೂಲಾಂಗಿನಿಯನ್ನು ಬಿಟ್ಟು ದೂರ ಸರಿಯಿತು.

ರುಂಡ ನಗತೊಡಗಿತು, "ಹಾಹಾಹಾಹಾ!"

"ಬಿಡು ಬಿಡು, ಬಿಡು ನನ್ನ!"

ಆ ಮೈ ಸುಟ್ಟುಕೊಂಡು ಸತ್ತ ಶ್ಯಾಮಲೆಯನ್ನು ಕವಿ ಬಿಗಿದಪ್ಪಿಕೊಂಡಿದ್ದ. ಅವನ ಒಡೆದ ಹಣೆಯಿಂದ ಹೊರಬಿದ್ದ ಮಿದುಳ ಮಾಲೆ ಹುಡುಗಿಯ ಹಣೆಯನ್ನು ಸ್ಪರ್ಶಿಸುತಿತ್ತು. ಎಷ್ಟು ಹೆಣಗಿದರೂ ಅವಳನ್ನು ಬಿಡಲೊಲ್ಲ.

ಕೋಣೆಯ ಒಂದು ಮೂಲೆಯಲ್ಲಿ ನಿಂತು ಕುಷ್ಠರೋಗಿ ಹಿ–ಹಿ ನಗುತಿದ್ದ. ಅವನ ಬಾಯಿಯಿಂದ ವಿಷಭರಿತವಾದ ಜೊಲ್ಲು ಸುರಿದು ಕೋಣೆಯಲ್ಲಿ ಪ್ರವಹಿಸತೊಡಗಿತು.

"ಬೇಕಾದ್ದು ಬರಲಿ, ಆ ನಿರ್ಮಲನನ್ನು ಒಂದು ಕೈ ನೋಡಿಯೇ ತೀರುವೆ. ಮುಖ್ಯ. ಹಣಬೇಕು, ಹಣ–"

"ನಿಜ, ನಿಜ ಹೇಳಿದೆ ಅಣ್ಣಾ, ಹಣ ಬೇಕು, ಹಣ–ಹಣ–ಹಣ–ಹಣ ಎಲ್ಲಿದೆ?"

ಆ ಕಪ್ಪು ಮನುಷ್ಯ ಕೈಯೆತ್ತಿ ಶೂನ್ಯದಲ್ಲಿ ಹುಡುಕತೊಡಗಿದ,

ಹಾವಿನ ಬಾಯಲ್ಲಿ ಸಿಕ್ಕಿದ್ದ ಕಪ್ಪೆ ಒಂದು ಅಂತಿಮ ಚೀತ್ಕಾರ ಮಾಡಿ ಒಮ್ಮೆಲೆ ತಣ್ಣಗಾಯಿತು.

ಕ್ಯಾಲಂಡರ ಚಿತ್ರದ ಮೈಯೆಲ್ಲ ಕುಷ್ಠ!

✦✦✦

ಶ್ರೀ ಪಾಡಿಗಾರು ವೆಂಕಟರಮಣಾಚಾರ್ಯ, ಪಿ.ವಿ. ಆಚಾರ್ಯ ಅವರು ೧೯೧೫ ರಿಂದ ೧೯೯೨ರ ವರೆಗಿನ ಅವಧಿಯಲ್ಲಿ ಕವಿ, ಲೇಖಕ, ಚಿಂತಕ, ವಿಮರ್ಶಕ ಹಾಗೂ ಕಸ್ತೂರಿ ಡೈಜೆಸ್ಟ್ ಪತ್ರಿಕೆಯ ಸಂಪಾದಕ ಎಂದು ಕರ್ನಾಟಕದಲ್ಲಿ ಪ್ರಖ್ಯಾತರಾಗಿದ್ದರು. ಕವಿಯಾಗಿ ಅವರು ಸೃಷ್ಟಿಸಿದ ಭಾವಲೋಕ, ಲೇಖಕ ಮತ್ತು ಚಿಂತಕನಾಗಿ ಅವರು ಪ್ರಕಟಪಡಿಸಿದ ಸಾಹಿತ್ಯ ಕೃತಿಗಳೂ ಕಸ್ತೂರಿಯ ಸಂಪಾದಕನಾಗಿ ಅವರು ರೂಪಿಸಿದ ಡೈಜೆಸ್ಟ್ ಪತ್ರಿಕೆ ಅಂದಿಗೂ ಇಂದಿಗೂ ಮೌಲಿಕ ಕೃತಿಯಾಗಿ ಕಾಣುತ್ತಿವೆ. ಪಾ.ವೆಂ. ಅವರ ಬದುಕು ಮತ್ತು ಬರಹಗಳ ವೈಶಿಷ್ಟ್ಯ ನಮ್ಮ ಮಟ್ಟಿಗೆ ಅಪೂರ್ವವೆಂದೇ ತೋರುತ್ತದೆ. ವೈಚಾರಿಕ ಹಾಸ್ಯ ಪ್ರವೃತ್ತಿ ಅಧ್ಯಯನಶೀಲ ಧ್ಯೇಯ ಧೋರಣೆ, ಸರಳ ಮತ್ತು ಸ್ವಾರಸ್ಯಕರ ಶೈಲಿ ಸಂಕೀರ್ಣವಾದುದು. ಸರಳಗೊಳಿಸುವ, ವಿಸ್ತಾರವನ್ನು ಸಾರಾಂಶಗೊಳಿಸುವ ಅನುವಾದಿಸುವ ಅವರ ಗ್ರಹಣಶಕ್ತಿ ಕನ್ನಡ ಬರಹಕ್ಕೆ ಅವರಿಂದ ಸಂದ ವಿಶಿಷ್ಟ ಗುಣಗಳು.

ಸ್ವಾತಂತ್ರ್ಯ ಪೂರ್ವದಲ್ಲಿ ಬಂಗಾಳಿಯ ಶರತ್ ಚಂದ್ರ, ಬಂಕಿಮ ಚಂದ್ರ, ಮತ್ತು ರವೀಂದ್ರನಾಥ ಟಾಗೋರ ಅವರ ಹಲವು ಕೃತಿಗಳು ಕನ್ನಡಕ್ಕೆ ಅನುವಾದಗೊಂಡಿವೆ. ಪಾ.ವೆಂ ಆಚಾರ್ಯರು ಬಂಗಾಳಿಯ ಹೊಸ ಲೇಖಕರೊಬ್ಬರನ್ನು–ಬಲಾಯಿಚಂದ ಮುಖ್ಯೋಪಾಧ್ಯಾಯರವರನ್ನು–ಕನ್ನಡಕ್ಕೆ ಪರಿಚಯಿಸಿದರು.

ಬಲಾಯಿಚಂದರು ತಮ್ಮ ಕಥನ ತಂತ್ರ ಮತ್ತು ಪಾತ್ರಗಳ ಅಂತರಂಗ ಶೋಧನದಿಂದ ಖ್ಯಾತರಾದ ಲೇಖಕ. ವಾಸನಾ ನೀಳ್ಗತೆಯಲ್ಲೂ ಒಂದು ವಿನೂತನ ಕಥನ ತಂತ್ರ ಕಾಣಿಸುತ್ತದೆ. ವಾಸನಾದ ನಿರೂಪಕ ಒಬ್ಬ ಸರಕಾರಿ ಆಸ್ಪತ್ರೆಯ ಡಾಕ್ಟರ್. ತನ್ನ ಕರ್ತವ್ಯಕ್ಕಾಗಿ ನೂರಾರು ಹೆಣಗಳ ಮರಣೋತ್ತರ ಪರೀಕ್ಷೆ ಮಾಡಿದ್ದಾನೆ. ನಿದ್ರೆ ಬರದ ಒಂದು ರಾತ್ರಿ ಅವನಿಂದ ಸಿಗಿಸಿಕೊಂಡ ಹಲವು ಪಾತ್ರಗಳು ಅವನ ಬಳಿ ಬಂದು ತಮ್ಮ ಕತೆ ವಿವರಿಸುತ್ತವೆ. ಇಲ್ಲಿ ಭಗ್ನ ಪ್ರಣಯ, ದಾಂಪತ್ಯೇತರ ಸಂಬಂಧ, ಬಡತನ, ಹೆಣ್ಣಿನ ಬಣ್ಣವನ್ನು ಕುರಿತ ಪೂರ್ವಗ್ರಹ, ಕೌಟುಂಬಿಕ ಕ್ರೌರ್ಯ, ಬಾಲ್ಯ ವಿವಾಹಗಳಿಗೆ ಸಂಬಂಧಿಸಿದ ಹಲವು ದಾರುಣ ಕತೆಗಳಿವೆ. ವಿದೇಶಿ ವಸ್ತುಗಳ ಬಹಿಷ್ಕಾರ ಚಳುವಳಿಯಿಂದ ಒಬ್ಬನ ಬಟ್ಟೆ ಅಂಗಡಿ ದಿವಾಳಿಯಾದ ಪ್ರಸ್ತಾಪ – ಇದು ಸ್ವಾತಂತ್ರ್ಯ ಪೂರ್ವದ ಕತೆ ಎಂಬುದನ್ನು ಸೂಚಿಸುತ್ತದೆ. ಪುರುಷ ಪ್ರಧಾನ ಸಮಾಜದ ಗಂಡು ಹೆಣ್ಣಿನ ಸಂಕೀರ್ಣ ಸಂಬಂಧಗಳನ್ನು ಈ ನೀಳ್ಗತೆ ಅನಾವರಣ ಗೊಳಿಸುತ್ತದೆ. ಸೇಡು ಹಾಗೂ ಕೇಡಿನ, ಭದ್ರಲೋಕದ ಅಭದ್ರ ದಾಂಪತ್ಯ ವ್ಯವಸ್ಥೆಯ ವಿವಿಧ ಕರಾಳ ಮುಖಗಳನ್ನು ಈ ನೀಳ್ಗತೆ ಚಿತ್ರಿಸುತ್ತದೆ.



ಪಾ.ವೆಂ. ಆಚಾರ್ಯ

ಕಥಾಸಂಕಲನ

ISBN : 978-93-87979-04-8

ಬೆಲೆ : ₹ 65/-

ಸಪ್ನ 1967 ರಿಂದ

www.sapnaonline.com